
ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೧೭-೫-೪೯



ಬೆಲೆ ಎರಡಾಣೆ.



ಕಾಮನ್‌ವೆಲ್ತ್ ಪರಿಷತ್ತಿನಿಂದ ಯಶಸ್ವಿಯಾಗಿ ಮರಳಿದ ಮುಖ್ಯ ಮಂತ್ರಿ ಜವಾಹರಲಾಲ

Karmaveer KANNADA ILLUSTRATED WEEKLY HUBLI

ಸಂಪುಟ ೨೧ ಸಂಚಿಕೆ ೩

ಕರ್ಮವೀರ

ಸೋಮವಾರ ವೈಶಾಖ ಬ. ೪

ತಾರೀಕು ೧೬—೫—೧೯೪೯

ಮುಖಪತ್ರದಲ್ಲಿ

ಮುಖ್ಯಮಂತ್ರಿ ಪಂ. ಜವಾಹರಲಾಲರು

ಲಂಡನ್ನಿನಲ್ಲಿ ಕಾಮನ್‌ವೆಲ್ತ್ ಮುಖ್ಯ ಮಂತ್ರಿ ಪರಿಷತ್ತನ್ನು ಯಶಸ್ವಿಯಾಗಿ ಮುಗಿಸಿಕೊಂಡು, ಅಯರ್ಲಂಡ್, ಸ್ವಿಝರ್ಲಂಡ್ ಮೊದಲಾದ ದೇಶಗಳಿಗೆ ಭೆಟ್ಟಿಯಿತ್ತು ಸ್ವದೇಶಕ್ಕೆ ಮರಳಿದ್ದಾರೆ. ಬ್ರಿಟಿಶರ ಪರಮ ಶತ್ರುವೆಂದು ಕೆಲ ವರ್ಷಗಳ ಹಿಂದೆ ಪರಿಗಣಿಸಲ್ಪಡುತಿದ್ದ ಈ "ಬಿರುಗಾಳಿ" ಮುಂದಾಳನ್ನು ಬ್ರಿಟಿಶ ಪತ್ರಿಕೆಗಳು ಹಾಡಿ ಹೊಗಳಿದವು. ಅಯರ್ಲಂಡಿನ ಪತ್ರಿಕೆಗಳು ಅವರನ್ನು ಹುಟ್ಟು ಮುಂದಾಳೆಂದು ಕರೆದವು. ಸ್ವಿಝರ್ಲಂಡಿನಲ್ಲಿ ಅವನಿಗೆ ಅಭೂತ ಪೂರ್ವ ಸ್ವಾಗತ ದೊರೆಯಿತು. "ಅರೆಬತ್ತಲೆ ಫಕೀರ" (ಗಾಂಧೀಜಿ) ನ ಸಂಗಡ ಬ್ರಿಟಿಶ ಚಕ್ರವರ್ತಿ ಕೈಕುಲುಕಿಸಿದ್ದಕ್ಕಾಗಿ ಹಿಂದೊಮ್ಮೆ ಕ್ರುದ್ಧರಾಗಿದ್ದ ಚರ್ಚಿಲ್ ಸಾಹೇಬರು ಅವರನ್ನು ತಮ್ಮ ಮನೆಗೆ ಆಮಂತ್ರಿಸಿದ್ದರು. ಭಾರತೀಯ ವಿರೋಧಿ ದಕ್ಷಿಣ ಆಫ್ರಿಕೆಯ ಮಾಲನ್ನರು "ಏಶಿಯಾದ ಭದ್ರದುರ್ಗವಾದ ಹಿಂದುಸ್ತಾನದ ಅಭಿಪ್ರಾಯಕ್ಕೆ ನಾವು (ಕಾಮನ್‌ವೆಲ್ತ ರಾಷ್ಟ್ರಗಳು) ಮನ್ನಣೆ ಕೊಡದೆ ಹೋಗಿದ್ದರೆ ಅದು ಹೊರಬಿದ್ದು ಹೋಗಿ ಹೊಸ ಗೆಳೆಯರನ್ನು ಕಂಡುಕೊಳ್ಳುತಿತ್ತು" ಎಂದರು. ಭಾರತದಲ್ಲಿ ಹಿಂದು ಸಭಾ, ಸಮಾಜವಾದಿ ಮತ್ತು ಕಮ್ಯುನಿಸ್ಟ ಪಕ್ಷಗಳು ಕಾಮನ್‌ವೆಲ್ತದಲ್ಲಿ ಸ್ವತಂತ್ರ ಪ್ರಜಾರಾಜ್ಯವಾಗಿ ಕೂಡ ಭಾರತ ಉಳಿಯಬಾರದಿತ್ತೆಂದು ಕೂಗಿಕೊಳ್ಳುತಿದ್ದರೂ ಜನಸಾಮಾನ್ಯದ ಬೆಂಬಲವಂತೂ ಈ ಬಗ್ಗೆ ಮುಖ್ಯ ಮಂತ್ರಿಗಳಿಗಿದ್ದೇ ಇದೆಯೆಂದು ನಿಶ್ಚಯವಾಗಿಯೂ ಹೇಳಬಹುದು.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರ ವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ ಕತೆ ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಹೂರ್ಣ್ವಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸಮಂಜಸ ನಿರ್ಣಯ

ಕಾಂಗ್ರೆಸ ಕಾರ್ಯಸಮಿತಿಯು ಭಾಷಾನ್ವಯ ಪ್ರಾಂತ ರಚನೆಯ ಸಂಬಂಧದಲ್ಲಿ ತ್ರಿಮೂರ್ತಿ ಸಮಿತಿಯು ಒಪ್ಪಿಸಿದ ವರದಿಯನ್ನು ಸ್ವೀಕರಿಸಿದಂದಿನಿಂದ ಆಯಾ ಪ್ರಾಂತಗಳಲ್ಲಿ ಪ್ರತಿಕ್ರಿಯೆಗಳೆಂತು ಆಗುತಿವೆಂಬತ್ತ ಇಡೀ ರಾಷ್ಟ್ರದ ಲಕ್ಷ್ಯವು ವೇಧಿಸಿದೆಂದು ಹೇಳಬಹುದು. ಆಯಾ ಪ್ರಾಂತಗಳಲ್ಲಿಯ ಜನರು, ಸಂಸ್ಥೆಗಳು ವಿಶೇಷತಃ ಭಾಷಾನ್ವಯ ಪ್ರಾಂತವಿಲ್ಲದ್ದರಿಂದ ಬಗೆಬಗೆಯ ಕಷ್ಟನಷ್ಟಗಳನ್ನನುಭವಿಸುತಿರುವ ಪ್ರಾಂತಗಳಲ್ಲಿ ಏನು ನಡೆಯುತಿದೆ ಎಂಬುದು ಮಹತ್ವದ್ದು. ಮಹಾರಾಷ್ಟ್ರ ಕರ್ನಾಟಕ ಆಂಧ್ರ ಮೊದಲಾದ ಪ್ರಾಂತಗಳಲ್ಲಿಯ ವಿವಿಧ ಸಂಸ್ಥೆಗಳು ಕಾಂಗ್ರೆಸ ಸಮಿತಿಗಳು ತಮ್ಮ ಪ್ರತಿಕ್ರಿಯೆಗಳನ್ನು ಗೊತ್ತುವಳಿ ರೂಪದಲ್ಲಿ ವ್ಯಕ್ತಪಡಿಸಹತ್ತಿವೆ. ಕಳೆದ ತಿಂಗಳು ಕರ್ನಾಟಕ ಏಕೀಕರಣ ಮಹಾಸಮಿತಿಯು ಈ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತು. ಕಳೆದವಾರ ಕರ್ನಾಟಕದಲ್ಲಿ ಮುಖ್ಯ ಸಂಸ್ಥೆಯಾದ ಪ್ರಾಂತೀಯ ಕಾಂಗ್ರೆಸ ಸಮಿತಿಯು ಹುಬ್ಬಳ್ಳಿಯಲ್ಲಿ ಸಭೆ ಸೇರಿ ಮಹತ್ವದ ಗೊತ್ತುವಳಿಯನ್ನು ಸ್ವೀಕರಿಸಿದೆ. ಆ ಗೊತ್ತುವಳಿ ಮತ್ತು ಹಿಂತೆಗೆದುಕೊಂಡ ಶ್ರೀ ಕಾರಂತರ ಗೊತ್ತುವಳಿ ಇವುಗಳ ಮುಖ್ಯಾಶಯವನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟಿದ್ದೇವೆ. ಶ್ರೀ. ಕಾರಂತರು ಮಂಡಿಸಿದ ಗೊತ್ತುವಳಿಯಲ್ಲಿಯ ರಾಜೀನಾಮೆಯ ಭಾಗವನ್ನು ಬಿಟ್ಟರೆ ಉಳಿದುದೆಲ್ಲ ಒಪ್ಪಿಗೆಯಾಗುವಂತಹದಿದೆ. ಪ್ರಾಂತೀಕರಣದ ಬಗ್ಗೆ ಕನ್ನಡಿಗರು ಅತ್ಯಂತ ಆತುರರಾಗಿದ್ದುದರಿಂದ ಹೊಸ ರಾಜ್ಯಘಟನೆ ಜಾರಿಯಲ್ಲಿ ಬರುವಾಗಲೆ ಕರ್ನಾಟಕ ಪ್ರಾಂತದ ಉಲ್ಲೇಖವು ಅದರಲ್ಲಿ ಆಗಬೇಕು ಎಂದು ಕನ್ನಡಿಗರು ಬೇಡುತಿರುವರು. ಅನಿಯಮಿತ ಅವಧಿಯ ವರೆಗೆ ಕರ್ನಾಟಕ ಪ್ರಾಂತೀಕರಣ ಪ್ರಶ್ನೆಯನ್ನು ಮುಂದುವರಿಸಿದ್ದಾದರೆ ಅದರ ಪ್ರತಿಕ್ರಿಯೆ ಘಾತಕವಾಗಿ ಪರಿಣಮಿಸುವದೆಂಬಲ್ಲಿ ಸಂದೇಹವಿಲ್ಲ. ಅಂತೆಯೇ ಕೇಂದ್ರ ಸರಕಾರದವರು ಇತ್ತ ಗಮನಿಸುವದವಶ್ಯವಾಗಿದೆ.

ಮೈಸೂರು ಕರ್ನಾಟಕದಲ್ಲಿ ಕೂಡುವಂತಾದರೆ ಕರ್ನಾಟಕ ಪ್ರಾಂತರಚನೆಯಲ್ಲಿನ ಮಹತ್ವದ ತೊಡಕು ಮಾಯವಾದಂತಾಗುವದು. ಮೈಸೂರಿನ ಮಹಾರಾಜರು, ಜನತೆ ಮತ್ತು ಕೇಂದ್ರ ಸರಕಾರವು ಇತ್ತ ಗಮನಿಸಿದರೆ ಈ ಪ್ರಶ್ನೆಯೇನು ಅಷ್ಟು ತೊಡಕಿನದಾಗದು. ಶ್ರೀ. ಕಾರಂತರ ಗೊತ್ತುವಳಿಯಲ್ಲಿ ಈ ಮಾತನ್ನು ಸ್ಪಷ್ಟಪಡಿಸಲಾಗಿದೆ. ಬಹುಸಂಖ್ಯ ಸಂಸ್ಥಾನಗಳನ್ನು ಕರಗಿಸಿದ ಕೇಂದ್ರ ಸರಕಾರಕ್ಕೆ ಮೈಸೂರನ್ನು ಕರಗಿಸುವದೇನು ಕಠಿನವಲ್ಲ. ಆದರೆ ಮಹಾರಾಜರೂ ಮೈಸೂರಿನ ಜನರೂ ಈ ಸಂಬಂಧದಲ್ಲಿ ಸ್ವಲ್ಪ ಮುತ್ಸದ್ದಿತನವನ್ನು ತೋರುವದು ಕಾಲೋಚಿತವಾಗಿದೆ. ಒತ್ತಾಯಕ್ಕೊಳಪಡದೆ ಸ್ವಯಂ ಅಖಂಡ ಕರ್ನಾಟಕ ಪ್ರಾಂತರಚನೆಗೆ ಸಹಾಯ ಸಲ್ಲಿಸಿದ್ದಾದರೆ ಸಮಸ್ಯೆ ಬೇಗ ಬಗೆಹರಿಯಬಲ್ಲದು. ಆದರೆ ಈ ಸಂಬಂಧದಲ್ಲಿ ರಾಜೀನಾಮೆ ಮೊದಲಾದ ಉಗ್ರ ಕ್ರಮ ಕೈಕೊಳ್ಳಬೇಕೆಂದು ಶ್ರೀ. ಕಾರಂತರು ತಮ್ಮ ಗೊತ್ತುವಳಿಯ ಕೊನೆಯ ಭಾಗದಲ್ಲಿ ಹೇಳಿದ್ದನ್ನು ಮಾತ್ರ ನಾವು ಒಪ್ಪಲಾರೆವು. ಈ ಮೊದಲು ನಾವು ಹೇಳಿದಂತೆ ನಮ್ಮ ಸರಕಾರದ ಕೂಡ ಅಸಹಕಾರ ಧೋರಣವನ್ನು ವಹಿಸುವದು ನ್ಯಾಯ್ಯವಾಗಲಾರದು. ಅಲ್ಲದೆ ಬೇಡಿಕೆಯು ಪ್ರಬಲವಾದರೆ ಪ್ರಾಂತೀಕರಣದ ಪ್ರಶ್ನೆಯು ಪುನರ್ವಿಚಾರ ಮಾಡಲಾಗುವುದೆಂದು ಕಾರ್ಯ ಸಮಿತಿಯು ಸ್ಪಷ್ಟವಾಗಿ ಹೇಳಿವೆ. ರಾಜೀನಾಮೆ ಮೊದಲಾದ ಬೆದರಿಕೆಯ ಮಾತುಗಳನ್ನಾಡದೆ ನಮ್ಮ ಬೇಡಿಕೆಯ ತೀವ್ರತೆಯನ್ನು ಕಾಂಗ್ರೆಸ ವರಿಷ್ಠರಿಗೆ ತಿಳಿಸಬಹುದು. ಬರಿ ಶಾಸನ ಸಭೆ ಮಂತ್ರಿಪದ ಮೊದಲಾದವುಗಳಿಗಲ್ಲದೆ ಕಾಂಗ್ರೆಸ್ಸಿಗೂ ರಾಜೀನಾಮೆ ಕೊಡಬೇಕೆಂದು ಶ್ರೀ. ಕಾರಂತರು ಹೇಳಿದ್ದಂತೂ ನಮಗೆ ಸ್ವಲ್ಪೂ ಸಮಂಜಸವಾಗಿ ತೋರುವದಿಲ್ಲ. ಯಾವ ಕಾಂಗ್ರೆಸ್ಸಿನ ಮುಖಾಂತರ ನಾವು ಕಳೆದ ಅರವತ್ತುವರುಷಗಳಿಂದ ಹೋರಾಡಿ ಸ್ವಾತಂತ್ರ್ಯವನ್ನು ಸಂಪಾದಿಸಿದೆವೊ ಅಂಥ ಕಾಂಗ್ರೆಸ್ಸಿಗೇ ಶರಣುಹೊಡೆದು ಅದರ ಬಲವನ್ನು ಕುಗ್ಗಿಸಲು ಪ್ರಯತ್ನಿಸುವದೆಂದರೆ ಅತ್ಯಂತ ಘಾತಕವಾದುದು. ಕಾಂಗ್ರೆಸ್ಸನ್ನು ದುರ್ಬಲಗೊಳಿಸುವ ವಿಚಾರಸರಣಿಗೆ ಒಮ್ಮೆ ಉತ್ತೇಜನ ಕೊಟ್ಟದ್ದಾದರೆ ಅದರ ದುಷ್ಪರಿಣಾಮವೆಲ್ಲಿಗೆಮುಟ್ಟಬಹುದು ಮತ್ತು ಇಷ್ಟೊಂದು ಕಷ್ಟನಷ್ಟಗಳಿಂದ ಸಂಪಾದಿಸಿದ ಸ್ವಾತಂತ್ರ್ಯದ ಗತಿ ಏನಾಗಬಹುದು ಎಂಬುದನ್ನು ವಿಚಾರಿಸುವದು ಅವಶ್ಯವಾಗಿದೆ. ಅಂತೆಯೇ ಶ್ರೀ ಕಾರಂತರ ವಿಚಾರಸರಣಿಗೆ ಬೆಂಬಲ ದೊರೆಯದೆ ಅದು ಹಿಂತೆಗೆದುಕೊಳ್ಳಲ್ಪಟ್ಟದ್ದು ವಿಹಿತವೇ ಆಯಿತು. ಕಾಂಗ್ರೆಸನಿಷ್ಠ ಪ್ರಾಂತವೆಂದು ಹೆಸರುಗೊಂಡ ಕರ್ನಾಟಕವು ಕಾಂಗ್ರೆಸ್ಸಿನ ಮುಖಾಂತರವಾಗಿಯೆ, ಕಾಂಗ್ರೆಸ್ಸಿನಲ್ಲಿ ಉಳಿದುಕೊಂಡೇ ಸ್ವತಂತ್ರ ಪ್ರಾಂತವನ್ನು ಪಡೆಯಬಲ್ಲುದೆಂಬ ಆತ್ಮವಿಶ್ವಾಸ ನಮಗೆ ಇದೆ.

ಅಷ್ಟಪ್ರಮುಖರ ಶಿಷ್ಟಮಂಡಲವನ್ನು ಕಾಂಗ್ರೆಸ ವರಿಷ್ಠರ ಕಡೆಗೆ ಕಳಿಸಬೇಕೆಂದು ಕಾಂಗ್ರೆಸ ಸಮಿತಿಯು ನಿರ್ಧರಿಸಿದ್ದು, ಆ ಶಿಷ್ಟಮಂಡಲವು ಬೇಗ ಕಾಂಗ್ರೆಸ ವರಿಷ್ಠರನ್ನು ಕಾಣಬಹುದು. ಶ್ರೀ ಕಾರಂತರೂ ಈ ಶಿಷ್ಟಮಂಡಲದೊಡನೆ ಕಾಂಗ್ರೆಸ ವರಿಷ್ಠರೆಡೆಗೆ ಹೋಗಿ ಕರ್ನಾಟಕ ಪ್ರಾಂತರಚನೆಯ ಆವಶ್ಯಕತೆಯ ಬಗ್ಗೆ ಅವರ ಮನವಲಿಸಲು ಪ್ರಯತ್ನಿಸುವಲ್ಲಿ ಯಾವದೇ ಬಗೆಯ ಅಗೌರವವಿಲ್ಲ. ಇದರಿಂದ ಅವರು ಪ್ರಾಂತದ ಹಿತವನ್ನೇ ಮಾಡಿದಂತಾಗುವದು. ತಮ್ಮ ಬೇಡಿಕೆ ನ್ಯಾಯವಿದ್ದಾಗ ತಮ್ಮ ಮುಂದಾಳುಗಳಲ್ಲಿಗೆ ಹೋಗುವದು ಯಾರಿಗೂ ಯಾವ ಕಾಲದಲ್ಲಿಯೂ ಅಪಮಾನಕರವಾಗದು. ಆದುದರಿಂದ ಶಿಷ್ಟಮಂಡಲದ ಪ್ರಮುಖರೆಲ್ಲ ಆದಷ್ಟು ಬೇಗ ಕಾಂಗ್ರೆಸವರಿಷ್ಠರಲ್ಲಿಗೆ ಹೋಗಿ ಸ್ವತಂತ್ರ ಪ್ರಾಂತರಚನೆಯ ಬಗ್ಗೆ ಕರ್ನಾಟಕವು ಎಷ್ಟೊಂದು ಆತುರವಾಗಿದೆಂಬದನ್ನು ಅವರಿಗೆ ಮನಂಬಟ್ಟು ಮಾಡಿಕೊಡಬೇಕು. ಈ ಒಂದು ತಿಂಗಳ ಅವಧಿಯಲ್ಲಿ ಮೈಸೂರೂ ಸಂಕುಚಿತ ಧೋರಣವನ್ನು ಬಿಟ್ಟುಗೊಟ್ಟು ಮಹಾಕರ್ನಾಟಕ ಪ್ರಾಂತರಚನೆಯ ಈ ಸುಸಂಧಿಯ ಯೋಗ್ಯ ಲಾಭ ಮಾಡಿಕೊಳ್ಳುವದೆಂದು ನಾವು ಬಲವಾಗಿ ನಂಬುತ್ತೇವೆ. ತದ್ವಿರುದ್ಧವಾಗಿ ಅಲ್ಲಿಯ ಪತ್ರಿಕೆಗಳು ಮತ್ತು ಮಹಾಜನರು ವರ್ತಿಸಿದ್ದಾದರೆ ಕನ್ನಡ ತಾಯ್ನಾಡಿಗೇ ದ್ರೋಹ ಬಗೆದಂತಾಗುವದು. ಈ ಮಾತನ್ನು ಇಂಥವರು ಮರೆಯದಿರಲಿ.

× × ×

ಅತಿ ಪ್ರಸರಣದಿಂದ ಬೆಲೆಗಳು ಮಿತಿಮೀರಿ ಏರಿದ್ದರಿಂದ ಉತ್ಪಾದನೆಯನ್ನು ಹೆಚ್ಚಿಸಿ ಅತಿ ಪ್ರಸರಣವನ್ನು ತಡೆಯುವದೇ ಮದ್ದಾಗಿದೆ; ಸರಕಾರದವರು ಕೂಲಿಕಾರರು ಮತ್ತು ಬಂಡವಲದಾರರು ಪರಸ್ಪರ ಸಹಕರಿಸಿ ಕಾರ್ಯಪ್ರವೃತ್ತರಾಗಬೇಕು ಎಂದು ಅಖಿಲ ಭಾರತ ಕಾರಖಾನೆದಾರರ ಸಂಘದ ಅಧ್ಯಕ್ಷರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಸಂಘದ ಪ್ರಥಮ ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುತ್ತ ಅಭಿಪ್ರಾಯಪಟ್ಟಿರುವರು. ದೇಶದ ಉತ್ಪತ್ತಿಯನ್ನು ಎಂತು ಹೆಚ್ಚಿಸಬಹುದೆಂಬ ಬಗ್ಗೆಯೂ ಮಾನ್ಯ ಮೋಕ್ಷಗುಂಡಂರವರು ತಮ್ಮ ಅನುಭವಪೂರ್ಣವಾದ ಸೂಚನೆಗಳನ್ನು ಮಾಡಿರುವರು. ದೊಡ್ಡ ದೊಡ್ಡ ಕಾರಖಾನೆಗಳನ್ನು ಅಭಿವೃದ್ಧಿಪಡಿಸಬೇಕು, ಗ್ರಾಮೋದ್ಯೋಗಗಳನ್ನು ಬೆಳೆಸಬೇಕು ಮತ್ತು ಸುಧಾರಿಸಿದ ಯಾಂತ್ರಿಕ ಪದ್ಧತಿಯಿಂದ ಒಳ್ಳೆ ಗೊಬ್ಬರ ಹಾಕಿ ವ್ಯವಸ್ಥಿತ ಯೋಜನೆ ಮಾಡಿ ಒಕ್ಕಲತನದ ಉತ್ಪನ್ನವು ಹೆಚ್ಚಾಗುವಂತೆ ಮಾಡುವದು ಈ ಮೂರು ಮಾರ್ಗಗಳಿಂದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದು ಜಿಲ್ಹೆಯ ಪ್ರದೇಶದಲ್ಲಿ ನಗರ ಪಟ್ಟಣ ಹಳ್ಳಿಗಳ ಗುಂಪುಗಳುಳ್ಳ ಕೇಂದ್ರಗಳು ಹೀಗೆ ಮೂರು ವಿಭಾಗಗಳನ್ನು ಮಾಡಿ ಆಯಾ ಭಾಗಗಳು ಸ್ವಾವಲಂಬಿ ಸ್ವಯಂಪೂರ್ಣವಾಗುವಂತೆ ಯೋಜಿಸಿ ಉತ್ಪಾದನೆಯನ್ನು ಹೆಚ್ಚಿಸಿದ್ದಾದರೆ ನೂರಕ್ಕೆ ೬॥ ಯಷ್ಟು ಜನರ ಪರಿಸ್ಥಿತಿ ಸುಧಾರಿಸಿದಂತಾಗುವದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ದೇಶದ ರಾಷ್ಟ್ರೀಯ ಉತ್ಪನ್ನ ದೊಡ್ಡ ಕಾರಖಾನೆಗಳಿಂದ ವರ್ಷಕ್ಕೆ ಸುಮಾರು ೨೦೦ ಕೋಟಿ ರೂ. ಇದ್ದರೆ ಗ್ರಾಮೋದ್ಯೋಗಗಳಿಂದ ೨೫೦ ಕೋಟಿ ರೂ. ಇದೆ. ಬರುವ ಅಯಿದು ವರ್ಷಗಳಲ್ಲಿ ದೊಡ್ಡ ಕಾರಖಾನೆಗಳ ಅಭಿವೃದ್ಧಿಯಿಂದ ಉತ್ಪನ್ನವು ೧೫೦೦ ಕೋಟಿ ರೂಪಾಯಿಗಳಿಗೆ ಏರಬಹುದು. ಗ್ರಾಮೋದ್ಯೋಗಗಳಿಂದ ೫೦೦ ಕೋಟಿ ರೂಪಾಯಿಗಳಿಗೆ ಬರಬಹುದು. ಹೀಗೆ ಅಯಿದು ವರುಷಗಳಲ್ಲಿ ೨೦೦೦ ಕೋಟಿ ರೂ. ರಾಷ್ಟ್ರೀಯ ಉತ್ಪನ್ನ ಹೆಚ್ಚಿದರೆ ೧೫ ವರುಷಗಳಲ್ಲಿ ಅದದನ್ನು ೬೦೦೦ ಕೋಟಿ ರೂಪಾಯಿಗಳಿಗೆ ಏರಿಸುವದು ನಮ್ಮ ಗುರಿಯಾಗಿರಬೇಕು ಎಂದು ಸರ್ ವಿಶ್ವೇಶ್ವರಯ್ಯನವರು ಅಭಿಪ್ರಾಯಪಟ್ಟಿರುವರು. ಇದಕ್ಕಾಗಿ ಬೇಕಾಗುವ ಕಬ್ಬಿಣ ಉಕ್ಕನ್ನೂ ನಾವು ಉತ್ಪಾದಿಸಬಹುದು. ಔದ್ಯೋಗಿಕ ಅಭಿವೃದ್ಧಿಗಾಗಿ ತರುಣರಿಗೆ ತಾಂತ್ರಿಕ ಶಿಕ್ಷಣ ಕೊಟ್ಟು ತರಬೇತಿಗೊಳಿಸುವ ಶಿಕ್ಷಣಾಲಯಗಳ ಅಗತ್ಯವೂ ಇದೆ. ಸರ್ ವಿಶ್ವೇಶ್ವರಯ್ಯನವರ ಈ ಸೂಚನೆಗಳತ್ತ ಸರಕಾರದವರು ಕೂಲಿಕಾರರು ಮತ್ತು ಬಂಡವಲುಗಾರರು ಗಮನಿಸಿ ತಮ್ಮ ತಮ್ಮ ಪಾಲಿನ ಕರ್ತವ್ಯ ಮಾಡಿದರೆ ದೇಶದ ಆರ್ಥಿಕ ಪ್ರಗತಿಯಾಗುವಲ್ಲಿ ಸಂದೇಹವಿಲ್ಲ.

× × ×

ದಕ್ಷಿಣ ಆಫ್ರಿಕೆಯ ಪ್ರಶ್ನೆ ಇನ್ನೂ ಬಗೆಹರಿಯಲೊಲ್ಲದು— ಅಲ್ಲಿನ ದುರಾರಾಧ್ಯ ಆಡಳಿತೆಗಾರರು ಭಾರತೀಯರಿಗೆ ವಿಧ ವಿಧವಾಗಿ ತೊಂದರೆ ಕೊಡುತಿರುವರು. ಅಂತೆಯೆ ಅವರು ಸಂಯುಕ್ತ ರಾಷ್ಟ್ರಸಮಿತಿಯ ಮುಖಾಂತರ ಪರಿಹಾರ ಪಡೆಯಲು ಪ್ರಯತ್ನಿಸುತಿರುವರು. ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀಯರ ಪರಿಸ್ಥಿತಿಯನ್ನು ವಿಚಾರಿಸಿ ಪರಿಹಾರೋಪಾಯಗಳನ್ನು ಸೂಚಿಸಲು ಸದಸ್ಯರಾಷ್ಟ್ರಗಳ ಮೂವರ ಸಮಿತಿಯನ್ನು ನೇಮಿಸಬೇಕೆಂದು ಸಂಯುಕ್ತ ರಾಷ್ಟ್ರಸಂಘದ ರಾಜಕೀಯ ಸಮಿತಿಯಲ್ಲಿ ಹಿಂದುಸ್ತಾನವು ಮಂಡಿಸದ ಗೊತ್ತುವಳಿಯು ಬಹುಮತದಿಂದ ಸ್ವೀಕೃತವಾಗಿ ಹಿಂದೀಯರ ಪ್ರಶ್ನೆಗೆ ವಿಜಯದೊರೆತಿತು. ಈ ಪ್ರಶ್ನೆಗೆ ೨೧ ಜನ ಅನುಕೂಲ ಮತ್ತು ೧೬ ಜನ ಪ್ರತಿಕೂಲ ಮತ ಕೊಟ್ಟರು. ೧೨ ಜನರು ತಟಸ್ಥ ಉಳಿದರು— ಇದನ್ನು ನೋಡಿದರೆ ಯುಕ್ತರಾಷ್ಟ್ರ ಸಂಘದ ಸದಸ್ಯರು ದಾಕ್ಷಿಣ್ಯಕ್ಕೊಳಗಾಗಿ ತಮ್ಮ ನಿಶ್ಚಿತ ಅಭಿಪ್ರಾಯವನ್ನು ಹೇಳಲಾರದೆ ತಟಸ್ಥ ಉಳಿಯುತಿರುವರೆಂಬುದು ಕಂಡು ಬರುವದು. ಈ ಸಮಸ್ಯೆಯನ್ನು ಬಿಡಿಸಲು ದುಂಡುಮೇಜು ಪರಿಷತ್ತನ್ನು ಸೇರಿಸಬೇಕೆಂದು ಫ್ರಾನ್ಸ ಮತ್ತು ಮೆಕ್ಸಿಕೋ ದೇಶದ ಪ್ರತಿನಿಧಿಗಳು ಮಂಡಿಸಿದ ಸೂಚನೆ ಅಂಗೀಕೃತವಾಯಿತು. ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀಯರ ಸಮಸ್ಯೆ ಒಳಾಡಳಿತಕ್ಕೆ ಸಂಬಂಧಿಸಿದ್ದು ಇರುವದರಿಂದ ಅದರಲ್ಲಿ ಕೈಹಾಕಲು ಯುಕ್ತರಾಷ್ಟ್ರಸಂಘಕ್ಕೆ ಅಧಿಕಾರವಿಲ್ಲ ಎಂದು ದಕ್ಷಿಣ ಆಫ್ರಿಕೆಯ ಪ್ರತಿನಿಧಿಗಳು ವಾದಿಸಿದರು. ಆದರೆ ಮೇಲೆ ಹೇಳಿದಂತೆ ಅವರ ವಾದವು ಎತ್ತಿ ಒಡೆಯಲ್ಪಡದೆ ಆ ಪ್ರಶ್ನೆಯನ್ನು ಚರ್ಚಿಸಬೇಕೆಂದು ನಿರ್ಣಯವಾಯಿತು. ಇನ್ನು ಮೇಲಾದರೂ ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯರಿಗೆ ನ್ಯಾಯ ಸಿಕ್ಕುವಂತಾಗಲಿ.

ಏಶಿಯದ ರಾಷ್ಟ್ರಗಳೂ ಅಮೇರಿಕದ ಸಹಾಯವೂ

ಅಮೇರಿಕದ ಪರೋಪಕಾರ ದೃಷ್ಟಿ— ಹಿಂದುಳಿದ ರಾಷ್ಟ್ರಗಳಿಗಿತ್ತ ನೆರವು— ಲಾಭದ ಖಾತ್ರಿಯ ಬಗ್ಗೆ ಸಂಶಯ— ಸಾವಕಾರರ ಭಯಗ್ರಹ

ಯುರೋಪಿಗೆ ಹೇಗೋ ಹಾಗೇ ಏಶಿಯಕ್ಕೂ ಒಂದು "ಮಾರ್ಶಲ್ ಯೋಜನೆ" ಯನ್ನು ಅಮೇರಿಕ ತಯಾರಿಸುವುದು, ಅದರ ಮೇರೆಗೆ ಭಾರತ, ಪಾಕಿಸ್ತಾನ ಮುಂತಾದ ನಾಡುಗಳು ತಂತಮ್ಮ ಕೃಷಿ, ವಾಣಿಜ್ಯ ಮುಂತಾದ ಉದ್ಯಮಗಳನ್ನು ಬೆಳೆಸಿಕೊಂಡು ಉದ್ಧಾರವಾಗಬಹುದು ಎಂಬ ಕಲ್ಪನೆ ಇತ್ತೀಚೆಗೆ ಮೆಲ್ಲ ಮೆಲ್ಲನೆ ಹರಡುತ್ತಲಿದೆ. ಈ ಕಲ್ಪನೆಯನ್ನು ಆಧರಿಸುವುದೆಂದರೆ ಮುಗಿಲ ಹೂ ಮುಡಿಯ ಹೋದಂತೆಯೇ ಸೈ ಎಂಬುದು ಅಮೇರಿಕದ ಕಾಂಗ್ರೆಸ್ಸು ಮತ್ತು ಬಂಡವಾಳಿಗರ ಮನೋಧರ್ಮ, ವಿಚಾರಸರಣಿ, ಲಾಭ ದೃಷ್ಟಿ ಇವುಗಳನ್ನು ಪರಾಮರ್ಶಿಸುವುದರಿಂದ ಗೊತ್ತಾಗುತ್ತದೆ.

ಇಂದಿನ ವರೆಗೆ ಏಶಿಯದ ರಾಷ್ಟ್ರಗಳು ಒಂದಲ್ಲ ಒಂದು ವಿಧದಿಂದ ಪಾಶ್ಚಾತ್ಯರ ದಬ್ಬಾಳಿಕೆಗೆ ತುತ್ತಾಗಿ ಶೋಷಣ ಹೊಂದುತ್ತ ಬಂದಿವೆ. ಈಗ ಅಂದರೆ ೨ ನೆಯ ಜಾಗತಿಕ ಯುದ್ಧ ಮುಗಿದ ನಂತರ ನೀರಸವಾದ ಈ ರಾಷ್ಟ್ರಗಳನ್ನು ಕಂಡು ಪಾಶ್ಚಾತ್ಯರು ಸಹಾಯ ಮಾಡುವ ಧೋರಣೆಯನ್ನು ತಳೆಯಬೇಕಾಗಿ ಬಂದಿತು. ಅದರಲ್ಲೂ ಅತ್ಯುತ್ಕರ್ಷ ಹೊಂದಿ ಮೆರೆಯುತ್ತಿರುವ ಅಮೇರಿಕ ತನ್ನ ವ್ಯಾಪಾರ ವ್ಯವಹಾರದ ತೂಕವನ್ನು ಸರಿಯಾಗಿ ಇಟ್ಟುಕೊಳ್ಳಬೇಕಾದರೆ ಹಿಂದುಳಿದ ರಾಷ್ಟ್ರಗಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು ಅವಶ್ಯಕ ಎಂಬುದನ್ನು ಮನಗಂಡಿದೆ. ಅಲ್ಲದೆ, ಕಮ್ಯುನಿಜಂ ಎಂಬ ಕೆಟ್ಟರೋಗ ಏಶಿಯದ ರಾಷ್ಟ್ರಗಳಲ್ಲಿ ಹಬ್ಬಿದರೆ ಕ್ರಮೇಣ ಅಮೇರಿಕಕ್ಕೆ ಅವು ಎದುರಾಳುಗಳಂತೆ ನಿಂತು ಸೆಣಸಬಹುದು ಎಂಬ ಅಂಜಿಕೆಯಿಂದ ಅದರ ಪರೋಪಕಾರಬುದ್ಧಿ ದಿನೇ ದಿನೇ ವೃದ್ಧಿಯಾಗುವ ಲಕ್ಷಣ ಕಂಡುಬರುತ್ತಿದೆ.

ಜಗತ್ತಿನ ಯುದ್ಧೋತ್ತರ ಪುನಾರಚನೆಗೆ ಎಲ್ಲವುಗಳಿಗಿಂತ ಮುನ್ನುಗ್ಗಿ ಕೈಹಾಕಿದ ದೇಶವೆಂದರೆ ಅಮೇರಿಕ. ರಶಿಯದ ಪ್ರಭಾವವನ್ನು ಪ್ರತಿಬಂಧಿಸಲು ಪಶ್ಚಿಮ ಯುರೋಪಿನ ರಾಷ್ಟ್ರಗಳ ನೆರವಿಗೆಂದು ಮಾರ್ಶಲ್ ಯೋಜನೆಯನ್ನು ಸಿದ್ಧಗೊಳಿಸಿ ಅಮಲಿನಲ್ಲಿ ತಂದಿರುವುದು ಸರ್ವವಿದಿತವಾಗಿದೆ. ಇದೇ ಕಾರಣಕ್ಕಾಗಿ ಚೀನಕ್ಕೆ ಇಲ್ಲಿಯವರೆಗೆ ಬೇಕು ಬೇಕಾದಷ್ಟು ತನು ಮನ ಧನದ ಸಹಾಯವನ್ನು ಅಮೇರಿಕ ಸಲ್ಲಿಸುತ್ತ ಬಂದಿತು. ಆದರೆ ಅದರ ದೈವದುರ್ವಿಪಾಕದಿಂದ ಆ ಸಹಾಯವೆಲ್ಲ ನೀರಿನಲ್ಲಿ ಹೋಮಮಾಡಿದಂತಾಯಿತು. ಚೀನೀ ಕಮ್ಯುನಿಸ್ಟರ ವಿಜಯದಲ್ಲಿ ಇನ್ನು ಯಾರೂ ಅವಿಶ್ವಾಸವನ್ನು ತಾಳಲಾರರು. ಚಿಯಾಂಗ್ ಕೈಶೇಕರ ರಾಜ್ಯ ಇನ್ನು ತಲೆಯೆತ್ತುವುದು ಕಲ್ಪನಾತೀತ ಎಂಬುದು ಅಮೇರಿಕದ ಮುತ್ಸದ್ದಿಗಳಿಗೆ ತಿಳಿದುಹೋಗಿದೆ. ಈ ಕಾರಣದಿಂದಲೇ ಚೀನಕ್ಕೀಗ ಹೆಚ್ಚಿನ ಸಹಾಯವನ್ನು ಕಳಿಸದೆ ಅಲ್ಲಿಯ ಸರಕಾರ ತಟಸ್ಥವಾಗಿ ಕುಳಿತಿದೆ.

ಅಮೇರಿಕದ ಔದಾರ್ಯ

೧೯೪೮ ರಲ್ಲಿ ಏಶಿಯದ ಬಗ್ಗೆ ಅಮೇರಿಕ ತೋರಿದ ಔದಾರ್ಯ ನೂರುಕೋಟಿ ಡಾಲರುಗಳಷ್ಟೆಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಬಹಳ ಹೆಚ್ಚುಭಾಗ ಚೀನಕ್ಕೆ ಬಂದಿದೆ. ಮುಳುಗಿಹೋದ ಆ ಗಂಟಿನಿಂದ ಏಶಿಯಕ್ಕೆ ಯಾವ ಪ್ರಯೋಜನವೂ ಆಗಲಿಲ್ಲ. ಕರಡು ಯೋಜನೆಯ ಪ್ರಕಾರ ಇಂದಿನ ಅಮೇರಿಕದ ಔದಾರ್ಯ ನೂರರಿಂದ ಮುನ್ನೂರು ಕೋಟಿ ಡಾಲರುಗಳ ವರೆಗಿದೆ ಎಂದು ಅಮೇರಿಕದ ...ಟ್ಟ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ-...ಡ್ವಿನ್ ಪಿ. ರೂಜಿನ್ಸರು ಬರೆಯುತ್ತಾರೆ.

ಗೆದ್ದುಕೊಂಡ ಜಪಾನಿನ ಆಡಳಿತೆಗಾಗಿ ೩೭ ಕೋಟಿ ಡಾಲರುಗಳನ್ನು ಅಮೇರಿಕ ೧೯೪೭ರಲ್ಲಿ ವೆಚ್ಚಮಾಡಿತು. ಆದರೆ ಅದರಿಂದ ಆ ದೇಶದ ಆರ್ಥಿಕ ಮತ್ತು ಔದ್ಯಮಿಕ ಅಭಿವೃದ್ಧಿಗೆ ...ರವು ಸಿಕ್ಕಿದ್ದು ಸ್ವಲ್ಪ, ಅಮೇರಿಕದ ಆಡಳಿತೆಗಾರರ ಜೀವನದ ವೆಚ್ಚಕ್ಕೇ ಬಹ್ವಂಶ ವೆಚ್ಚವಾಯಿತು. ಸಂ. ರಾ. ಸಂಘದ ವಿಶಿಷ್ಟ ಸಭೆಯ ಮೂಲಕ ಕೊರಿಯಕ್ಕೆ ೯,೯೨೦೦೦ ಡಾಲರುಗಳನ್ನು ಸಲ್ಲಿಸಲಾಯಿತು. ದಕ್ಷಿಣ ಕೊರಿಯಕ್ಕೆ ಉತ್ತರ ಕೊರಿಯದಲ್ಲಿದ್ದ ಕಮ್ಯುನಿಸ್ಟ ಅಧಿಕಾರ ಪ್ರಸರಿಸಬಾರದೆಂಬ ಆಶೆಯಿಂದಲೇ ಈ ನೆರವನ್ನು ಕೊಟ್ಟದ್ದು ಈಗ ...೬೦ ಕೋಟಿ ಡಾಲರುಗಳನ್ನು ಕೊಡುವುದಾಗಿ ಕೊರಿಯಕ್ಕೆ ಅಮೇರಿಕ ವಾಗ್ದಾನ ಮಾಡಿದೆ. ಫಿಲಿಪ್ಪೈನ್ ದ್ವೀಪಸ್ತೋಮಕ್ಕೆ ಸಂ. ರಾ. ಸಂಘದ ಮೂಲಕ ೧,೮೫೦೦೦ ಡಾಲರುಗಳಲ್ಲದೆ ಮತ್ತೆ ೭೦ ಕೋಟಿ ಕೊಡಬೇಕೆಂದಿದೆ.

ಅಮೇರಿಕ ಡಚ್ ಈಸ್ಟ್ ಇಂಡೀಸ್ ದ್ವೀಪಗಳ ಆಡಳಿತೆಗಾಗಿ ಡಚ್ಚರಿಗೆ ೧೯೪೫ ರಿಂದ ೨೦ ಕೋಟಿಗಿಂತ ಹೆಚ್ಚು ಡಾಲರುಗಳ ಧನ ಸಹಾಯ ನೀಡುತ್ತ ಬಂದಿದೆ. ಅದು ಆ ನಾಡಿನ ಅಭಿವೃದ್ಧಿಗೆ ವೆಚ್ಚವಾಗುವುದರ ಬದಲು ಡಚ್ಚರ ವ್ಯಾಪಾರೀ ಮತ್ತು ರಾಜಕೀಯ ದಬ್ಬಾಳಿಕೆಗಳಿಗೇ ಪ್ರಯುಕ್ತವಾದುದು ಸ್ಪಷ್ಟವಿದೆ. ಯುದ್ಧಾನಂತರ ಇದೇ ಮೇರೆಗೆ ಬ್ರಹ್ಮದೇಶಕ್ಕೆ ೫೦ ಲಕ್ಷ, ಭಾರತಕ್ಕೆ ೧॥ ಕೋಟಿ, ಪಾಕಿಸ್ತಾನಕ್ಕೆ ೧ ಕೋಟಿ, ಸಯಾಮಿಗೆ ೧ ಕೋಟಿ ಡಾಲರುಗಳನ್ನು ಅಮೇರಿಕ ಸಾಲವಾಗಿ ಕೊಟ್ಟಿದೆ. ಈ ಸಹಾಯದ ಪ್ರಮಾಣವನ್ನು ನೋಡಿದರೆ ಎಲ್ಲೆಲ್ಲಿ ತಮಗೆ ಸಮರನೀತಿಯ ದೃಷ್ಟಿಯಿಂದ ಮತ್ತು ಕಮ್ಯುನಿಜಮ್ಮನ್ನು ಪ್ರತಿಬಂಧಿಸುವ ದೃಷ್ಟಿಯಿಂದ ಸ್ಥಳೀಯ ಸರಕಾರಕ್ಕೆ ಬೆಂಬಲ ಕೊಡಬೇಕೆನಿಸಿತೋ ಅಲ್ಲಲ್ಲಿ ಆಯಾ ಸಂದರ್ಭಾನುಸಾರ ಹೆಚ್ಚು ಕಡಿಮೆ ಧನಸಹಾಯ ಸಲ್ಲಿಸಿದ್ದು ತಿಳಿದುಬರುತ್ತದೆ.

ಹುಚ್ಚು ಸಲಹೆ

ಕೃಷಿಪ್ರಧಾನವಾದ ಏಶಿಯದ ರಾಷ್ಟ್ರಗಳ ಉತ್ಪಾದಕ ಶಕ್ತಿಯುದ್ಧದ ದೆಸೆಯಿಂದ, ಪರಕೀಯರ ಆಡಳಿತೆಯ ದೆಸೆಯಿಂದ ಮತ್ತು ಇತರ ಕಾರಣಗಳಿಂದ ಬಹಳ ಕೆಳಗಿನ ಮಟ್ಟದಲ್ಲಿದೆ. ಇದನ್ನು ಸುಧಾರಿಸಲು ಕೇವಲ ಧನ ಸಹಾಯವಷ್ಟೇ ಸಾಲದೆಂದೂ ಯಂತ್ರಾದ್ಯುಪಕರಣ ಮತ್ತು ವಿಜ್ಞಾನಬೋಧ ಇವು ಅವಶ್ಯಕವೆಂದೂ ಅಮೇರಿಕದ ಮುತ್ಸದ್ದಿಗಳು ಅರಿತಿದ್ದಾರೆ. ಇದರ ಮೇಲೆ, ಮೇಲೆ ಹೆಸರಿಸಿದ ಪ್ರಾಧ್ಯಾಪಕರು ಈ ಸ್ಥಿತಿ ಸುಧಾರಿಸಬೇಕಾದರೆ ಜನಸಂಖ್ಯೆ ಹೆಚ್ಚುತ್ತಿರುವುದು ನಿಂತರಷ್ಟೇ ಸಾಲದು, ಇದ್ದುದಕ್ಕಿಂತ ಅದಿನ್ನೂ ಕಡಿಮೆಯಾಗಬೇಕು ಎಂದು ಸೂಚಿಸುತ್ತಾರೆ, ಅರ್ಥಾತ್ ಜನನಸಂಖ್ಯೆಗಿಂತ ಮರಣಸಂಖ್ಯೆ ಹೆಚ್ಚುವ ಉಪಾಯವನ್ನು ಕೈಕೊಳ್ಳಬೇಕು! ಈ ವಿಚಾರ ಎಷ್ಟರ ಮಟ್ಟಿಗೆ ನ್ಯಾಯ್ಯ ಮತ್ತು ಅವಶ್ಯಕ, ಅನಿವಾರ್ಯ ಎಂಬುದನ್ನು ಗಾಂಧೀವಾದಿಗಳಿಗೆ ವಿವರಿಸಿ ಹೇಳಬೇಕಾಗಿಲ್ಲ. "ಹೊಸದಾಗಿ ಒಂದು ಬಾಯಿ ಹುಟ್ಟಿದರೆ ಅದರ ಜೊತೆಗೇ ಎರಡು ಕೈಗಳು ಹುಟ್ಟುತ್ತವೆ." ಎಂಬ ಮಾತಿನ ಸತ್ಯತೆಯನ್ನು ಬಲ್ಲವರೇ ಬಲ್ಲರು, ಯೋಜನಾಶಕ್ತಿಯುಳ್ಳವರೇ ಸಾರ್ಥಕಗೊಳಿಸಲಾದಾರು.

ಸಾವಕಾರರ ಡೊಂಕು

ದೂರಪ್ರಾಚ್ಯಕ್ಕೆ ಧನಸಹಾಯ ನೀಡಬೇಕೆಂಬುದು ಅಧ್ಯಕ್ಷ ಟ್ರೂಮನ್ನರ ಆಶಯ. ಇದರಿಂದ ಏಶಿಯದ ಕೆಲ ರಾಷ್ಟ್ರಗಳಲ್ಲಿ ಆಶಾಂಕುರ ಉದಿಸಿತು. ಆದರೆ ಟ್ರೂಮನ್ನರ ಪ್ರತಿಯೊಂದು ಉದಾರ ಧೋರಣೆಗೂ ಅವರ ಕಾಂಗ್ರೆಸ್ಸು ಅಡ್ಡ ಬರುತ್ತಿರುವುದು ಮೇಲಿಂದ ಮೇಲೆ ಸ್ಪಷ್ಟವಾಗುತ್ತ ಬಂದಿದೆ. ಇದರ ಮೇಲೆ, ಅಮೇರಿಕದ ಸಾವಕಾರರು ಸರಕಾರ ಬೇಕಾದರೆ ಸಹಾಯ ಸಲ್ಲಿಸಲಿ, ತಾವೇನೂ ಬಡ್ಡಿಗೆ ಸಾಲವನ್ನು ಹೊರನಾಡುಗಳಿಗೆ ಕೊಡುವವರಲ್ಲ ಎಂದು ಹಟ ಹಿಡಿದಿದ್ದಾರೆ. ಒಂದು ವೇಳೆ ಕೊಡುವುದಾದರೆ ಅದನ್ನು ತಿರುಗಿ ಮುಟ್ಟಿಸುವ ಹೊಣೆಯನ್ನು ಸರಕಾರ ಹೊರಬೇಕಂತೆ. ಅವರಿಗೆ ಹೀಗೆ ಭಯ ಸಂಶಯಗಳುಂಟಾಗಲು ಚೀನದಲ್ಲಿ ಗಂಟು ಮುಳುಗಿದ್ದು ಒಂದು ಕಾರಣ; ಎರಡನೆಯದಾಗಿ, ಖಾಸಗಿ ಹಣವನ್ನು ಬಹಳ ಅಲ್ಪ ಪ್ರಮಾಣದಿಂದ ಹೊರನಾಡುಗಳ ವ್ಯಾಪಾರದಲ್ಲಿ ಹಾಕಲು ಅವಕಾಶ ಕೊಡುವ ಸರಕಾರದ ಅಲ್ಪ ಬುದ್ಧಿಯೂ ಕೆಲ ಸಾಹಸಿಗಳಿಗೆ ಸಿಟ್ಟು ಬರುವಂತೆ ಮಾಡಿದೆ. ಅಲ್ಲದೆ, ಹೆಚ್ಚು ಜನರು ಯುದ್ಧ ಕಾಲದಲ್ಲಿ ಮಿತಿಮೀರಿ ಲಾಭ ಹೊಡೆದು ರುಚಿ ಕಂಡವರಿದ್ದು, ಈಗ ಆ ಪ್ರಮಾಣದ ಲಾಭ ಬರುವಂತಿಲ್ಲದಲ್ಲಿ ಧನವಿನಿಯೋಗ ಮಾಡಲು ಒಲ್ಲರು ಮತ್ತು ತಮ್ಮ ಉದ್ಯಮಗಳಿಗೆ ಸರಕಾರದಿಂದ ಸಂರಕ್ಷಣ ಪಡೆದ ರೂಢಿಯ ದೆಸೆಯಿಂದ ಸ್ವಂತ ಜವಾಬುದಾರಿಯಿಂದ ಹಣಹಾಕಲು ಮುಂದೆ ಬರಲು ಮನಸ್ಸು ಮಾಡುವುದಿಲ್ಲ.

ಗಾಂಧೀ ಯೋಜನೆಯೇ ಮದ್ದು

ಇದರಿಂದ ಅಮೇರಿಕದ ರಾಜಕಾರಣ, ವಿದೇಶನೀತಿ, ಅಲ್ಲಿಯ ಆರ್ಥಿಕ ದೃಷ್ಟಿಯ ನಿಯಂತ್ರಣಕ್ಕೊಳಗಾಗಿದೆ ಎನ್ನಬಹುದು. ಸಾವಕಾರಿಕೆಯ ಶತ್ರುವಾದ ಕಮ್ಯುನಿಜಮ್ಮನ್ನು ಓಡಿಸುವುದು ಮತ್ತು ಹಾಕಿದ ಹಣಕ್ಕೆ ತಕ್ಕ ಪ್ರತಿಫಲ ಬರುವಂತೆ ಹೊರನಾಡುಗಳಲ್ಲಿ ಸುಸ್ಥಿರವಾದ ಸರಕಾರಗಳು ಅಮೇರಿಕಕ್ಕೆ ಅನುಕೂಲವಿರುವಂತೆ ನೋಡಿಕೊಳ್ಳುವುದು— ಇವೇ ಅಲ್ಲಿಯ ಕಾಂಗ್ರೆಸ್ಸಿನ, ಸಾವಕಾರರ ದೂರದೃಷ್ಟಿಯ ವಿಚಾರಧಾರೆ. ಆದುದರಿಂದ ಏಶಿಯದ ಹಿಂದುಳಿದ ನಾಡುಗಳು ಅಮೇರಿಕದಿಂದ ಬಹಳ ಸಹಾಯ ಬರುತ್ತದೆ ಎಂದು ಬಾಯ್ದೆರೆದು ಕುಳಿತುಕೊಂಡರೆ ನಿರಾಶೆಗೀಡಾಗುವುದು ಖಂಡಿತ ಎಂದು "ಹಿಂದುಸ್ತಾನ್ ಟೈಮ್ಸ್" ಪತ್ರಿಕೆಯ ವಿಶಿಷ್ಟ ಸುದ್ದಿಗಾರನು ಬರೆಯುತ್ತಾನೆ. ಇಂಥ ಸನ್ನಿವೇಶದಲ್ಲಿ ಗಾಂಧಿಯವರು ಹೇಳಿದ ಸ್ವಾವಲಂಬನ ಯೋಜನೆಯಲ್ಲದೆ ಮತ್ತಾವುದೂ ಭಾರತದ ಸ್ಥಿತಿಗತಿಗಳನ್ನು ಸುಧಾರಿಸಲಾರದು. ಈ ಮಾತನ್ನು ನಮ್ಮ ಆಡಳಿತೆಗಾರರು, ಒಕ್ಕಲಿಗರು, ಉದ್ಯ

ಮುಮ್ಬಾಜಿ

ಮುಮ್ಬಾಜಿ ೧೭ ವರ್ಷ ವಯಸ್ಸಿನಲ್ಲೇ ಅಜ್ಜಿಯಾದಳು. ಅವಳು ಆಫ್ರಿಕದ ಕೆಲಬಾರ್ ದ್ವೀಪದ ಅಕ್ಕಿರಿ ಎಂಬ ಹೆಸರಿನ ಪಾಳೆಯಗಾರನ ಹೆಂಡತಿಯಾಗಿದ್ದಳು. ಅವಳು ೮ ವರ್ಷ ವಯಸ್ಸಿಗೆ ಮೊದಲೇ ಅಕ್ಕಿರಿಯ ರಾಣೀವಾಸವನ್ನು ಸೇರಿದ್ದಳು. ೮ ವರ್ಷ ೪ ತಿಂಗಳು ತುಂಬಿದಾಗ ಅವಳಿಗೊಬ್ಬ ಮಗಳು ಹುಟ್ಟಿದಳು. ಆ ಮಗಳೂ ೮ ನೆಯ ವರ್ಷ ತುಂಬುವಷ್ಟರಲ್ಲಿ ಒಂದು ಮಗುವಿನ ತಾಯಿಯಾದಳು.

● ಹಿಂದುಸ್ತಾನ ಸರಕಾರವು ರಚಿಸಿದ ಸಂಯುಕ್ತ ರೇಲ್ವೆ ಸಲಹೆ ಸಮಿತಿಯನ್ನು ರೇಲ್ವೆ ಮಹಾ ಮಂಡಲದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳೊಡನೆ ವಿಚಾರವಿನಿಮಯ ಮಾಡಿದ ನಂತರವೇ ರಚಿಸಲಾಗಿದೆಯೆಂದು ಅ. ಭಾ. ರೇಲ್ವೆ ಮಹಾ ಮಂಡಲದ ಅಧ್ಯಕ್ಷ ಶ್ರೀ ಜಯಪ್ರಕಾಶನಾರಾಯಣರು ಪಾಟಣಾದಲ್ಲಿ ಒಂದು ಸಂದರ್ಶನದಲ್ಲಿ ಹೇಳಿದರು.

ಮಿಗಳು ಮತ್ತು ಕೂಲಿಕಾರರು ಗಮನಕ್ಕೆ ತಂದುಕೊಂಡು ಸದ್ಯದ ಬಿಕ್ಕಟ್ಟಿನಿಂದ ಪಾರಾಗಲು ಒಮ್ಮತದ ಯೋಜನೆಗಳ ಮೂಲಕ ಪ್ರಯತ್ನಿಸುವುದು ಅನಿವಾರ್ಯ. ಯಾವ ವರ್ಗದವರಾದರೂ ಸಮಷ್ಟಿಯ ಹಿತವನ್ನು ಅಲಕ್ಷಿಸುವ ಧೋರಣೆ ತಳೆದರೆ ಆ ವರ್ಗವಲ್ಲದೆ ಎಲ್ಲ ವರ್ಗವೂ ಕಷ್ಟನಷ್ಟಗಳಿಗೆ ಗುರಿಯಾಗುವುದು ಕಟ್ಟಿಟ್ಟದ್ದು. — ಅರ್ಜುನ

★

"ನಿದ್ದೆಮಾಡುವ ನಾಯಿಗಳೆಲ್ಲ ಬಿದ್ದಿರಲಿ," ಎಂದು ಇಂಗ್ಲಂಡಿನ ಮೊತ್ತಮೊದಲನೆಯ ಪ್ರಧಾನ ಮಂತ್ರಿ ಹೇಳಿದ, ಅದರಂತೆಯೇ ಇಪ್ಪತ್ತೊಂದು ಸಂವತ್ಸರಗಳ ತನಕ ಅಧಿಕಾರವನ್ನು ಚಲಾಯಿಸಿದ. ಆದರೆ, ಅಂತಹ ರಾಜತಂತ್ರಿಗಳು ಪ್ರಪಂಚದ ಚರಿತ್ರೆಯಲ್ಲಿ ಅತಿ ವಿರಳ. ನಿದ್ದೆಮಾಡುವವರನ್ನು ಚುಚ್ಚಿ ಎಬ್ಬಿಸಿ, ಅವರಿಗೆ ಅಪ್ರಿಯ ಔಷಧವನ್ನು ಬಲವಂತದಿಂದ ಕುಡಿಸುವ ವೈದ್ಯರೇ ಬಹಳ. ತನ್ನ ತಲೆಯೊಳಗೆ ಹೊಕ್ಕ ತಂತ್ರಗಳೆಲ್ಲವೂ ಅತ್ಯಂತ ಫಲಕಾರಿ, ಇತರರ ತಲೆಯೊಳಗಿರುವುದೆಲ್ಲ ಮಣ್ಣು, ಎಂಬುದೇ ಸಾಮಾನ್ಯವಾಗಿ ಎಲ್ಲರ ಪ್ರತಿಷ್ಠೆ, ಇಂಥ ಪ್ರತಿಷ್ಠೆ ಇಲ್ಲದಿದ್ದರೆ, ಬದುಕೇ ಅಸಾಧ್ಯ; ಆತ್ಮಹತ್ಯೆಗಳು ಅಧಿಕ. ಹಿಟ್ಲರನು ತನ್ನನ್ನೇ ಜಗದುದ್ಧಾರಕ ಎಂದೆಣಿಸಿದ, ಅವನ ದೇಶದಲ್ಲಿ ಅವನು ಒಬ್ಬನನ್ನೂ ನಿದ್ದೆಮಾಡಗೊಡಲಿಲ್ಲ. ಉತ್ತಿಷ್ಠತ, ಜಾಗ್ರತ, ಪ್ರಾಪ್ಯ ವರಾನ್ನಿಬೋಧತ, ಎಂಬುದೇ ಅವನ ಮಂತ್ರ. ಆದರೆ, ಗುರಿ ಬಹು ಘೋರದ್ದು, ಅಷ್ಟೆ, ಬಹು ಆಳದ್ದು, ಅಷ್ಟೆ; ಅಲ್ಲಿಯತನಕ ತನ್ನ ಪ್ರಜೆಗಳನ್ನೆಲ್ಲ ಅಟ್ಟಿಸಿಕೊಂಡು ಹೋಗಿ, ಅವನು ಹಳ್ಳಕ್ಕೆ ಕೆಡವಿದ. ಹಳ್ಳಕ್ಕೆ ಬಿದ್ದ ತೋಳನ ಮೇಲೆ ಆಳಿಗೊಂದು ಕಲ್ಲು ಹೊಡೆದು ಇತರರು ತೃಪ್ತಿಹೊಂದಿದರು. ಈ ಜಗದುದ್ಧಾರದ ಜ್ವರ ಈಗ ಹಿಟ್ಲರನ ಶತ್ರುಗಳನ್ನು ಬಾಧಿಸಿದೆ. ಪಾಶ್ಚಾತ್ಯ ಪ್ರಜಾಸತ್ತೆ, ಪೌರಸ್ತ್ಯ ಪ್ರಜಾಸತ್ತೆ, ಎಂಬ ಎರಡು ಸಿದ್ಧಾಂತಗಳ ಮಾರಾಟಗಾರರು ಅವುಗಳ ಪ್ರಚಾರಮಾಡುತ್ತ ನಾನು ತಾನು ಎಂದು ಗಿರಾಕಿಗಳನ್ನು ಹುಡುಕುತ್ತ, ಸಿಕ್ಕಿದವರ ಕಿಸೆಯೊಳಕ್ಕೆಲ್ಲ ಕೈ ತುರುಕುತ್ತ, ಪರಸ್ಪರ ದೂಷಣೆಮಾಡುತ್ತ, ಆತನ ಸತ್ತೆ ವಿಷವೆಂದು ಈತನೂ, ಈತನ ಸತ್ತೆ ವಿಷನೆಂದು ಆತನೂ ಡಂಗುರ ಬಡಿಯುತ್ತ, ಗುಲ್ಲೆಬ್ಬಿಸುತ್ತಿದ್ದಾರೆ. ಪ್ರಪಂಚದ ಡೊಂಕು ಹೇಗಾದರೂ ಇರಲಿ, ನಮ್ಮ ನಮ್ಮ ಗುಣಶೀಲಗಳನ್ನು ತಿದ್ದಿಕೊಳ್ಳೋಣ ಎಂಬ ಬುದ್ಧಿ ಪ್ರತಿಒಬ್ಬನಲ್ಲೂ ಅಂಕುರಿಸಿದರೆ ಮಾತ್ರ ಜಗತ್ತಿಗೆ ಶಾಂತಿ. ಉತ್ತಿಷ್ಠತ, ಎತ್ತಿಷ್ಠತ, ಎಂದು ಎಲ್ಲರೂ ಎಲ್ಲರನ್ನೂ ತಿವಿದು ಹೀಯಾಳಿಸಿ ರಟ್ಟೆ ಹಿಡಿದೆಳೆದರೆ, ಶಾಂತಿ ಎಲ್ಲಿಯದು? ಅದಕ್ಕಾಗಿಯೇ, ನಮ್ಮವರು ಹಿಂದೇನೆ, ಅವರವರ ಪ್ರಾಚೀನ ಕರ್ಮವನ್ನು ಅವರವರು ಅನುಭವಿಸಿಯೇ ತೀರಬೇಕು ಎಂದು ಖಂಡಾಖಂಡಿತವಾಗಿ ಬರೆದಿಟ್ಟದ್ದು. ಒಬ್ಬನ ಕರ್ಮಶೇಷವನ್ನು ಇನ್ನೊಬ್ಬನಿಂದ ಅಥವಾ ಇನ್ನೂರೊಬ್ಬರು ಸೇರಿದ ಒಂದು ಸಂಸ್ಥೆಯಿಂದ ತೀರಿಸುವುದಕ್ಕಾಗುವುದಿಲ್ಲವೆಂದು ಘೋಷಿಸಿದ್ದು. ಆದರೆ, ಪರಪೀಡನ ಕುತೂಹಲರಾದ ಜಗದುದ್ಧಾರಕರು ಅದಕ್ಕೊಂದು ಸಮಾಧಾನವನ್ನು ಕಂಡುಹಿಡಿದರು. ನಿದ್ದೆಮಾಡುವವರನ್ನೆಬ್ಬಿಸಿ, ಅವರು ನಿದ್ದೆಮಾಡುತ್ತಿರುವರು ಎಂಬ ಸಿದ್ಧಾಂತವನ್ನು ಅವರಿಗೆ ತಿಳಿಸುವುದು ತಮ್ಮ ಕರ್ಮಶೇಷ, ಅದನ್ನು ತಾವು ನೆರವೇರಿಸಲೇಬೇಕಾಗಿದೆ, ಎಂಬುದು ಅವರ ವಾದ!

ಪರಪೀಡನಂ

ಲೇ:— ಶ್ರೀ ನಾ. ಕಸ್ತೂರಿ

ಪರಪೀಡನದಲ್ಲಿ ಆಸಕ್ತಿ ಇರುವವರು ಕೂತವರನ್ನೆಬ್ಬಿಸುವರು; ನಿಂತವರನ್ನು ನೂಕುವರು, ನಡೆಯುವವರನ್ನು ಓಡಿಸುವರು; ಓಡುವವರನ್ನು ನಿಲ್ಲಿಸುವರು. ಓದು ಬಾರದವರಿಗೆ ಓದು ಕಲಿಸಿ, ಅವರ ಕಣ್ಣಮುಂದೆ ಅಸಹ್ಯ ಅಶ್ಲೀಲ ಅಥವಾ ಅಶಾಂತಿಯುತ ಸಾಹಿತ್ಯವನ್ನು ಹಿಡಿಯುವರು. ಓದುವವರ ಕೈಲಿ ಬರೆಸುವರು; ಬರೆಯುವವರನ್ನು ಟೀಕಿಸಿ, ಖಾರ ಬೆರೆಸಿರಿ, ಸಿಹಿಸೇರಿಸಿರಿ, ಹುಳಿ ಹಿಂಡಿ, ಕೊಳೆ ಕಾಣಿಸಿರಿ ಎಂದು ಅವರ ಲೇಖನಿಗಳನ್ನು ಹಿಡಿದು ಬಗ್ಗಿಸುವರು. ಪಾಪ, ತಮಗೆ ತೋಚಿದಂತೆ ಅವರು ಬರೆಯುವಂತೆಯೇ ಇಲ್ಲ. ನಮಗೆ ಬೇಕಾದುದು ಕ್ರಾಂತಿ ಸಾಹಿತ್ಯ, ಭ್ರಾಂತಿ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಅಜ್ಞಾನ ಸಾಹಿತ್ಯ, ದೇವರ ನಾಮಗಳಲ್ಲ ದಿಂಡರನಾಮಗಳು, ಎಂದು ಮುಂತಾಗಿ ಮೂದಲಿಸಿ, ತಮ್ಮ ಮಾತಿಗೆ "ಊಹೂಂ" ಗುಟ್ಟಿದವರಿಗೆಲ್ಲ ಮೂಲೆಯಲ್ಲಿ ಕೂಡಿಸಿ ಮುಗುದಾರ ಹಾಕುವರು. ಮಾತು ಬಲ್ಲವನನ್ನು ಹಿಡಿದು ಮಾಟ ಕಲಿಸುವರು; ಆಡಬಂದರೆ ಸಾಲದೆಂಬರು; ಹಾಡಬೇಕೆನ್ನುವರು! ಹಾಡಿದರೆ, ಉತ್ತರಾದಿಯೇ ಎಂಬ ಪ್ರಶ್ನೆ ಕೇಳುವರು, ತಾಳ ಅಂತ ಗಾಳಹಾಕಿ, ಹಿಡಿದು ಟೀಕಿಸಿ ಅಪ್ಪಳಿಸುವರು. ತನ್ನ ಸಂತೋಷಕ್ಕೆ ತಾನು ಹಾಡುತ್ತಿದ್ದರೆ, ಅವನನ್ನು ಹೊರಗೆಳೆದು ಅವನ ಕಂಠ ಕರಗಿಸಿ ತಲೆತಿದ್ದಿ ರಾಗ ಪರಿಷ್ಕರಿಸಿ ಜಾಹಿರಾತ್ ಅಂಟಿಸಿ ಪಂಗಡಕಟ್ಟಿ ಕತ್ತಿ ಇರಿದು ಜಲಸೆಗಳಲ್ಲಿ ಜಗಳಹೂಡುವರು.

ನಾಲ್ಕು ಒಳ್ಳೆಯ ಮಾತನಾಡಿಕೊಂಡು, ಬಂದವರನ್ನೆಲ್ಲ ಅಯ್ಯ ಎಂದು ಒಬ್ಬ ಸಂಬೋಧಿಸಿ ಸಭ್ಯ ಎನಿಸಿಕೊಂಡಿದ್ದರೆ, ಇವರು ಅವನನ್ನು ಹಿಡಿದು ಹುರಿಯಾಳು ಮಾಡಿ ರಾಜಕೀಯ ಚುನಾವಣೆಗೆ ನಿಲ್ಲಿಸುವರು. ಸರಿ! ಪ್ರಾರಂಭವಾಯಿತು ಅವನ ಅಧಃಪತನ. ಓಟಿನ ಬೇಟೆಯಲ್ಲಿ ಎದುರಾಳಿನ ಅವಹೇಳನದ ಉರಿಮಳೆ; ಪೈಪೋಟಿಯ ಪಿತೂರಿ; ಮೇಲಾಟದ ಮೋಸಗಾರಿಕೆ. ಸೋತರೆ, ಸೇಡು ತೀರಿಸುವ ಬಗೆ ಏನು ಎಂಬ ಚಿಂತೆ; ಗೆದ್ದರೆ, ಗೆಲ್ಲಿಸಿದವರಿಗೆ ಪ್ರತ್ಯುಪಕಾರ ಎಷ್ಟು ಒದಗಿಸಬೇಕೆಂಬ ಚಿಂತೆ. ಸೇಡು, ತೀರಿಸಿದಷ್ಟೂ ಬೆಳೆಯುತ್ತದೆ, ಪ್ರತ್ಯುಪಕಾರ, ಒದಗಿಸಿದಷ್ಟೂ ಉಳಿದೇ ಇರುತ್ತದೆ. . . .

ನನ್ನ ದಾರಿಯೇ ಸ್ವರ್ಗಮಾರ್ಗ— ಎಂಬ ಅಹಂಕಾರವೇ ಜಗತ್ತಿನ ಸಂಕಟಪರಂಪರೆಗಳ ಹೆಬ್ಬೇರು. ಪರಮತ ನಿಂದೆ, ಸ್ವಮತದ ಧೋರಣೆ ಎಲ್ಲವೂ ಅದರಿಂದ ಹುಟ್ಟಿಕೊಂಡುವು. ಪಂಥಗಳನ್ನು ಕಟ್ಟಿ, ವಾದ ಹೂಡಿ, ಪ್ರತಿವಾದಿಭಯಂಕರ ಎಂಬ ಬಿರುದುಗಳಿಂದ ಮೆರೆದು ತಮ್ಮ ಮೂಗಿನ ನೇರಕ್ಕೆ ತಾವು ಕಾಣುವುದೇ ಸಿದ್ಧಾಂತ ಎಂದು ಸಾಧಿಸಲು ಹೊರಟವರಿಂದಲೇ ಭರತಖಂಡದಲ್ಲಿ ಏಕೆ, ಪ್ರಪಂಚದಲ್ಲಿ ಗೋಳು ಮೊದಲಾದದ್ದು. ಇಂಥವರು ಹೊರನೋಟಕ್ಕೆ ಪರೋಪಕಾರದ ಸೋಗು ಹಾಕಿಕೊಂಡರೂ ಅವರ ಅಂತರಂಗವನ್ನು ತುಂಬಿರುವುದು ಪರಪೀಡನಕುತೂಹಲವೆಂದು ಮನಶ್ಶಾಸ್ತ್ರಜ್ಞರೆಲ್ಲ ಹೇಳುವರು. Persecution Complex ಎಂಬುದು. ಅದರ ಇಂಗ್ಲೀಷು ಭಾಷಾಂತರ, ಒಳಮನಸ್ಸಿನಲ್ಲಿ ಈ ಕಗ್ಗಂಟು ಸೇರಿಕೊಂಡರೆ ಮಾತ್ರ, ಮನುಷ್ಯ ತೀವ್ರ ಪರೋಪಕಾರಿಯಾಗುತ್ತಾನೆ. ತನು ಮನ ಧನಗಳನ್ನೆಲ್ಲ ಪರರ ಉದ್ಧಾರಕ್ಕಾಗಿ ಅರ್ಪಿಸುವ ಮಹನೀಯನ ಒಳಮನ, ಯಾರೂ ನೆಮ್ಮದಿಯಿಂದ ತೆಪ್ಪಗೆ ಸುಖವಾಗಿ ಶಾಂತವಾಗಿ ತೃಪ್ತರಾಗಿ ಇರಕೂಡದು; ನನ್ನ ಕೈಲಾದಷ್ಟು ನಾನು ಅವರನ್ನು ಪೀಡಿಸಿ ಆನಂದಿಸುತ್ತೇನೆ" ಎಂದು ಸಂಕಲ್ಪ ಮಾಡಿರುತ್ತದೆಯಂತೆ!

ಕಂಡದ್ದು ಶುದ್ಧ ಸತ್ಯವಾದರೆ, ಪೂರ್ಣ ಸತ್ಯವಾದರೆ, ಕಂಡವನು ಮೂಕನಾಗುತ್ತಾನೆ; ತಾಳ್ಮೆಯಿಂದಿರುತ್ತಾನೆ. ಅವನ ಅಹಂಕಾರವೇ ಉಡುಗಿ ಹೋಗುತ್ತದೆ. ಆದರೆ, ಕಂಡ ಸತ್ಯ ಮಿಶ್ರವಾಗಿದ್ದರೆ, ಅಪೂರ್ಣವಾಗಿದ್ದರೆ, ಅವನಲ್ಲಿ ಅಮಲು ಹತ್ತುತ್ತದೆ; ಮದ ಹೆಚ್ಚುತ್ತದೆ. 'ಎಲಾ! ಇಷ್ಟು ಜನ ಪಾಪಿಗಳು ನರಕಕ್ಕೆ ಹೋಗುತ್ತಿದ್ದಾರಲ್ಲಾ! ಇವರಿಗೆಲ್ಲ ಬಲವಂತದಿಂದ ಮಾಘ ಸ್ನಾನ ಮಾಡಿಸಿ ನಾನು ನನ್ನ ದಾರಿಗೆಳೆದು ನಾನು ಕಂಡ ಸ್ವರ್ಗಕ್ಕೆ ಎಳೆದೊಯ್ಯಬೇಡವೆ?" ಎನಿಸುತ್ತದೆ. ಬಲವಂತ ಮತ ಪರಿವರ್ತನೆಯ ಮೂಲವೇ ಈ ಅಹಂಕಾರ. ಮತ್ತೊಂದು ಬಗೆಯ ತಪ್ಪು ತಿಳಿವಳಿಕೆಯೂ ಉಂಟು. ಅದರ ವಿಚಾರ ಸರಣಿ ಹೀಗೆ: ನನ್ನ ದೇವರೇ ಸತ್ಯ. ಅವರಿಗೆ ಒಂದೇ ಹೆಸರು. ಆ ದೇವರನ್ನು ಈ ಹೆಸರಿನಲೇ ಈ ರೀತಿಯಿಂದಲೇ ಆರಾಧಿಸಬೇಕು. ಆ ಹೆಸರನ್ನು ಅರಿತವರು ಇತರ ಹೆಸರುಗಳನ್ನೂ ಇತರ ಆರಾಧನಾವಿಧಾನಗಳನ್ನೂ ಕಿವಿಯಿಂದ ಹೇಳಕೂಡದು; ಕಣ್ಣಿಂದ ಕಾಣಕೂಡದು; ಕೇಳಿದರೆ, ಕಂಡರೆ, ಅವರ ನಂಬಿಕೆ ಸಡಿಲವಾಗುವುದು; ಶ್ರದ್ಧೆ ಕ್ಷಯಿಸುವುದು; ಅದ್ದರಿಂದ, ಅವರ ಕಣ್ಣನ್ನು ಕುರುಡು ಮಾಡಬೇಕು; ಕಿವಿಗೆ ಕಿವುಡು ಬಡಿಯಬೇಕು; ಇತರ ಹೆಸರುಗಳನ್ನು ಉಪಯೋಗಿಸಿದರೆ, ಅದು ವ್ಯಭಿಚಾರಕ್ಕೆ ಸಮ ಎಂದು ಸಾರಬೇಕು.... ನಮ್ಮದೇ ಒಂದು ಪಂಥ ಕಟ್ಟಬೇಕು; ಅದು ಇನ್ನೆಲ್ಲ ಪಂಥಗಳನ್ನು ಮೆಟ್ಟಿ ನಿಲ್ಲಬೇಕು; ಅದ ಕ್ಕೋಸ್ಕರ, ಅವುಗಳನ್ನೆಲ್ಲ ಅಹರ್ನಿಶಿ ಖಂಡಿಸಬೇಕು; ದೂರಬೇಕು; ದೂರ ಇರಿಸಬೇಕು.... ಇತ್ಯಾದಿ ಇತ್ಯಾದಿ, ವಿಚಾರ ತರಂಗದಿಂದ ಧರ್ಮದ ಅಧಃಪತನದ ದರಿ ಸುಲಭವಾಗಿ ಸಿದ್ಧವಾಗುವುದು.

ಮನುಷ್ಯ, ಸ್ವಭಾವತಃ ಕ್ರೂರ ಮೃಗ. ಇರುವೆಗಳನ್ನು ಹಿಸುಕುವುದೆಂದರೆ ಹಸುಗೂಸಿಗೂ ಆನಂದ. ಬೇಟೆಯಾಡುವುದನ್ನು, ಪಾಪ, ಗುಳ್ಳೆ ನರಿಯ ಬೇಟೆಯನ್ನು ಆತ್ಯಾಧುನಿಕ ನಾಗರಿಕರೂ ತೊರೆದಿಲ್ಲ. ಹೊಗೆ ಉಗುಳಿ ಇತರರಿಗೆ ಅಸಹ್ಯವನ್ನು ಉಂಟುಮಾಡಬಹುದಲ್ಲಾ, ಎಂಬ ಆಸೆಯಿಂದಲೇ ಶೇಕಡ ತೊಂಬತ್ತು ಜನ ಸಿಗರೇಟು ಸೇದುತ್ತಿರುವರಂತೆ. ಧೂಳೆಬ್ಬಿಸದ ಕಾರಿನಲ್ಲಿ ಪ್ರಯಾಣ ಮಾಡುವುದು ಅಷ್ಟು ಹಿತಕರವಲ್ಲವೆಂದು ಅಮೇರಿಕದವರು ಶೇಕಡ ಅರವತ್ತು ಜನ ಅಭಿಪ್ರಾಯಪಟ್ಟಿರುವರಂತೆ. ಕ್ರೀಡಾಂಗಣದಲ್ಲೂ ಎಂಥ ಉತ್ತಮ ಆಟಗಾರನೂ ಎದುರಾಳಿಗೆ ಹೇಗಾದರೂ, ಕಾನೂನು ಕಟ್ಟಳೆಗಳಿಗೊಳಗಟ್ಟು, ಪೆಟ್ಟು ಕೊಡುವುದಕ್ಕಾಗಿಯೇ ಹವಣಿಸುತ್ತಾನೆ. ಕೋರ್ಟು ಕಚೇರಿಗಳನ್ನೂ ಕೂಡ ಪರಪೀಡನ ಕುತೂಹಲರು ಅದಕ್ಕಾಗಿಯೇ ಆಳವಡಿಸಿಕೊಳ್ಳುತ್ತಾರೆ. ಪ್ರೈಮರಿ ಶಾಲೆಗಳಲ್ಲಿರುವ ಮಾಸ್ತರುಗಳು ಬಹುಮಂದಿ, ತಮ್ಮ ಅಂತರಂಗದ ಕ್ರೌರ್ಯವನ್ನು ಶಮನಗೊಳಿಸುವುದಕ್ಕಾಗಿಯೇ ಆ ವೃತ್ತಿಯನ್ನವಲಂಬಿಸಿರುವರು ಎಂದರೆ, ತಪ್ಪಾಗಲಾರದು. "ಲೋ! ನಿನ್ನ ಶ್ರೇಯಾಭಿವೃದ್ಧಿಗಾಗಿಯೇ ನಾನು ನಿನ್ನನ್ನು ಹೊಡೆಯುತ್ತಿರುವುದು" ಎಂದು ಮಾಸ್ತರರು ಏಟು ಏಟಿಗೂ ಹೇಳುತ್ತಿರುತ್ತಾರೆ, ನಿಜ. ಆದರೆ ಇತರರನ್ನು ನೋಯಿಸಿದರೆ ಮಾತ್ರ ಅಂತರಂಗ ತೃಪ್ತಿ ಪಡೆಯುವ ಸ್ವಭಾವದವರು, ಅವರು, ಖಂಡಿತ! ಅವರು ಅದನ್ನು ಅರಿಯರು, ಪಾಪ. ಪರಹಿಂಸೆಯಿಂದ ಮನುಷ್ಯನಿಗೆ ಅಂತರಿಕವಾದ ಆನಂದ ಸಿಗುವುದಿಲ್ಲವೆಂದಿದ್ದರೆ, ಕಾರಾಗೃಹಗಳಿಗೂ ವಧ್ಯಸ್ಥಾನಗಳಿಗೂ ನೌಕರಿದಾರರು ಎಲ್ಲಿಂದ ಸಿಗುತ್ತಿದ್ದರು?

ಈ ಲೇಖನವನ್ನೋದಿದವರು, ಎಲಾ! ಇಂಥ ಘೋರ ಸತ್ಯವನ್ನು ಈತ ಏಕೆ ಹೊರಗೆಡಹಿದ? ಪರೋಪಕಾರ ಮಾಡುತ್ತಿರುವ ಪುಣ್ಯಾತ್ಮರು, ಯಾವ ವಿಧವಾದ ಅಂತರಂಗ ಪ್ರೇರಣೆಯಿಂದ ಅದನ್ನು ಮಾಡಿದರೆ, ತಾನೆ ಏನು? ಅದರ ಫಲ ಮುಖ್ಯವೇ ಹೊರತು, ಅದರ ಬೇರು ಕೆಸರಿನಲ್ಲಿ ಹೂತಿದೆ, ಕೊಳೆಯಲ್ಲಿ ಅದ್ದಿದೆ, ಕ್ರೌರ್ಯದಿಂದ ಮೇಲೇರಿ ಬಂದಿದೆ, ಎಂದೆಲ್ಲ ಈತ ಏಕೆ ತೋಡಿದ?— ಎಂದು ಕೇಳಬಹುದು! ಅದಕ್ಕೆ ನನ್ನ ಉತ್ತರ ಇಷ್ಟೆ.... ನಾನೂ ಒಬ್ಬ ಮನುಷ್ಯ! ಪುಣ್ಯಾತ್ಮರ ಒಳಮನದ ಒಳಗೂ ಪಾಪದ ರೇಖೆ ಇದೆ, ಎಂದು ಪ್ರಕಟಿಸಿದರೆ, ನನಗೊಂದು-ತೆರನ ತೃಪ್ತಿ!

ಕಲೆಗಾರ ಮುತ್ಸದ್ದಿಗಳು

ರಾಜಕಾರಣದಲ್ಲಿ ತಲೆಹಾಕಿದವರೆಲ್ಲ "ಶುಷ್ಕೋ ವೃಕ್ಷಸ್ತಿಷ್ಠತ್ಯಗ್ರೇ" ಎಂಬ ಅರಸಿಕ ವರ್ಗಕ್ಕೇ ಸೇರಿದವರೆಂದರೆ ತಪ್ಪಾಗುವುದು. ಜಗತ್ತಿನ ಪ್ರಸಿದ್ಧ ಮುತ್ಸದ್ದಿಗಳಲ್ಲಿ ಹಲವರು ಚಿತ್ರಕಲಾನಿಪುಣರೆನಿಸಿದ್ದಾರೆ. ಚೀನದ ವಾಂಗ್ ವೀ, ಇಂಗ್ಲಂಡಿನ ವಿನ್‌ಸ್ಟನ್ ಚರ್ಚಿಲ್, ಹಾಲೆಂಡಿನ ವಿಲ್‌ಹೆಲ್ಮಿನಾ ರಾಣಿ, ಜರ್ಮನಿಯ ಹಿಟ್ಲರ್ ಮೊದಲಾದವರು ಅವರಲ್ಲಿ ಪ್ರಮುಖರು. ಒಮ್ಮೆ ಚೀನದ ರಾಜಕುಮಾರ ಚೂನನು ಚಿತ್ರಕಲೆಗಾಗಿ ರಾಜ್ಯಭಾರದಿಂದ ನಿವೃತ್ತನಾದನೆಂದು ಪ್ರಸಿದ್ಧಿಯಿದೆ. ಭಾರತದ ಕ್ಷತ್ರಿಯ ಕುಟುಂಬಗಳಲ್ಲಾದರೂ ಅನೇಕ ರಾಜಕುಮಾರ ಕುಮಾರಿಯರು ಚಿತ್ರಕಲೆಯಲ್ಲಿ ನಿಷ್ಣಾತರಾಗಿದ್ದರೆಂಬ ಅಂಶ ಇತಿಹಾಸ ಕಥಾದಿಗಳಿಂದ ತಿಳಿದುಬರುತ್ತದೆ. "ಭೂಪತಿಯು ಕವಿಯಾಗಿ ಕವಿ ಭೂಪತಿ" ಯಾದ ಕನ್ನಡನಾಡಿಗಂತೂ ಇದೆಂದೂ ಹೊಸದಲ್ಲ.

ಅಮೇರಿಕಕ್ಕೆ ಆನೆಗಳು

ಅಮೇರಿಕದ ಕೆಲವು ಸರ್ಕಸ್ ಕಂಪನಿಗಳಿಗಾಗಿ ಕಲಕತ್ತದಿಂದ ಕೆಲವು ಆನೆಗಳನ್ನು ಕಳಿಸಲಾಗುವದಂತೆ. ಈ ಆನೆಗಳನ್ನು ವಿಮಾನಗಳ ಮೇಲೆ ಒಯ್ಯಲು ತಕ್ಕ ಸಿದ್ಧತೆ ನಡೆದಿದೆ. ಈ ಹಿಂದೆ ಇದೇ ಮೇರೆಗೆ ಹಕ್ಕಿ, ಮಂಗ, ಜಿರಾಫೆ ಮುಂತಾದ ೧೪೦೦ ಜೀವಿಗಳನ್ನು ನ್ಯೂಯಾರ್ಕಿಗೂ ಕೆಲವು ಯುರೋಪಿಯನ್ ನಗರಗಳಿಗೂ ಕಳಿಸಲಾಗಿತ್ತು. ಕಳಿಸಿದ ಹಕ್ಕಿಗಳಿಗೆ ಬದಲಾಗಿ ಯುರೋಪಿನಿಂದಲೂ ಬೇರೆ ಬಗೆ ಬಗೆಯ ಹಕ್ಕಿಗಳು ಕಲಕತ್ತಕ್ಕೆ ನಿರ್ಯಾತ ಮಾಡಲ್ಪಡುವುವಂತೆ.

ಆಂಧ್ರ ಪ್ರಾಂತೀಕರಣದ ಬಗ್ಗೆ ಭಿನ್ನಾಭಿಪ್ರಾಯ

ಕಾಂಗ್ರೆಸ್ಸಿಗರಿಗೆ ಸರದಾರರ ಸ್ಪಷ್ಟೋಕ್ತಿ

ಆಂಧ್ರರು ಮತ್ತು ಪ್ರಾಂತೀಕರಣ

ಕಾಂಗ್ರೆಸ ಕಾರ್ಯಸಮಿತಿಯು ಆದೇಶಿಸಿದಂತೆ ಆಂಧ್ರರು ಮದರಾಸಿನ ಮೇಲಿನ ಮೋಹವನ್ನು ಬಿಟ್ಟುಗೊಟ್ಟು ವಿವಾದಾಸ್ಪದವಾದ ಭಾಗಗಳನ್ನು ಬಿಟ್ಟುಗೊಡಲು ಸಿದ್ಧರಾದರೆ ಆಂಧ್ರ ಪ್ರಾಂತ ರಚನೆಯಾಗುವದಷ್ಟೇ. ಅದಕ್ಕನುಸಾರವಾಗಿ ಆಂಧ್ರ ಮಹಾಸಭೆಯ ಕಾರ್ಯ ಸಮಿತಿಯು ಹತ್ತನೆಯ ತಾರೀಕಿನ ದಿನ ಸಭೆ ಸೇರಿ ತ್ರಿಮೂರ್ತಿ ವರದಿಯಲ್ಲಿಯ ಕರಾರಪತ್ರಗಳನ್ನು ಅಂಗೀಕರಿಸಿತು. ಮದರಾಸಿನ ಮೇಲಿನ ಹಕ್ಕನ್ನು ಬಿಟ್ಟುಗೊಡಲು ಮನಸ್ಸಿಲ್ಲದಿದ್ದರೂ ಒಪ್ಪಲಾಯಿತು. ಮದರಾಸನಗರ ಮತ್ತು ಅದಕ್ಕೆ ಹೊಂದಿಕೊಂಡ ಬಹುಭಾಷಾ ಗ್ರಾಮಗಳ ಆಡಳಿತೆಯ ಬಗ್ಗೆ ಬೇರೊಂದು ವ್ಯವಸ್ಥೆ ಮಾಡಲು ಘಟನಾ ಸಮಿತಿಯು ಸಲಹೆ ಮಂಡಲವನ್ನು ಬಿನ್ನವಿಸಲಾಯಿತು. ಆಂಧ್ರ ಮತ್ತು ಉತ್ಕಲಗಳ ಗಡಿಯ ಬಗ್ಗೆ ಉಂಟಾದ ವಿವಾದವನ್ನು ಬಗೆಹರಿಸಲು ಆಂಧ್ರ ಪ್ರಾಂತದ ನಿರ್ಮಾಣವಾದ ಕೂಡಲೆ ಕ್ರಮ ಕೈಕೊಳ್ಳಬೇಕೆಂದು ಸೂಚಿಸಲಾಯಿತು. ಆಂಧ್ರ ಮಹಾ ಸಮಿತಿ ಇಂತು ಗೊತ್ತುವಳಿ ಮಾಡುವಾಗ ಆಂಧ್ರ ಪ್ರಾಂತೀಯ ಕಾಂಗ್ರೆಸ ಸಮಿತಿಯು ಮದ್ರಾಸದ ಮೇಲಿನ ಹಕ್ಕನ್ನು ಬಿಟ್ಟುಗೊಡಲು ಸಿದ್ಧವಿಲ್ಲ. ಈ ಬಗ್ಗೆ ಆ ಸಮಿತಿಯು ವಿಚಾರ ಮಾಡಿ ಮದರಾಸು ರಾಜಧಾನಿಯಾಗಿರುವ ಆಂಧ್ರ ಪ್ರಾಂತವನ್ನು ಕೂಡಲೆ ರಚಿಸಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿತು. ಕೇಳಕರರ ನಿರ್ಣಯಗಳನ್ನೊಳಗೊಂಡ ಆಂಧ್ರ ಪ್ರಾಂತವು ಹಿಂದೆಯೆ ಅಸ್ತಿತ್ವದಲ್ಲಿ ಬಂದಿದೆಂದೂ ಆಂಧ್ರ ಕಾಂಗ್ರೆಸ ಸಮಿತಿಯು ನಿರ್ಣಯಿಸಿದೆ. ಇವೆರಡೂ ಮಹಾಸಭೆಗಳು ಇಂತು ಪರಸ್ಪರ ಭಿನ್ನಾಭಿಪ್ರಾಯ ಪಡುತಿರುವಾಗ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಂಧ್ರದ ಮುಖಂಡರೂ ಆಗಿರುವ ಡಾ. ಪಟ್ಟಾಭಿಯವರು ಹೊಸ ಘಟನೆ ಬರುವದರಲ್ಲಿಯೆ ಆಂಧ್ರ ಪ್ರಾಂತವಾಗಬೇಕು. ಅದಕ್ಕಾಗಿಯೆ ಮದರಾಸ ನಗರದ ಮೇಲಿನ ಹಕ್ಕನ್ನು ಬಿಟ್ಟಿರುತ್ತೇವೆ ಎಂದು ಮುಂತಾಗಿ ಹೇಳಿಕೆ ಕೊಟ್ಟಿರುವರು. ಅಲ್ಲದೆ ಸಾರ್ವಜನಿಕರ ಅಭಿಪ್ರಾಯವನ್ನು ಗಮನಿಸಿದರೆ ಆಂಧ್ರ ಮತ್ತು ತಮಿಳನಾಡು ಪ್ರಾಂತಗಳ ಸ್ಥಿರ ರಾಜಧಾನಿಗಳು ನಿರ್ಣಯಿಸಲ್ಪಡುವವರೆಗೆ ಮದರಾಸ ನಗರವು ಎರಡು ಪ್ರಾಂತದವರಿಗೂ ರಾಜಧಾನಿಯಾಗಿರಬೇಕೆಂದು ಹೇಳಿದಂತಾಗುವದು. ಆದುದರಿಂದ ಗವರ್ನರ ಜನರಲ್‌ರು ವಿಶೇಷ ಆಜ್ಞೆಯನ್ನು ಹೊರಡಿಸಿ ಮದರಾಸ ನಗರವು ಆಂಧ್ರರ ತಾತ್ಪೂರ್ತಿಕ ರಾಜಧಾನಿಯೆಂದು ಸಾರಬೇಕಾಗುವದು ಎಂದೂ ರಾಷ್ಟ್ರಪತಿಗಳು ಅಭಿಪ್ರಾಯಪಟ್ಟಿರುವರು.

ಪೂರ್ವ ಪಂಜಾಬದ ಪ್ರಶ್ನೆ

ಪಂಜಾಬಿ ಭಾಷೆಯನ್ನಾಡುವ ಪ್ರದೇಶಗಳ ಪ್ರತ್ಯೇಕ ಪ್ರಾಂತವನ್ನು ರಚಿಸಬೇಕೆಂಬ ಠರಾವನ್ನು ಅಮೃತಸರದಲ್ಲಿ ಸೇರಿದ್ದ ಶೀಖರ ಪಾಂಥಿಕ ಮಹಾಸಭೆಯ ಸಭೆಯಲ್ಲಿ ಸ್ವೀಕರಿಸಲಾಯಿತು. ಭಾಷೆ ಮತ್ತು ಸಂಸ್ಕೃತಿಯ ತಳಹದಿಯ ಮೇಲೆ ಪೂರ್ವ ಪಂಜಾಬನ್ನು ವಿಭಾಗಿಸಿ ಪಂಜಾಬಿ ಭಾಷೆಯನ್ನಾಡುವವರ ಸ್ವತಂತ್ರ ಪ್ರಾಂತವನ್ನು ರಚಿಸಬೇಕೆಂದು ಈ ಗೊತ್ತುವಳಿಯಲ್ಲಿ ಹೇಳಲಾಗಿದೆ. ಜನರಲ್ ಭೂಪಸಿಂಗರು ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಸಾಮಾನ್ಯವಾಗಿ ಈ ಬೇಡಿಕೆಗೆ ಬೆಂಬಲ ದೊರೆಯಿತೆಂದು ಹೇಳಬಹುದು. ವಿರೋಧಕರು ಮಾತಾಡದಂತೆ ಗದ್ದಲ ಹಾಕಲಾಗುತಿದ್ದಿತು. ಈ ಬಗೆಯ ಬೇಡಿಕೆಯು ಶೀಖರ ಒಂದು ತಂಡದ್ದೆಂದು ಹೇಳಬಹುದು. ಮುಖ್ಯಮಂತ್ರಿ ಭೀಮಸೇನ ಸಾಚಾರರು ಶೀಖರ ಮತ್ತೊಂದು ತಂಡದ ಬೇಡಿಕೆಗಳ ಬಗ್ಗೆ ಸರದಾರ ಪಟೇಲ ಮತ್ತು ಮುಖ್ಯ ಮಂತ್ರಿ ನೆಹರು ಇವರೊಡನೆ ಚರ್ಚಿಸುವದಕ್ಕಾಗಿ ದಿಲ್ಲಿಗೆ ಹೋಗಿದ್ದಾರೆ. ಗುರುಮುಖಿ ಲಿಪಿಯುಳ್ಳ ಪಂಜಾಬಿ ಭಾಷೆಯನ್ನು ಸರಕಾರೀ ಭಾಷೆಯನ್ನಾಗಿಸಬೇಕು. ಸರಕಾರಿ ನೌಕರಿಗಳಲ್ಲಿ ಮತ್ತು ಶಾಸನ ಸಭೆಗಳಲ್ಲಿ ತಮಗೆ ಯೋಗ್ಯ ಪ್ರಾತಿನಿಧ್ಯ ದೊರೆಯಬೇಕು ಎಂದ ಮುಂತಾಗಿ ಅವರ ಬೇಡಿಕೆ. ಶಾಸನ ಸಭೆಯಲ್ಲಿ ಹೆಚ್ಚಿನ ಪ್ರಾತಿನಿಧ್ಯದ ಪ್ರಶ್ನೆಯು ಘಟನಾಸಮಿತಿಗೆ ಸೇರಿದ್ದು. ಪಂಜಾಬದಲ್ಲಿ ಪಂಜಾಬಿಯಲ್ಲದೆ ಬೇರೆ ಭಾಷೆಗಳೂ ಇರುವದರಿಂದ ಪಂಜಾಬೀ ಭಾಷೆಯನ್ನು ಸರಕಾರಿ ಭಾಷೆಯೆಂದು ಪರಿಗಣಿಸಲಾಗದು ಎಂದು ಅಭಿಪ್ರಾಯ ಪಡಲಾಗುತ್ತದೆ.

ಮಾನ್ಯ ಮುರಾರಜಿಯವರು

ಮುಂಬಯಿ ಸರಕಾರದ ಗೃಹ ಮಂತ್ರಿಗಳಾದ ಮಾನ್ಯ ಮುರಾರಜಿಯವರು ಕಳೆದ ವಾರ ಧಾರವಾಡ ಜಿಲ್ಹೆಯಲ್ಲಿ ಸಂಚರಿಸಿದಾಗ ಕೆಲ ಮಹತ್ವದ ಮಾತುಗಳನ್ನು ಹೇಳಿದರು. "ಪರಸ್ಪರರು ಪ್ರೇಮದಿಂದ ಕೆಲಸ ಮಾಡಲು ಕಲಿತು ನಮ್ಮ ರಾಷ್ಟ್ರವನ್ನು ಬಲಪಡಿಸಬೇಕು. ಕಲಹದಿಂದ ಕಲಹ, ಪ್ರೇಮದಿಂದ ಪ್ರೇಮ ಉತ್ಪನ್ನವಾಗುವದೆಂಬದನ್ನು ಮರೆಯಲಾಗದು" ಎಂದು ಅವರು ರಾಣೇಬಿನ್ನೂರ ನಗರ ಸಭೆಯಿತ್ತ ಮಾನಪತ್ರಕ್ಕೆ ಉತ್ತರ ಕೊಡುವಾಗ ಹೇಳಿದರು. ಕರ್ನಾಟಕ ಪ್ರಾಂತೀಕರಣದಬಗ್ಗೆ ನಿಮ್ಮಲ್ಲಿದ್ದ ಹಂಬಲ, ಆಸಕ್ತಿಗಳ ಅರಿವು ನನಗಿದೆ ಕಾಂಗ್ರೆಸ್ಸು, ಒಪ್ಪಿಕೊಂಡ ಪ್ರಾಂತೀಕರಣದ ತತ್ವವನ್ನು ಬಿಟ್ಟುಕೊಡಲಾರದು. ಆದರೆ ಯಾವುದೊಂದು ಮಾತು ಕಾಲ ಬಂದಾಗ ಆಗುತ್ತದೆ. ಸ್ವಾತಂತ್ರ್ಯದಿಂದ ಉದ್ಭೂತವಾದ ಹಲವು ಸಮಸ್ಯೆಗಳ ನಿವಾರಣೆಗಾಗಿ ಬೇರೆ ಹಲವು ವಿಷಯಗಳನ್ನು ಮುಂದೂಡಬೇಕಾಗುವದು. ನೀವು ಒಮ್ಮೆಲೆ ಆತುರ ಪಡಬಾರದು. ರಾಷ್ಟ್ರ ವಿಭಜನೆಯಿಂದಾದ ಕಷ್ಟನಷ್ಟಗಳು ನಮಗೆ ಗೊತ್ತಿವೆ. ಮಹಾತ್ಮರನ್ನು ನಾವು ಕಳೆದುಕೊಳ್ಳಬೇಕಾಯಿತು. ಜಾತೀಯವಾದವು ವಿಷಮಯವಾಗಿದೆ ಪ್ರಾಂತೀಯತೆಯವಾದ ಹೆಚ್ಚಾದರೆ ಅದೂ ವಿಷವಾಗುವದು ಎಂದು ಹೇಳಿದರು. ಆಗ 'ಶೇಮ' ಎಂಬ ಧ್ವನಿಯೊಂದುಕೇಳಿಸಿತು. ಕೂಡಲೆ ಮುರಾರಜಿಯವರು ತಮ್ಮ ವಿಚಾರ ಸರಣಿಯನ್ನು ಮುಂದುವರಿಸಿ ಪ್ರಾಂತೀಯತೆಯ ಅತಿರೇಕದಿಂದಾಗುವ ಹಾನಿಯನ್ನು ವಿವರಿಸಿದರು. ಗಡಿ ನಿರ್ಣಯದ ಬಗ್ಗೆ ಉಂಟಾಗುವ ತಿಕ್ಕಾಟವನ್ನು ತಿಳಿಸಿದರು. ಹೀಗೆ ಪರಸ್ಪರರು ಜಗಳಾಡಿದರೆ ಪ್ರಾಪ್ತವಾದ ಸ್ವಾತಂತ್ರ್ಯವೂ ನಶಿಸಿ ಹೋಗಬಹುದೆಂದು ಅಭಿಪ್ರಾಯಪಡುತ್ತ ಹಿಂದೆ ಸಣ್ಣ ಸಣ್ಣ ಸಂಸ್ಥಾನಿಕರು ಬಡಿದಾಡುತ್ತ ರಾಜ್ಯವನ್ನು ಕಳೆದುಕೊಂಡದ್ದನ್ನು ತಿಳಿಸಿದರು. ಆದುದರಿಂದ ಪರಸ್ಪರರು ಪ್ರೇಮದಿಂದ ಇದ್ದು ರಾಷ್ಟ್ರವನ್ನು ಬಲಪಡಿಸಬೇಕು. ಯಾವದೇ ಉದ್ಯೋಗ ಕೈಕೊಂಡರೂ ಪ್ರಾಮಾಣಿಕತೆ, ಕ್ರಿಯಾಸಿದ್ಧಿ ಮತ್ತು ನಿಷ್ಠೆ ಇರಲಿ. ಪ್ರಾಮಾಣಿಕತೆಯೇ ರಾಮರಾಜ್ಯ. ಎರಡನೆಯವರಿಗೆ ರಾವಣನಾಗುವ ಇಚ್ಛೆ ನನಗೆ ಇಲ್ಲ. ರಾಮನಬುದ್ಧಿಯಿಂದ ಕೆಲಸ ಮಾಡಲು ಪ್ರಯತ್ನಿಸುವೆ. ಎರಡನೆಯವರಿಗೆ ಅನ್ಯಾಯ ಮಾಡುವಬುದ್ಧಿಯುಂಟಾಗದಿರಲೆಂದು ನಾನು ಪರಮಾತ್ಮನನ್ನು ಪ್ರಾರ್ಥಿಸುವೆ ಎಂದು ಮುಂತಾಗಿ ಹೇಳಿದರು.

× × ×

ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಸರಕಾರೀ ಅಧಿಕಾರಿಗಳು ಶಿಸ್ತಿನಿಂದ ಮತ್ತು ಜನತೆಯ ಸಹಕಾರದಿಂದ ಕೆಲಸ ಮಾಡಬೇಕು" ಎಂದು ಧಾರವಾಡದಲ್ಲಿ ಅಧಿಕಾರಿಗಳನ್ನುದ್ದೇಶಿಸಿ ಭಾಷಣ ಮಾಡುತ್ತ ಮಂತ್ರಿಗಳು ಹೇಳಿದರು. ಸರಕಾರವೆಂದರೆ ದೇಹದಲ್ಲಿಯ ಮೆದುಳು ಮತ್ತು ಅಧಿಕಾರಿಗಳು ಅವಯವಗಳು ಇದ್ದಂತೆ. ದೇಹದ ಚಟುವಟಿಕೆಗಾಗಿ ಇವೆರಡರಲ್ಲಿ ಸಹಕಾರವಿರಬೇಕು. ಅಧಿಕಾರಿಗಳ ಬಗ್ಗೆ ಮೊದಲಿದ್ದ ಸಂಶಯದ ವಾತಾವರಣ ತೊಲಗಬೇಕು. ಆಯಾ ಶಾಖೆಗಳ ಅಧಿಕಾರಿಗಳು ಆಗಾಗ ಕೂಡಿ ಚರ್ಚಿಸಿದರೆ ಕಾರ್ಯ ಬಹಳ ಮಟ್ಟಿಗೆ ಸುಗಮವಾಗುವದು. ಲಂಚಗುಳಿತನವು ಬ್ರಿಟಿಶ ಸರಕಾರದ ಕಾಲದಿಂದಲೂ ಇರುವ ರಾಕ್ಷಸವು. ಇದನ್ನು ಹೋಗಲಾಡಿಸಲು ನಾವು ಲಂಚ ನಿರ್ಮೂಲನ ಶಾಖೆಯನ್ನು ಸ್ಥಾಪಿಸಿರುವೆವು. ಕೈಕೆಳಗಿನ ನೌಕರರು ಮತ್ತು ಜನತೆಯ ಕೂಡ ಅಧಿಕಾರಿಗಳು ಅತ್ಯಂತ ನಮ್ರತೆಯಿಂದ ಇರಬೇಕು. ಪ್ರತಿಯೊಬ್ಬ ಅಧಿಕಾರಿಯು ತನ್ನ ಕಚೇರಿಯಲ್ಲಿಯ ನಿತ್ಯದ ಕಾಗದ ಪತ್ರಗಳನ್ನು ಅಂದೇ ಮುಗಿಸಿ ಬಿಡುವ ಪಣ ತೊಡಬೇಕು. ಪ್ರಜಾರಾಜ್ಯವೆಂದರೆ ಬಹಳ ಜನರಿಗಲ್ಲ; ಆದರೆ ಎಲ್ಲರಿಗೂ ನ್ಯಾಯ ದೊರೆಯಬೇಕು. ಇದೆಲ್ಲವನ್ನು ತಿಳಿದುಕೊಂಡು ಅಧಿಕಾರಿಗಳು ವರ್ತಿಸಬೇಕು ಎಂದು ಮುಂತಾಗಿ ಹೇಳಿದರು. ಕಲೆಕ್ಟರ ಬೆಂಜಾಮಿನ್‌ರು ಆಭಾರಮನ್ನಿಸುತ್ತ ಜಿಲ್ಹೆಯಲ್ಲಿಯ ನೌಕರರೆಲ್ಲ ಮಂತ್ರಿಗಳ ಆದೇಶಗಳನ್ನು ಅಕ್ಷರಶಃ ಪಾಲಿಸುವ ಆಶ್ವಾಸನವನ್ನು ಕೊಟ್ಟರು. ಈ ಆಶ್ವಾಸನವು ಎಲ್ಲೆಡೆ ಕೃತಿಯಲ್ಲಿ ಇಳಿದರೆ ಮಂತ್ರಿಗಳು ತೆಗೆದುಕೊಂಡ ಶ್ರಮ ಸಾರ್ಥಕವಾಗುವದು.

ಸ್ಪಷ್ಟೀಕರಣ

ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಇವರು ಲಂಡನಿಗೆ ಹೋಗಿ ಕಾಮನ್‌ವೆಲ್ತ ಪರಿಷತ್ತಿನಲ್ಲಿ ಭಾಗವಹಿಸಿ ಹಿಂದುಸ್ಥಾನವು ಕಾಮನ್‌ವೆಲ್ಥದಲ್ಲಿ ಉಳಿಯುವುದೆಂಬುದಾಗಿ ಹೇಳಿ ಬಂದಿರುವರಷ್ಟೇ— ಅವರ ಒಡಂಬಡಿಕೆಗೆ ಘಟನಾ ಸಮಿತಿ ಮತ್ತು ಕಾಂಗ್ರೆಸ ಕಾರ್ಯ ಸಮಿತಿಯು ಒಪ್ಪಿಗೆ ಕೊಡಬೇಕಾಗಿದೆ. ಮುಖ್ಯ ಮಂತ್ರಿಗಳು ಮಾಡಿಕೊಂಡ ಈ ಒಡಂಬಡಿಕೆಗೆ ಇವೆರಡೂ ಸಂಸ್ಥೆಗಳು ಒಪ್ಪಿಗೆ ಕೊಡುವವೆಂಬಲ್ಲಿ ಸಂದೇಹವಿಲ್ಲ. ಜಾಗತಿಕಶಾಂತಿಯನ್ನೆ ಮುಖ್ಯಧ್ಯೇಯವಾಗಿಟ್ಟುಕೊಂಡು ನಡೆದ ಹಿಂದುಸ್ಥಾನ ಸರಕಾರದ ಧೋರಣೆಗನುಸಾರವಾಗಿ ಈ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ. ಹೀಗಿದ್ದರೂ ಹಲವಾರು ಜನರು ಇದನ್ನು ಟೀಕಿಸುವದುಂಟು. ಈ ಒಡಂಬಡಿಕೆಯಿಂದ ಹಿಂದುಸ್ಥಾನದ ಸಾರ್ವಭೌಮತ್ವಕ್ಕೆ ಯಾವ ಕುಂದೂ ಇಲ್ಲ. ತನ್ನ ಸ್ವತಂತ್ರ ಅಸ್ತಿತ್ವಕ್ಕೆ ಬಾಧೆ ಬರದಂತೆ ಕಾಮನ್‌ವೆಲ್ತದಲ್ಲಿ ಉಳಿದು ಜಗತ್ತಿನಲ್ಲಿಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಸಹಾಯ ಮಾಡಲು ಅವಕಾಶ ಸಿಕ್ಕುವಂತಿದ್ದರೆ ಹಿಂದುಸ್ಥಾನವು ಅದನ್ನೇಕೇ? ಬಿಟ್ಟುಗೊಡಬೇಕು ಅದೇ ರೀತಿಯಾಗಿ ಜಗತ್ತಿನಲ್ಲಿ ಕಂಡು ಬರುವ ದೋಷ ಮತ್ತು ಪರಸ್ಪರ ತಿಕ್ಕಾಟಗಳನ್ನು ಕಡಮೆ ಮಾಡುವ ಸಂಧಿಯು ಕಾಮನ್‌ವೆಲ್ತದಲ್ಲಿ ಇರುವದರಿಂದ ಸಿಕ್ಕುವಂತಿದ್ದರ ಅದನ್ನೇಕೆ ಕಳೆದುಕೊಳ್ಳಬೇಕು? ಲಂಡನದಿಂದ ಮರಳಿ ದಿಲ್ಲಿಗೆ ಬಂದ ಬಳಿಕ ಪಂಡಿತ ನೆಹರು ಇವರು ಆಕಾಶವಾಣಿ ಭಾಷಣ ಮಾಡಿ ಈ ಬಗ್ಗೆ ಸ್ಪಷ್ಟೀಕರಣ ಮಾಡಿದ್ದುಂಟು.

ಸರದಾರರ ಸ್ಪಷ್ಟೋಕ್ತಿ

ಹಿಂದುಸ್ಥಾನದ ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಕಾಂಗ್ರೆಸ್ಸಿಗರಿಗೆ ಆಗಾಗ ಸ್ಪಷ್ಟ ಶಬ್ದಗಳಿಂದಲೆ ಬುದ್ಧಿಯ ಮಾತು ಹೇಳುತಿರುವರು. ಸ್ವಾತಂತ್ರ್ಯವನ್ನು ಸಂಪಾದಿಸಿದ ಕಾಂಗ್ರೆಸ ಸಂಸ್ಥೆಯಲ್ಲಿ ಸ್ವಾತಂತ್ರ್ಯ ಸಂಪಾದನೆಯ ನಂತರ ಉಂಟಾದ ಶಿಥಿಲತೆ, ಅಧಿಕಾರಲಾಲಸೆ, ಲಂಚಗುಳಿತನ ಮೊದಲಾದವುಗಳು ಮನೆಮಾಡಿಕೊಂಡು ಆಡಳಿತೆಯ ಬಿಗುಹನ್ನು ಶಿಥಿಲಗೊಳಿಸಿ ಕಾಂಗ್ರೆಸ್ಸಿನ ಶುಭ್ರ ಕೀರ್ತಿಗೆ ಕಳಂಕ ತರಹತ್ತಿವೆ. ಆಂತೆಯೆ ಹಿರಿಯ ಮುಖಂಡರಾದ ಸರದಾರರು ಸಮಯ ಸಿಕ್ಕಾಗೆಲ್ಲ ಕಾಂಗ್ರೆಸಿಗರ ಲಕ್ಷ್ಯವನ್ನು ಈ ಮಹತ್ವದ ಮಾತಿನತ್ತ ಎಳೆಯುತಿದ್ದಾರೆ. ಇಂದೂರಿನಲ್ಲಿ ಕಳೆದವಾರ ಸಾರ್ವಜನಿಕ ಸಭೆಯಲ್ಲಿ ಸಂಸ್ಥಾನಾಧಿಪತಿಗಳಿಂದ ಅಧಿಕಾರವನ್ನು ಕಸಿದುಕೊಂಡು ಜನತೆಯ ಪ್ರತಿನಿಧಿಗಳ ಕೈಗೆ ಕೊಟ್ಟದ್ದರ ಮರ್ಮವನ್ನು ವಿವರಿಸುತ್ತ ಮನನೀಯ ಭಾಷಣ ಮಾಡಿದರು. ಸಂಸ್ಥಾನಿಕರಿಗಿಂತ ಹೆಚ್ಚು ಉತ್ತಮ ರೀತಿಯಲ್ಲಿ ಆಡಳಿತೆ ನಡೆಸುವ ಉದ್ದೇಶದಿಂದ ಸಂಸ್ಥಾನಿಕರಿಂದ ಅಧಿಕಾರವನ್ನು ಕಸಿದುಕೊಂಡದ್ದು; ಆದರೆ ದುರ್ದೈವದಿಂದ ಕಾಂಗ್ರೆಸ್ಸಿಗರಲ್ಲಿಯ ಅಧಿಕಾರಲಾಲಸೆಯಿಂದ ಪರಿಣಾಮಗಳು ವಿಪರೀತವಾಗತೊಡಗಿವೆಂದು ಸ್ಪಷ್ಟವಾಗಿ ಹೇಳಿದರು. ಇಂದೂರದಲ್ಲಿಯ ಘಟನೆಗಳನ್ನು ಅನುಲಕ್ಷಿಸಿ ಸರದಾರರು ಈ ಮಾತನ್ನು ಆಡಿದ್ದರೂ ದೇಶದಲ್ಲಿಯ ಕಾಂಗ್ರೆಸ್ಸಿಗರೆಲ್ಲ ಈ ಎಚ್ಚರಿಕೆಯ ಮಾತುಗಳಿಂದ ಸಕಾಲದಲ್ಲಿಯೆ ಬುದ್ಧಿಗಲಿಯುವದು ಅವಶ್ಯವಾಗಿದೆ. ಕಾಂಗ್ರೆಸ್ಸಿಗರು ಅಧಿಕಾರಿಗಳ ದೈನಂದಿನ ಕಾರ್ಯದಲ್ಲಿಯೂ ಕೈಹಾಕಿ ವ್ಯತ್ಯಯವನ್ನುಂಟು ಮಾಡುತಿರುವರೆಂಬ ಕೂಗೂ ಅಲ್ಲಲ್ಲಿ ಕೇಳಬರುತ್ತದೆ. ಈ ಪ್ರವೃತ್ತಿಯನ್ನು ಕಾಂಗ್ರೆಸ್ಸಿಗರು ಬಿಟ್ಟುಗೊಡುವದು ಕರ್ತವ್ಯವಾಗಿದೆ. ಗಾಂಧೀಜಿ ಬಯಸಿದಂತೆ ಕಾಂಗ್ರೆಸ್ಸಿಗರು ಶುದ್ಧಚರಿತ್ರರಾದರೆ ಅವರ ಕನಸಿನ ಸ್ವರಾಜ್ಯದ ಸುಪರಿಣಾಮಗಳುಂಟಾಗಿ ಜನತೆ ಸುಖಸಮೃದ್ಧಿಯಲ್ಲಿ ಲೋಲಾಡಬಹುದು.

ಆರ್. ಎಸ್. ಎಸ್. ಘಟನೆ

ಜಾತೀಯ ಕಾರ್ಯಸಾಧನೆಗಾಗಿ ಸೈನ್ಯದ ಮಾದರಿಯಲ್ಲಿ ಕಟ್ಟಲ್ಪಟ್ಟದ್ದರಿಂದ ಪ್ರತಿಬಂಧಿಸಲ್ಪಟ್ಟ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಕಾಯದೆಬದ್ಧ ಪಕ್ಷವಾಗಿ ನಡೆದುಕೊಳ್ಳುವಂತೆ ಮಾಡಲು ಒಂದು ಘಟನೆಯನ್ನು ಸಿದ್ಧಪಡಿಸಿ ಅದರ "ಗುರೂಜಿ" ಯಾದ ಶ್ರೀ. ಗೊಳವಲಕರರು ಸರದಾರ ಪಟೇಲರ ಕಡೆಗೆ ಅನುಮತಿಗಾಗಿ ಕಳಿಸಿರುವ ಸಂಗತಿ ಮೊದಲೇ ಪ್ರಸಿದ್ಧವಾಗಿದೆ. ೩೦೦೦ ಶಬ್ದಗಳ ೨೫ ಕಲಮುಗಳಿಂದೊಡಗೂಡಿದ ಈ ಘಟನೆಯಲ್ಲಿ ರಾ. ಸ್ವ. ಸೇ. ಸಂಘವು ರಾಜಕಾರಣದಿಂದ ನಿರ್ಲಿಪ್ತವಾಗಿರುವಂತೆ ತೋರಿಸಿಕೊಳ್ಳಲು ಪ್ರಯತ್ನಿಸಿದ್ದರೂ ಅದನ್ನು ಬೇಕಾದಾಗ ಹಿಂಸಾಸಮರ್ಥವಾದ ರಾಜಕೀಯ ಆಯುಧವಾಗಿ ಉಪಯೋಗಿಸಲು ಅನುಕೂಲವಾಗುವ ವ್ಯವಸ್ಥೆ ಮಾಡಲ್ಪಟ್ಟಿರುವದರಿಂದ ಅದನ್ನು ವಿಶೇಷ ಎಚ್ಚರಿಕೆಯಿಂದ ಸರಿಶೋಧಿಸಬೇಕೆಂದು ಹೇಳಲಾಗಿದೆ.

ಒಳಭೇದಗಳಿಂದ ಹರಿಹಂಚಾಗಿರುವ ಹಿಂದು ಸಮಾಜದ ಉದ್ಧಾರಕ್ಕಾಗಿ ೧೯೨೫ ರಲ್ಲಿ ಡಾ. ಕೇಶವ ಬಲಿರಾಮ ಹೆಡಗೆವಾರರು ಸ್ಥಾಪಿಸಿ ೧೯೪೦ ರಲ್ಲಿ ಶ್ರೀ ಮಹಾದೇವ ಸದಾಶಿವ ಗೊಳವಲಕರರ ಕೈಗೆ ಒಪ್ಪಿಸಲ್ಪಟ್ಟ ರಾ. ಸ್ವ. ಸಂಘಕ್ಕೆ ಅಖಿಲ ಘಟನೆಯಿಲ್ಲದಿರುವದರಿಂದ ಈ ಘಟನೆಯನ್ನು ರಚಿಸಲಾಗಿದೆಯೆಂದು ಹೇಳಿ ಸಂಘದ ಧ್ಯೇಯ ನಿರೂಪಣೆ ಮಾಡಲಾಗಿದೆ. ಹಿಂದೂ ಸಮಾಜವನ್ನು ಸುಸಂಘಟಿತವಾಗಿ ಮಾಡಲು ಶಿಸ್ತಿನ ಸಂಸ್ಥೆಯ ಅವಶ್ಯಕತೆಯಿದೆಯೆಂದೂ ಮಾತೃಭೂಮಿಯಾದ "ಭಾರತ ವರ್ಷದ ಸರ್ವಾಂಗೀಣ ಉನ್ನತಿಯನ್ನು" ಸಾಧಿಸಬೇಕೆಂದೂ ಹೇಳಲಾಗಿರುವದರಿಂದ ಅದು ತನ್ನ ಚಟುವಟಿಕೆಗಳನ್ನು ಬೇಕಾದ ಕ್ಷೇತ್ರಕ್ಕೆ ವಿಸ್ತರಿಸಲು ಬರಬಹುದು. "ಸಂಘಕ್ಕೆ ರಾಜಕಾರಣವಿಲ್ಲ" ವೆಂದೂ ಸದಸ್ಯರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಿರಬಹುದೆಂದು ಹೇಳಲಾಗಿದ್ದರೂ ರಾಜಕೀಯ ಪಕ್ಷಗಳಲ್ಲಿ ಅಧಿಕಾರ ಸ್ಥಾನದಲ್ಲಿರುವವರಿಗೆ ಸಂಘದ ಅಧಿಕಾರ ಸ್ಥಾನಕ್ಕೆ ಚುನಾಯಿಸಲ್ಪಡಲು ಅರ್ಹರಲ್ಲವೆಂದು ಸಾರಲಾಗಿದೆ. ರಾಷ್ಟ್ರಧ್ವಜವನ್ನು "ಸರಕಾರಿ ಧ್ವಜ" ಎಂದು ಹೆಸರಿಟ್ಟು ಅದಕ್ಕೆ ತೋರಿಕೆಯ ಗೌರವ ಕೊಟ್ಟಂತೆ ಮಾಡಿದ್ದರೂ ಹಿಂದೂ ಸಂಸ್ಕೃತಿಚಿಹ್ನವಾದ ಭಗವಾಧ್ವಜವೇ ಸಂಘದ ಧ್ವಜವೆಂದು ಹೇಳಲಾಗಿದೆ. ರಾಷ್ಟ್ರಧ್ವಜವನ್ನು ಸ್ವೀಕರಿಸಿ ಅದನ್ನು ವಂದಿಸುವ ಮಾತೇ ಇಲ್ಲ.

ಆದರೆ ಎಲ್ಲಕ್ಕಿಂತ ಕಿಡಿಗೇಡಿ ಕಲಮುಗಳೆಂದರೆ ಚುನಾವಣೆಗಳಿಗೆ ಸಂಬಂಧಿಸಿದ್ದು. ಹಳೆಯ ಮುಂದಾಳುಗಳ ಕವಿಮುಷ್ಟಿಯನ್ನು ಹಾಗೆಯೆ ಉಳಿಸುವದಕ್ಕಾಗಿ ಸಂಘದಲ್ಲಿ ಸತತ ೬ ವರ್ಷ ಸಕ್ರಿಯ ಕಾರ್ಯಕರ್ತನಾದವನೇ ಅ. ಭಾ. ಸಂಘದ ಅಧಿಕಾರ ಸ್ಥಾನಗಳಿಗೂ ಕನಿಷ್ಠ ೩ ವರ್ಷ ಸದಸ್ಯನಾಗಿದ್ದವನೇ ಪ್ರಾಂತಿಕ ಅಧಿಕಾರ ಸ್ಥಾನಗಳಿಗೂ ೧ ವರ್ಷ ಸದಸ್ಯನಾಗಿದ್ದವನೇ ಸಂಘಚಾಲಕತ್ವಕ್ಕೂ ಆರಿಸಲ್ಪಡಲು ಅರ್ಹನಾಗುವನೆಂದು ಹೇಳಿ ಹೊಸಬರನ್ನು ದೂರ ಇಡಲು ಹವಣಿಸಲಾಗಿದೆ. ಮೇಲಾಗಿ ಕವಾಯತು ಮೊದಲಾದ ಅಂಗಸಾಧನೆಯ ಕಾರ್ಯಕ್ರಮಗಳು, ಮೂರನೆ ಕಲಮಿನಲ್ಲಿ ಹೇಳಿದ ಉದ್ದೇಶಗಳಿಗಾಗಿ "ಅವಶ್ಯ ಮತ್ತು ಸಾಧ್ಯವಾದುದನ್ನೆಲ್ಲ" ಮಾಡುವ ಹಕ್ಕು ಸಂಘಕ್ಕಿದೆಯೆನ್ನಲಾಗಿದೆ. ನ್ಯಾಯಸ್ಥಾನದ ಹಸ್ತಕ್ಷೇಪವನ್ನು ದೂರೀಕರಿಸಲು ಸಂಘದ ಘಟನೆಯ ಕಲಮುಗಳ ವ್ಯಾಖ್ಯೆಮಾಡುವ ಅಧಿಕಾರ ಕೇಂದ್ರ ಸಮಿತಿಗೊಂದಕ್ಕೇ ಸೇರಿದ್ದೆಂದೂ ಅದರ ನಿರ್ಣಯವೇ ಕೊನೆಯದೆಂದೂ ಸ್ಪಷ್ಟಗೊಳಿಸಲಾಗಿದೆ.

"ಗುರೂಜಿ" ಅಥವಾ ಸರಸಂಘ ಚಾಲಕನ ಸ್ಥಾನವೇ ಎಲ್ಲಕ್ಕೂ ಕೌತುಕದ್ದು. ಅದು ಆಯ್ಕೆಯ ಸ್ಥಾನವಲ್ಲ. ಹಿಂದಿನ ಗುರೂಜಿ ಮುಂದಿನವನನ್ನು "ಕೇಂದ್ರೀಯ ಕಾರ್ಯಕಾರಿ ಮಂಡಲದ ಅನುಮತಿ ಪಡೆದು ನೇಮಿಸುವನು. ಅವನು ಸಂಘದ "ನೇತೃ ಮತ್ತು ತತ್ವಜ್ಞಾನಿ" ಯಂತೆ. ಅವನು "ಸ್ವಯಂ ಸೇವಕರ ಪ್ರತಿನಿಧಿಗಳ ಮತ್ತು ಕಾರ್ಯಕಾರಿ ಮಂಡಲಗಳ ಸಭೆಯನ್ನು ಒಟ್ಟಾಗಿಯಾಗಲಿ ಬೇರೆ ಬೇರೆಯಾಗಲಿ ಕರೆದು ಭಾಷಣ ಮಾಡಬಹುದು" ಅರ್ಥಾತ್ ಗುರುಜಿಯೇ ಸಂಘದ ಫ್ಯೂರರ್ ಅಥವಾ ಸರ್ವಾಧಿಕಾರಿ. ಇದು ಫ್ಯಾಸಿಸ್ಟ ಸಂಸ್ಥೆಗೆ ಪ್ರಜಾತಂತ್ರದ ಹೊದಿಗೆ ಹೊದ್ದಿಸಿದಂತೆ ಎಂದು ಟೀಕಿಸಲಾಗಿದೆ.

ನವಾಖಾಲಿಯ ಮೂವರು ಧೀರರು

ಇಲಾ ಸೇನರಿಂದ

ನಿರಾಶ್ರಿತರ ಪುನರ್ನಿವೇಶನದ ಸಮಸ್ಯೆ ಭಾರತವನ್ನೆಲ್ಲ ವ್ಯಾಪಿಸಿದ್ದರೂ ಪಂಜಾಬ ಸಿಂಧಗಳಿಂದ ಬಂದ ನಿರಾಶ್ರಿತರಿಗೂ ಪೂರ್ವ ಪಾಕಿಸ್ತಾನದಿಂದ ಬಂದವರಿಗೂ ಒಂದು ಮುಖ್ಯ ಅಂತರವಿದೆ. ಈಗ ಪಶ್ಚಿಮ ಪಾಕಿಸ್ತಾನವೆನಿಸಿರುವ ಭಾಗದಲ್ಲಿದ್ದ ಮಧ್ಯಮ ವರ್ಗದ ಜನರು ಹೆಚ್ಚುಕಡಿಮೆ ಶ್ರೀಮಂತರೇ ಆಗಿದ್ದರು. ಅಲ್ಲಿ ಬಡವ ಬಲ್ಲಿದರ ನಡುವಣ ಅಂತರ ವಿಶೇಷವಾಗಿರಲಿಲ್ಲ. ಯಾರೂ ಕೇವಲ ರಿಕ್ತರಾಗಿರಲಿಲ್ಲ. ಆದುದರಿಂದ ಅವರು ತಮ್ಮ ಸೊತ್ತುಗಳನ್ನು ಕಳೆದುಕೊಂಡಾಗ, ಉಳಿಸಿಕೊಂಡು ಬಂದದ್ದು ಕಳೆದುಕೊಂಡದ್ದರ ತೀರ ಅಲ್ಪಾಂಶವಾಗಿತ್ತೆಂದು ಅವರಿಗೆ ಅನಿಸಿರಬಹುದಾದರೂ ಪೂರ್ವ ಪಾಕಿಸ್ತಾನದಿಂದ ಬಂದವರ ದೃಷ್ಟಿಯಲ್ಲಿ ಅವರು ಉಳಿಸಿಕೊಂಡದ್ದು ಸಾಕಷ್ಟು ದೊಡ್ಡ ಮೊತ್ತವೇ ಆಗಿತ್ತು.

ಪೂರ್ವ ಬಂಗಾಲದ ಮಧ್ಯಮ ವರ್ಗದವರು ಅವರಿಗಿಂತ ಬಡವರಾಗಿದ್ದರು. ವೈಯಕ್ತಿಕ ಶ್ರೀಮಂತಿಕೆ ಅಲ್ಲಿ ಅಪೂರ್ವವೇ ಆಗಿತ್ತು. ಆದ್ದರಿಂದ ಅವರು ದೇಶಭ್ರಷ್ಟರಾಗಿ ಕಲಕತ್ತೆಗೊ ಮತ್ತೆಲ್ಲಿಗಾದರೋ ಶರಣಾರ್ಥಿಗಳಾಗಿ ಬಂದಾಗ ಶುದ್ಧ ಕಂಗಾಲರೇ ಆಗಿದ್ದರು. ಪೂರ್ವ ಬಂಗಾಲದಲ್ಲೆ ಉಳಿದವರೆಂದರೆ ಹೊರಟು ಬರಲಿಕ್ಕೆ ಕೂಡ ಅಸಮರ್ಥರಾಗಿದ್ದ ಬಡವರು. ಅವರಿಗೆ ತಮ್ಮ ಅಳಿದುಳಿದ ಹಳೆ ಮನೆಗಳಲ್ಲಿಯೆ ಉಳಿಯದೆ ವಿಧಿಯೇ ಇರಲಿಲ್ಲ. ಕಾರಣ ವಿಭಜನೆಯಾಗಿ ಹದಿನೆಂಟು ತಿಂಗಳು ಕಳೆದ ನಂತರವೂ ಇಂದು ಪೂರ್ವ ಬಂಗಾಲದ ಅಲ್ಪಸಂಖ್ಯರ ಸಮಸ್ಯೆ ಇಡಿ ದೇಶದಲ್ಲೆ ಅತ್ಯಂತ ತೀಕ್ಷ್ಣವಾಗಿದೆ.

ಆದುದರಿಂದ ಮೊದಲಿಂದಲೂ ಅಲ್ಪಸಂಖ್ಯ ಪ್ರಶ್ನೆ ಅತ್ಯಂತ ಉಗ್ರವಾಗಿದ್ದ ನವಾಖಾಲಿಯ ಸಂತ್ರಸ್ತರಲ್ಲಿ ಧೈರ್ಯಸ್ಥೈರ್ಯಗಳನ್ನು ತುಂಬಲು ಹೆಣಗುತಿರುವ ಆ ಮೂವರನ್ನು ಕಾಣಲು ನಾನು ಕುತೂಹಲಿಯಾಗಿದ್ದೆ. ಅವರ ಕೆಲಸ ಸುಲಭವಾಗಿರಲಿಲ್ಲ. ಸುತ್ತಲೂ ಎಲ್ಲವೂ ನುಚ್ಚುನೂರಾಗಿ ಬಿದ್ದಿತ್ತು. ಆದರೆ ಅವರ ಅತ್ಮದ ಧೈರ್ಯ ಅಚಲವಾಗಿತ್ತು. ಅಷ್ಟರಿಂದ ಅಲ್ಲಲ್ಲಿ ತಲೆತಪ್ಪಿಸಿಕೊಂಡು ಅಡಗಿದ್ದ ದೀನ ದುಃಖಿ ಸ್ತ್ರೀಪುರುಷರು ಒಬ್ಬೊಬ್ಬರಾಗಿ ಅವರ ಸುತ್ತ ನೆರೆದರು. ಕೊಲೆಗಡಕರೂ ಪುಂಡರೂ ಪಶ್ಚಾತ್ತಾಪಪಟ್ಟು ಅವರ ಬಳಿ ಬಂದುದುಂಟು.

ಸಾತ್ವಿಕ ತೇಜಸ್ಸಿನ ಆಗರಗಳು

ಆ ಮೂವರೇ ಪ್ಯಾರೇಲಾಲ, ಚಾರುಭೂಷಣ ಚೌಧುರಿ ಮತ್ತು ಜೀವನಸಿಂಗರು. ಅವರಲ್ಲಿ ಒಬ್ಬೊಬ್ಬನ ವ್ಯಕ್ತಿತ್ವವೂ ಒಂದೊಂದು ಬಗೆ. ಆದರೆ ಎಲ್ಲರೂ ನಿರ್ಭೀತರು, ಜಾತೀಯ ಐಕ್ಯದ ಆಶೆ, ಅಹಿಂಸೆಯ ಸಾರ್ಥಕತೆಯಲ್ಲಿ ವಿಶ್ವಾಸ, ಭಯನಿವಾರಕವಾದ ಪ್ರೇಮ ಇವು ಅವರನ್ನು ಒಟ್ಟಾಗಿ ಬೆಸೆದಿವೆ. ದ್ವೇಷ ಕ್ರೋಧಗಳಿಂದ ಸುತ್ತುವರಿಯಲ್ಪಟ್ಟು ಅವರು ನವಾಖಾಲಿಯ ಜನರ ಶಾಂತಿ ಸೌಖ್ಯಗಳಿಗಾಗಿ ಶ್ರಮಿಸುತಿರುವರು. ಅತುಲವಾದ ನೈತಿಕ ಅಧೀರತೆಯಲ್ಲಿ ತೊಳಲುವ ದಾಸಸ್ಥಿತಿಗೆ ಇಳಿಯುತಿರುವ ಜನರ ಮಧ್ಯದಲ್ಲಿ ಅವರು ಕಾಲಯಾಪನೆ ಮಾಡುತಿದ್ದಾರೆ.

ಪ್ರಸಿದ್ಧ "ವಾಡಿ"ಗಳು ಅಥವಾ ಕೌಟುಂಬಿಕ ಗೃಹಗಳು ಹಾಳುಬಿದ್ದಿವೆ. ಅವುಗಳ ವಿಶಾಲವಾದ ಅಂಗಳಗಳೂ ಅಂತಃಪುರಗಳೂ ನಿರ್ಜನವಾಗಿವೆ. ದೊಡ್ಡ ದೊಡ್ಡ ಕೂಡುಕುಟುಂಬಗಳು ಚಿಕ್ಕವಾಗಿಬಿಟ್ಟು ಪೂರ್ವಿಕರ ಮನೆ ಮಾಡುಗಳಿಗೆ ಹೇಗೋ ಅಂಟಿಕೊಂಡಿವೆ. ಒಂದು ಪ್ರಸಿದ್ಧ ವಾಡಿಯ ೨೦ ಕ್ಕಿಂತ ಹೆಚ್ಚು ಗಂಡಸರು ಕೊಲ್ಲಲ್ಪಟ್ಟು ಹೆಂಗಸರು ಮಾತ್ರ ಉಳಿದುಕೊಂಡಿದ್ದಾರೆ. ಗಾಂಧೀಜಿ ಅಲ್ಲಿಯೆ ಒಂದು ಶಿಬಿರವನ್ನೇರ್ಪಡಿಸಿದ್ದರು. ಅದು ಈಚೆಗಿನ ವರೆಗೆ ಆ ವಿಧವೆಯರಿಂದಲೆ ನಡೆಸಲ್ಪಡುತಿತ್ತು. ಈ ಶಿಬಿರದ ಕಾರ್ಯಕರ್ತರು ಅವರಿಗೆ ದೈಹಿಕ ಸಂರಕ್ಷಣೆಯನ್ನು ಮಾತ್ರ ಕೊಡದೆ, ಪರಿಚಿತರಾದ ಶತ್ರುಗಳ ಮಧ್ಯದಲ್ಲಿ ನಿರ್ಭೀತರಾಗಿರುವ ಸಾತ್ವಿಕ ತೇಜಸ್ಸನ್ನು ಅವರಲ್ಲಿ ತುಂಬಿದರು. ಪ್ರತಿಯೊಂದು ಕುಟುಂಬದ ನೆನಪಿನ ಭಿತ್ತಿಯಲ್ಲಿ ರಕ್ತರಂಜಿತವಾದ ಚಿತ್ರಗಳು ಇದ್ದೇ ಇದ್ದವು. ಅವರೂ ಅವರಿಗೆ ಬೇರೆ ಆಶ್ರಯವಿದ್ದಿಲ್ಲ. ಈ ಶಿಬಿರ ಕಾರ್ಯಕರ್ತರು ಬರುವ ವರೆಗೆ ಅವರು ಭಯಗ್ರಸ್ತರಾಗಿ ಬಾಳುತಿದ್ದರು. ಈಗ ಅವರಿಗೆ ಬಂದಿರುವ ಧೈರ್ಯ ಅಗಂತುಕವಾದದ್ದು. ಅದು ಅಂತರಿಕ ಧೈರ್ಯವಾಗಿ ಪರಿಪರ್ಕ್ವಾಗಲಿ ಅವರು ನಾಗರಿಕ ಹಕ್ಕುಗಳನ್ನು ಬೇಡಲೂ ಪಡೆಯಲೂ ಅರ್ಹರಾಗುವರು.

ಪ್ಯಾರೇಲಾಲ

ಪ್ಯಾರೇಲಾಲರು ಗಾಂಧೀಜಿಯೊಡನೆ ಅಲ್ಲಿಗೆ ಹೋದವರು, ಅವರ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಪೂರ್ವ ಬಂಗಾಲದ ಕಾನನಭೂಮಿಗಳಲ್ಲಿ ನಡೆದವರು. ಸಿಂಹವನ್ನೂ ಕುರಿಮರಿಯನ್ನೂ ಒಂದೇ ಕಡೆ ಮಲಗುವಂತೆ ಮಾಡಬಹುದೆಂದು ಅವರ ದೃಢ ವಿಶ್ವಾಸ. ಗಾಂಧೀ ಶಿಬಿರಗಳೊಡನೆ ಸಂಪರ್ಕ ಬಂದ ಮೇಲೆ ಹಿಂದಿನ ವೈರಿಗಳು ಹೇಗೆ ಬದಲಾಗಿದ್ದಾರೆಂದು ಅವರು ಸ್ಥಿರವಿಶ್ವಾಸದಿಂದ ವಿವರಿಸಿದರು. ಅವರ ಪ್ರಶಾಂತ ಅಚಂಚಲ ವಾಣಿಯಲ್ಲಿ ತಮಗೂ ತಮ್ಮ ಕೀರ್ತಿಗೂ ಕೇಡು ಬಗೆಯುವವರ ವಿರುದ್ಧ ಒಂದೇ ಒಂದು ಕಿಚ್ಚಿನ ಮಾತು ಹೊರಡಲಿಲ್ಲ. ಗಾಂಧೀಜಿಯ ಮಾರ್ಗದಲ್ಲಿ ಅವರ ನಡೆ ನುಡಿ; ವಿಶ್ವಾಸವೂ ನಿರ್ವಂಚನೆಯೂ ಕೊನೆಗಾದರೂ ಸಾರ್ಥಕವಾಗಲೇಬೇಕೆಂದು ಅವರ ನಂಬಿಕೆ.

ಚಾರು ಬಾಬು

ಚಾರು ಬಾಬುಗಳು ವಿದ್ವಾಂಸರಾದ ವಿನಯಶೀಲ ಬಂಗಾಲಿ ಜನ. ಅವರು ಯಾರನ್ನೂ ಭಂಗಿಸುವವರಲ್ಲ. ಅವರ ಮೈಕಟ್ಟು ತೆಳ್ಳಗೆ; ನುಡಿ ವಿನಯಪೂರ್ಣ, ನಡೆ ಧರ್ಮೋಪದೇಶಕರದು. ಆದರೆ ಅವರು ನವಾಖಾಲಿಯ ಸಂಕಟಮಯ ಮಾರ್ಗಗಳಲ್ಲಿ ಅಚಲ ಧೈರ್ಯದಿಂದ ನಡೆಯುವ ರೀತಿಯಿಂದ ವಿಪನ್ನ ಜನರ ಹೃದಯದಲ್ಲಿ ಜೀವಸಂಚಾರವಾಗುತ್ತಿದೆ. ಅವರ ಮೇಲೆ ದ್ವೇಷದ ಕೈಗಳು ಎತ್ತಿವೆ. ಆದರೆ ಗಾಂಧೀಜಿ ತೋರಿಸಿದ ಗುರಿ ಸಾಧ್ಯವಾಗೇ ತೀರುವದೆಂಬ ಶ್ರದ್ಧೆಯಿಂದ ತಮ್ಮನ್ನು ನೋಯಿಸಬಯಸುವವರ ಮುಖವನ್ನು ಅವರ ನಿರ್ಮಲ ದೃಷ್ಟಿಗಳು ಕನ್ನಡಕದೊಳಗಿಂದ ನೇರವಾಗಿ ನೋಡುವವು. ಹಾಗಿಲ್ಲದಿದ್ದರೆ ಮಹಾತ್ಮರಾದರೂ ಆ ಧ್ಯೇಯಗಳನ್ನು ಸಾಧಿಸದಿರಲ್ಲವೆ?

ಜೀವನಸಿಂಗ

ಇವರಿಬ್ಬರಿಗಿಂತ ತೀರ ಭಿನ್ನವಾದ ವ್ಯಕ್ತಿತ್ವ ಕರ್ನಲ್ ಜೀವನ ಸಿಂಗರದು. ಪೂರ್ವ ಬಂಗಾಲದಲ್ಲೆಲ್ಲ ಉಳಿದ ಸಿಖರು ಅವರೊಬ್ಬರೆ ಎಂದು ತೋರುತ್ತದೆ. ಆದರೆ ಗಾಂಧೀ ಶಿಬಿರಗಳಲ್ಲಿನ ತಮ್ಮ ಚಟುವಟಿಕೆಗಳಿಂದ ಉದ್ಭವಿಸುತ್ತಿರುವ ಅಸೂಯೆಯನ್ನಾಗಲಿ ತಾವು ದ್ವೇಷಪಾತ್ರರಾಗಿದ್ದೇವೆಂದಾಗಲಿ ಅವರು ಸ್ವಲ್ಪವೂ ಗಮನಿಸಿದಂತಿಲ್ಲ. ಪ್ರಶಾಂತ ದೇಹ, ಬೆಳ್ಳನ್ನ ಗಡ್ಡ, ಸುಹಾಸನೇತ್ರಗಳಿಂದೊಡಗೂಡಿದ ಅವರು ಮಾನವರಲ್ಲೊಂದು ಸಿಂಹ. ನೋಡಿದ ಕ್ಷಣವೇ ಅವರು ಹುಟ್ಟಾ ಮುಂದಾಳುಗಳೆಂದು ತೋರುವದು. ಆಝಾದ ಸೇನೆಯಲ್ಲಿ ಅವರು ಬ್ರಹ್ಮದೇಶದಲ್ಲಿದ್ದಾಗ ಮುಂದಾಳೇ ಆಗಿದ್ದರು. ಆದರೆ ಇಂದು ಈ ಮನುಷ್ಯಸಿಂಹ ಗಾಂಧೀಜಿಯ ಮಾರ್ಗದಲ್ಲಿ ಕುರಿಮರಿಯಂತೆ ನಡೆಯುತ್ತಿದೆ. ನಿರ್ಭಯರಾಗಿ ಅವರು ಪಾಕಿಸ್ತಾನದಲ್ಲಿ ಬಾಳಿ ದುಡಿದಿದ್ದಾರೆ. ಅವರ ಕೀರ್ತಿಗೆ ಕಲಂಕ ಹಚ್ಚಲು ನಡೆದ ಪ್ರಯತ್ನಗಳನ್ನು ಮಣ್ಣುಗೂಡಿಸಿದ್ದಾರೆ. ಸುಳ್ಳು ಸೊಟ್ಟು ಆರೋಪಹೊರಿಸಿ ಅವರನ್ನು ನ್ಯಾಯಸ್ಥಾನಕ್ಕೆ ಎಳೆಯಲಾಯಿತು. ಮುಂದೆ ಅಂತರ್ ವಸಾಹತು ಸೌಹಾರ್ದದ ಹೆಸರಲ್ಲಿ ತಮ್ಮ ಮೇಲಿನ ಪ್ರಕರಣಗಳನ್ನು ಹಿಂತೆಗೆದುಕೊಳ್ಳಲು ಅವರೊಪ್ಪಲಿಲ್ಲ. "ನಾನು ಅಪರಾಧಿಯಾಗಿದ್ದರೆ ವಿಚಾರಣೆ ಮುಂದೆ ಸಾಗಲಿ. ಅದು ಹೇಗೆ ಸಿದ್ಧವಾಗುವದೋ ನೋಡುವೆ. ಪ್ರಕರಣ ಹಿಂತೆಗೆದುಕೊಳ್ಳುವಿರಾದರೆ ನಾನು ಸಂಪೂರ್ಣ ನಿರಪರಾಧಿಯೆಂದು ಒಪ್ಪಿಕೊಳ್ಳಿರಿ" ಎಂದರವರು.

ನಿರಪರಾಧಿಗಳ ರಕ್ತದಿಂದ ಒಂದು ಕಾಲದಲ್ಲಿ ತುಂಬಿ ತುಳುಕುತಿದ್ದ ನವಾಖಾಲಿಯ ಕಾನನಮಾರ್ಗದಲ್ಲಿ, ನಗರದ ಬೀದಿಗಳಲ್ಲಿ ಜೀವನಸಿಂಗರು ನಿರ್ಲಕ್ಷ್ಯದಿಂದ ನಡೆಯುತ್ತಾರೆ. ಅವರು ಒಮ್ಮೆಯೂ ತಿರುಗಿ ನೋಡದಿಲ್ಲ. ತಮ್ಮನ್ನು ಕೊಲ್ಲಲು ಯಾರಾದರೂ ಹೊಂಚುಹಾಕಿರಬಹುದೆಂಬ ಸಂಶಯವೇ ಅವರಿಗಿಲ್ಲ. ಹಿಂಸೆಯ ಮಾತು ಕೇಳಿದರೆ ಅವರು ಗಹಗಹಿಸಿ ನಗುತ್ತಾರೆ. ತಮ್ಮ ಅಹಿಂಸೆ ಎಲ್ಲ ದೌರ್ಜನ್ಯವನ್ನೂ ಗೆಲ್ಲಬಲ್ಲದೆಂದು ಅವರಿಗೆ ವಿಶ್ವಾಸವುಂಟು. ಅದರಿಂದ ಅವರಿಗೆ ಯಾವ ರಕ್ಷಣೆಯೂ ಬೇಕಾಗಿಲ್ಲ. ಅವರ ವಿರೋಧಿಗಳು ನಿರುಪಾಯರಾಗಿ ಅವರನ್ನು ಕೆಳಗೆಳೆಯಲು ಕಾಯದೆಯ ವಕ್ರಪಥವನ್ನನುಸರಿಸುತ್ತಾರೆ.

ಗಾಂಧೀಪಥ

ಈ ಮೂವರೂ ಅವರಂಥ ಬೇರೆ ಕೆಲವರೂ ನಿರಾಶ್ರಿತರ ಪ್ರವಾಹವನ್ನು ತಡೆಗಟ್ಟಲು ಹೆಣಗುತ್ತಿದ್ದಾರೆ. ಧೈರ್ಯ ತೇಜಸ್ಸುಗಳನ್ನು ಜನರಲ್ಲಿ ತುಂಬುತಿದ್ದಾರೆ. ಅವರಲ್ಲದೆ ಹೋಗಿದ್ದರೆ ಪೂರ್ವ ಬಂಗಾಲದಲ್ಲಿ ಅಲ್ಪಸಂಖ್ಯರಿಗೆ ಬಿದ್ದ ಪೆಟ್ಟು ಅವರನ್ನು ಎಂದೆಂದೂ ಏಳದಂತೆ ಮಾಡಿಬಿಡುತಿತ್ತು. ಗಾಂಧೀ ಶಿಬಿರಗಳು ಇನ್ನೂ ಅನೇಕ ವರ್ಷ ನಡೆಯಬೇಕಾದೀತು. ಈ ಧೀರರಿಗೆ ಮನುಷ್ಯನ ಒಳ ಒಳ್ಳೆಯತನದಲ್ಲಿ ಅಸಾಧಾರಣ ವಿಶ್ವಾಸವಿದೆ. ಅದ್ದರಿಂದ ಅವರು ಪಾಕಿಸ್ತಾನದ ಅಧಿಕಾರಿಗಳ ವಿರುದ್ಧ ಒಂದೇ ಒಂದು ಕೆಟ್ಟ ಮಾತಾಡಲು ಸಿದ್ಧರಿಲ್ಲ.

ಮಹಾತ್ಮಾ ಗಾಂಧಿಯವರ ಧ್ಯೇಯಗಳಿಗಾಗಿ ಹೃದಯಾರ್ಪಣ ಮಾಡಿದ ದೇಶದಲ್ಲಿ ಇಂಥ ಕೆಲವೇ ಜನರ ಶ್ರದ್ಧೆ ಮತ್ತು ಕೃತಿಗಳಿಂದರೂ ಗಾಂಧೀಜಿ ತೋರಿಸಿದ ಮಾರ್ಗದತ್ತ ಕೈತೋರಿಸುತ್ತದೆ. ಆ ಮಾರ್ಗ ಕಂಟಕಮಯವಾಗಿದ್ದರೂ ಹುಡುಕುವವರಿಗೆ ಅಲ್ಲಿ ಹಸುರಾದ ತಂಪಾದ ಸ್ಥಾನಗಳೂ ಸಿಗುವವು. ಭಾರತದಲ್ಲಿ ಜೀವನವನ್ನು ಯಾವ ಯೋಜನೆಯಂತೆ ರೂಪಿಸಲಾಗುತಿದೆಯೋ ಗೊತ್ತಿಲ್ಲ. ಆದರೆ ಗಾಂಧೀಜಿ ಬಯಸಿದಂಥ ಜೀವನ ಪದ್ಧತಿಯನ್ನು ನವಾಖಾಲಿಯ ಭಗ್ನಾವಶೇಷಗಳ ಮೇಲೆ ಕಟ್ಟಲಾಗುತ್ತಿದೆ. ಲಕ್ಷಾಂತರ ಜನರಲ್ಲಿ ಆ ಬೆಳಕನ್ನು ಅನುಸರಿಸುವವರು ಕೈಬೆರಳಲ್ಲೆ ಎಣಿಸಬಹುದಷ್ಟು ಜನರು. ಆದರೆ ಈ ಕೈಬೆರಳೆಣಿಕೆಷ್ಟು ಜನರೇ ಅನೇಕರಿಗಾಗಿ ಬೆಳೆಯುವರು— ನಿರಾಶ್ರಿತ ಸಮಸ್ಯೆಗೆ ಅದೇ ಪರಿಹಾರೋಪಾಯ.

(ಹಿಂದುಸ್ಥಾನ ಸ್ಟ್ಯಾಂಡರ್ಡ)

ಓರ್ವ ಕಬ್ಬಿಗ ಮತ್ತು ಅವನ ಕಾವ್ಯಕನ್ಯೆ

ಇದೆಲ್ಲ ನಿಸರ್ಗ
ಈ ಸುಂದರನಾಡವರೊಳು ಸುಸರ್ಗ
ಬೆಳಕೆ ಬೇಕೆ
ಕಾವ್ಯದ ನೀ ಕೈಹಾಕುವನಿಗೆ
ಇನಿಳಲ ಬಂದಿಯೆ
ಬಾ ಮನೆಗೆ.
ನಾನೂ ನೀನೂ ಈ ವಿಶ್ವವನು
ಬ್ರಹ್ಮಾಂಡವ ಎಂಬಿಶ್ವವನು
ವಿರುತ ವಿರುತ ಹಾರೈಸಿ
ಮಾಡುವ ಜೀವ
ವನು ಆ ದೇವ.
ಬದುಕುವ ದೂರಕೆ ತೇದೈಸಿ.
ಕಾವ್ಯವೆ ನಿನ್ನೀ ಜೊತೆಯಲಿ ಬಂದು
ಸಿದ್ಧಿಯ ಪಡೆದುದ ಹೇಳುವೆನಿಂದು
ಲಕ್ಷಿಸು ಲಕ್ಷಿಸು ಕರ್ ಕವಿಯಾಗಿ
ಕವಿಕಣ್ಣಾಗಿ ಕವಿತೆಯೆ, ಕಾವ್ಯವೆ ಪೀಸ್
ಸಾಕ್ಷಿಯು ಮೇಲಿನ ಬಾಸ್.
ಗಂಡು ಹೆಣ್ಣು
ಮೊಗದಲಿ ಕಣ್ಣು
ಶಬ್ದದ ಅದ್ಭುತ
ಅಪಾರ ಶಕ್ತಿ
ಕನ್ನಡ ಸಂಸ್ಕೃತ
ಬೆರಸುವ ಭಕ್ತಿ
ಹೆರವರ ಭಾವವ
ಬಳಸುವ ಯುಕ್ತಿ
ಇವುಗಳಿಗೆಲ್ಲಾ
ಕವಚವು ತಲೆಯು
ತಲೆಯೋ ಚಂಡಿಕೆ
ಗಾಗಿದೆ ನೆಲೆಯು
ಚಂಡಿಕೆಯಲಿ ಹೇನು ಅ
ಇದು ದೇವರ ದಯೆಕಾಣು—
ಕಬ್ಬಿಗ, ಮೆಚ್ಚಿದೆ ನಿನ್ನೀನುಡಿಗೆ
ನಿತ್ಯವು ಬಾ ನನ್ನಯ ಗುಡಿಗೆ
ನೀ ಬರೆದೆಲ್ಲಾ ಪದ್ಯವು ಪ್ರಕಟ
ಆಗುವುದಕಟಾ
ಇದಕಿಂತಲು ಹೆಚ್ಚು
ಬಯಸುವದದು ಹುಚ್ಚು.
ದಿನಕೊಂದಾದರು ಪದ್ಯವ ನೀ ಬರೆ
ಕಬ್ಬಿಗ ನಿನಗಿರೆ ಈ ಗಿರಿ ಈ ಕೆರೆ
ಕಾವ್ಯದ ರೂಪದಿ ಶಬ್ದವ ಹಿಡಿಸಿರೆ
ಪುಟಗಳ ಹೆಚ್ಚಿಸು
ನನ್ನನು ಮೆಚ್ಚಿಸು
ನಾಡ ಕುರುಂಬರ
ಬೊಟ್ಟನು ಕಚ್ಚಿಸು
ತಿಳಿ ನೀ ಸತ್ಯವ ಇನ್ನೊಂದ
ಗುಣಕಿಂತಲು ಗಾತ್ರವೆ ಚೆಂದ!

—ವಿ. ಜಿ. ಭಟ್ಟ

ತಾಡ-ಬೆಲ್ಲ

ಭಾರತದ ಅನೇಕ ಪ್ರಾಂತಗಳಲ್ಲಿ [illegible] ಬೆಲ್ಲ [illegible] ಹಾಗೆ [illegible] ತೊಗರಿಗಳ [illegible] ಬೇಕಾಗಿದೆಯೆಂಬ [illegible] ಅದರ [illegible] ಬೆಲ್ಲ. ಅ[illegible] ಒಳೆ ಬೆಲ್ಲ.

ಒಂದುಕಾಲದಲ್ಲಿ ಎಲ್ಲ ಬಗೆಯ [illegible] ಗಳು [illegible] ಪಾತಕವಾಗಿದೆ. ಈ ಮರಗಳಿಂದ ಬೆಲ್ಲ [illegible] ಯುವ ವೃತ್ತಿಯನ್ನು [illegible] ಲಕ್ಷ ಕುಟುಂಬಗಳಿಗೆ [illegible] ಬಹುದಲ್ಲದೆ ಬೆಲ್ಲ-ಸಕ್ಕರೆಗಳ [illegible] ಭಾರತದ [illegible] ದೊರೆತಂತಾಗುವದು.

ಈಚಲು, ತಾಡ ಮೊದಲಾದ ಬಗೆಯ ಮರ[illegible] ಗಳು ಭಾರತದ ಎಲ್ಲ ಪ್ರಾಂತಗಳಲ್ಲೂ ಬೆಳೆಯು[illegible] ತ್ತವೆ. ಮದ್ರಾಸ, ಬಂಗಾಲ ಪ್ರಾಂತಗಳಲ್ಲಿ ಅನಾದಿ ಕಾಲದಿಂದ ಅವುಗಳಿಂದ ಬೆಲ್ಲ [illegible] ಯುವ ರೂಢಿಯಿದೆ. ಇವು ಹೆಚ್ಚಾಗಿ [illegible] ಪ್ರಯತ್ನವಿಲ್ಲದೇ ತಾವೇ ಬೆಳೆಯುವ [illegible] ಮರಗಳಾದುದರಿಂದ ಇದಕ್ಕೆ ವಿಶೇಷ [illegible] ದಳವೂ ಬೇಕಾಗುವದಿಲ್ಲ. ಬೆಲ್ಲ ತಯಾರಿಸುವ ವಿಧಾನವೂ ತೀರ ಸರಳವಾಗಿರುವುದರಿಂದ ಒಂದೊಂದೇ ಕುಟುಂಬ [illegible] ಸುವದರಿಂದಾರಂಭಿಸಿ ಬೆಲ್ಲ ಮಾಡುವ [illegible] ಎಲ್ಲ ಪ್ರಕ್ರಿಯೆಗಳನ್ನು ಸ್ವತಂತ್ರವಾಗಿ [illegible] ಬಹುದು. ಮೇಲಾಗಿ ಇವು ಮರದಮರ[illegible] ಬೆಳೆಯುವ ಕಾರಣ ದೊಡ್ಡ ಉದ್ಯೋಗ[illegible] ಇದನ್ನು ನಡೆಸದೆ ಮನೆ ಕೈಗಾರಿಕೆಯಾಗಿ[illegible] ಬೆಳೆಸಬೇಕಾಗುವದು.

ಗಾಂಧೀಜಿಯವರೂ ಇದೇ ಕಾರಣದಿಂದ ಈ ಕೈಗಾರಿಕೆಯಲ್ಲಿ ಆಸ್ಥೆವಹಿಸಿದ್ದರು. ವರ್ಧಾದ ಅ. ಭಾ. ಗ್ರಾಮೋದ್ಯೋಗ ಸಂ[illegible] ದವರು ಈ ಬಗ್ಗೆ [illegible] ಯೊಂದನ್ನು ತೆರೆದರು. ಅಲ್ಲಿ [illegible] ಪ್ರಯೋಗಗಳು ಪ್ರಾಂತಿಕ ಮಂತ್ರಿಮಂಡಲ[illegible] ಗಳ ದೃಷ್ಟಿಗೆ ಬಿದ್ದುದಲ್ಲದೆ, ಡಿಸಂಬರ [illegible] ದಲ್ಲಿ ಕೇಂದ್ರ ಸರಕಾರದೇ ಆ ಬಗ್ಗೆ [illegible] ಶಾಖೆಯನ್ನು ತೆರೆದು ವರ್ಧಾದಲ್ಲಿ [illegible] ಹೊಂದಿದ ಕಾರ್ಯಕರ್ತರನ್ನು ಅದರ [illegible] ಚಾರಕ್ಕಾಗಿ ನೇಮಿಸಿತು.

ಬಂಗಾಲ, ಮದ್ರಾಸ, ಕೊಚ್ಚಿ, [illegible] ಕೂರುಗಳಲ್ಲಿ ಈ ವೃತ್ತಿ ಈಗಾಗಲೆ [illegible] ಅದನ್ನು ಸುಧಾರಿಸಲು ಮತ್ತು [illegible] ಪ್ರಾಂತಗಳಲ್ಲಿ ಅದನ್ನು ಪ್ರಚಾರಕ್ಕೆ [illegible] ಕೇಂದ್ರ—ಪ್ರಾಂತಿಕ ಸರಕಾರಗಳು [illegible] ಜೊತೆ ಜೊತೆಯಾಗಿ. ಈಗಾಗಲೆ ಮುಂಬಯಿ, ಮಧ್ಯಪ್ರಾಂತ, ಪೂರ್ವ ಪಂಜಾಬ, [illegible] ಪ್ರಾಂತ, ಪಶ್ಚಿಮ ಬಂಗಾಲ ಪ್ರಾಂತಗಳ[illegible] ಈ ಕೈಗಾರಿಕೆಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ತರಬೇತಿ ಹೊಂದುವವರಿ[illegible] ತಿಂಗಳಿಗೆ ೩೦ ರೂ. ವೇತನ [illegible] ದಲ್ಲದೆ, ಮುಂದೆ ಅವರಿಗೆ ಆ ವೃತ್ತಿಯ[illegible] ರಂಭಿಸಲು [illegible] ರೂ. [illegible] ಧನ ಕೊಡಲಾಗುವದು.

ದಕ್ಷಿಣ ಕನ್ನಡದ ಮೂಡಬಿದ್ರೆಯಲ್ಲಿ [illegible] ಸೆಪ್ಟೆಂಬರದಲ್ಲಿ ಒಂದು ಕೇಂದ್ರ [illegible] ಬೇತಿ ಕೇಂದ್ರ ಸ್ಥಾಪಿಸಲ್ಪಟ್ಟಿದೆ. ಅಲ್ಲಿ [illegible] ಬಗ್ಗೆ ಎಲ್ಲ ಸೈದ್ಧಾಂತಿಕ ಮತ್ತು ಪ್ರಾಯೋ[illegible] ಗಿಕ ಪರಿಜ್ಞಾನವನ್ನೊದಗಿಸಲಾಗುವದು.

[illegible]

ನಿಜಾಮಿ ಆಡಳಿತೆಯ ಒಳನೋಟ

ಉಚ್ಚ ಶಿಕ್ಷಣಕ್ಕಾಗಿ ಪಡೆಯುವ ಅನೇಕ ಮಹಾಶಾಲೆಗಳಲ್ಲಿ ವಿದ್ಯೆ, ಮುಖ್ಯ ವಾದುದು. ಇದಕ್ಕಾಗಿ ಉಚ್ಚ ಶಿಕ್ಷಣ ಕೊಡುವ ಪ್ರಮಾಣದ ಮೇಲೆ ದ್ರವ್ಯವನ್ನು ವಿನಿಯೋಗಿಸ ಬೇಕಾಗುತ್ತದೆ. ಈ ಧನವನ್ನು ಉಸ್ಮಾನಿಯಾ ವಿದ್ಯಾಶಾಖೆ ದುರ್ವಿನಿಯೋಗ ಮಾಡುತ್ತಿರುವದ ರಿಂದಲೇ ಹೈದರಾಬಾದು ಸಂಸ್ಥಾನದಲ್ಲಿ ಅನೇಕ ದುಷ್ಪರಿಣಾಮಗಳಾಗಬೇಕಾಗಿದೆ. ಈ ವಿದ್ಯಾಶಾಖೆ ಮುಸ್ಲಿಮ ವಿದ್ಯೆ ಮತಪಕ್ಷಪಾತವಾಗಿದ್ದು, ಮುಸಲ್ಮಾನೇತರರನ್ನು ತಲೆ ಎತ್ತಗೊಡದಂತೆ ಮಾಡುವ ತನ್ನ ಉದ್ದೇಶ ವನ್ನು ಸರಿಯಾಗಿ ಸಾಧಿಸಿದೆ. ಸಂಸ್ಥಾನದಲ್ಲಿ ಮೂರಕ್ಕೆ ಒಂದು ಜನರ ಮಾತೃಭಾಷೆ ಉರ್ದು ಅಲ್ಲ. ಆದರೆ ವಿದ್ಯಾಶಾಖೆಯಲ್ಲಿ ಪ್ರಾಂತಭಾಷೆ ಗಳಾವವೂ ಇರದೆ ಕೇವಲ ಉರ್ದು ಮಾತ್ರವೇ ಇದ್ದು ಅಧಿಕಾರಿಗಳು ಅದ ಜನ. ಇವರೆಲ್ಲ ಪ್ರಾಂತಭಾಷೆಗಳ ದ್ವೇಷಿಗಳು ಕೂಡ ಆಗಿದ್ದಾರೆ. ಪಠ್ಯಗ್ರಂಥಗಳೆಲ್ಲ ಇಸ್ಲಾಂ ಮತದ ದೃಷ್ಟಿಯಿಂದಲೇ ಬರೆದವುಗಳು; ತೀವ್ರ ದ್ವೇಷ ಭಾವದಿಂದ ಬರೆದವುಗಳು. ಚರಿತ್ರೆ ಮುಸಲ್ಮಾನ ಅರಸರಿಗೆ ಅನುಕೂಲವಾಗಿ ಮಾಡಲ್ಪಟ್ಟು ಮಹಮ್ಮದೀಯರ ಘನತೆಯನ್ನು ಹೊಗಳುವ ಕಥೆಯಾಗಿ ಹೋಗಿದೆ. ಸ್ವಲ್ಪದ ರಲ್ಲಿ ಹೇಳಬೇಕೆಂದರೆ ಇಸ್ಲಾಂ ಧರ್ಮಪ್ರಚಾರ ಮಾಡುವ ಇತರ ಮತಗಳ ನಾಶವೇ ಇಲ್ಲಿಯ ವಿದ್ಯಾವಿಧಾನದ ಗುರಿಯಾಗಿದೆ.

ವಿದ್ಯಾಶಾಖೆಯ ಪಾಲಕರು

ಈ ಶಾಖೆಯು ವಿದ್ಯಾತಜ್ಞರಾದರೂ ಒಳ್ಳೆಯ ವಿದ್ಯಾವಂತರಾಗಿದ್ದರೆ, ಇಲ್ಲಿಯ ಪರಿಸ್ಥಿತಿ ಇಷ್ಟು ಕೆಡುತ್ತಿರಲಿಲ್ಲ. ಒಂದು ತಿಂಗಳು ಮುಂಚೆಯ ವರೆಗೂ ಇದ್ದ ಡಿಪ್ಯೂಟಿ ಡೈರೆಕ್ಟರರ ವಿದ್ಯೆ ಅಲಹಾಬಾದು ಮೆಟ್ರಿಕ್, ಈಗ ಸೆಕೆಂಡರಿ ಎಜ್ಯುಕೇಶನ್ ಬೋರ್ಡಿನಲ್ಲಿದ್ದ ಪ್ರಧಾನೋದ್ಯೋಗಿಗಳ ಡಿಗ್ರಿ ಬಹಳ ಜನ ಕ್ಕಾರದಷ್ಟು. ಅದು ಬಿ. ಸಿ. ಓ. ಎಂ. ಎಂದು. ಮೊದಲಿನ ಎರಡು ಅಕ್ಷರಗಳನ್ನು ದೊಡ್ಡವಾಗಿ ಬರೆದು ಕಡೆಯವೆರಡನ್ನು ಚಿಕ್ಕವಾಗಿ ಬರೆ ಯುತ್ತಾರೆ. ನೋಡಿದವರಿಗೆ ಅದು ಬಿ. ಕಾಂ. ಎಂದು ಅನಿಸುತ್ತದೆ. ಆದರೆ ಇದೂ (ಅಲಹಾಬಾದು) ಮ್ಯಾಟ್ರಿಕ್ ಸಮಾನವೇ. ಇದಲ್ಲದೆ-ಗೌರ್ನಮೆಂಟಿನಿಂದ ತುಂಬ ಪೋಷಿಸಲ್ಪಡುತ್ತಿರುವ ವಿದ್ಯಾಸಂಸ್ಥೆಯೊಂದಿದೆ. ಅದು ನಿಜಾಮಿಯಾ ವಿಶ್ವ ವಿದ್ಯಾ ಸಂಸ್ಥೆ. ಉರ್ದು ಡಿಗ್ರಿಗಳನ್ನು ಕೊಡುವದು. ಈ ಡಿಗ್ರಿಗಳನ್ನು ಪಡೆದವರು ಎಂತಹ ದೊಡ್ಡ ಉದ್ಯೋಗಗಳ ನ್ನಾದರೂ ಮಾಡಲು ಯೋಗ್ಯರೇ. ವಿದೇಶದ ಡಿಗ್ರಿಗಳನ್ನು ಪಡೆದ ದೊಡ್ಡವರು ವಿಶ್ವವಿದ್ಯಾ ಲಯದ ಉಪಾಧ್ಯಕ್ಷರು ಮೊದಲುಗೊಂಡು ಸಂತೋಷಭರಿತರಾಗಿದ್ದಾರೆ. ಇವರಲ್ಲಿ ಅರ್ಧ ಜನ "ಎಕ್ವಿವ್ಯಾಲಂಟ್" ಡಿಗ್ರಿಗಳನ್ನು ಹೊಂದಿ ದವರು. ಅಂದರೆ ಪುಸ್ತಕ ಕೈಲಿ ಹಿಡಿಯದೆ ಕಾಲೇಜಿನಲ್ಲಿ ಕಾಲಿಡದೆ ಪರೀಕ್ಷೆಗೆ ಹೋಗದೆ ಇಷ್ಟು ದೂರ ದೇಶದಿಂದ ಹೋಗಿ ವಿದ್ಯೆಯನ್ನು ಬೇಗನೆ ಫಲಿತವಾಗಿ, ಒಂದು ಡಿಗ್ರಿಯನ್ನು ಹೇಗೋ ಹೊಸದು ಸಂಪಾದಿಸಿಕೊಂಡರೆ-ಅದು 'ಎಕ್ವಿವ್ಯಾಲಂಟ್' ಡಿಗ್ರಿ ಇಲ್ಲವೆ ಪ್ರಾಲ್ಯನೆ ಇಯುತ್ತೆ ಎಂದರೂ ತಪ್ಪಿಲ್ಲ. ಅದರ ಕೆಲ ವಿದೇಶಿಯ ವಿದ್ಯಾಲಯಗಳು ಕೊಡುವ ಡಿಗ್ರಿಗಳಲ್ಲಿ ಪಾಲ್ಯವೆಯ ತರಗತಿ ಕೂಡ ಇದೆ. ಅದರ ಇಡೀ ಹನೆಯ ತರಗತಿ ಡಿಗ್ರಿ. ದೇಶೀಯ ವಿಶ್ವ ವಿದ್ಯಾಲಯಗಳಲ್ಲಿ ಸಂಪಾದಿಸಿದ ಮೊದಲನೆಯ ತರಗತಿಯ ಡಿಗ್ರಿಗಿಂತಲೂ, ಉಸ್ಮಾನಿಯಾ ವಿದ್ಯಾಶಾಖೆಯಲ್ಲಿ "ಎಕ್ವಿವ್ಯಾಲಂಟ್"ಗೇ ಬೆಲೆ ಹೆಚ್ಚು. ಇವಲ್ಲದೆ ಅರಿಗಳ ಡಿಗ್ರಿಗಳು ಬೇರೆ. ಅವು ಉಸ್ಮಾನಿಯಾ ದೇಶಭಕ್ತಿಗೆ ಸಂಬಂಧಿಸಿ ದವು. ಅರಿಗಳ ಸಂಸ್ಕೃತ ಎಂ. ಎ. ಗಿಂತಲೂ ಎಷ್ಟೋ ಪ್ರಶಸ್ತ.

ಉಸ್ಮಾನಿಯಾ ವಿಶ್ವವಿದ್ಯಾಲಯಗಳಲ್ಲಿಯ ಹಿಂದು ವಿದ್ಯಾರ್ಥಿಗಳು ಎಷ್ಟೇ ಬುದ್ಧಿವಂತ ರಾಗಿದ್ದರೂ ಒಂದೊಂದು ವೇಳೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವದೊಂದು ವಾದಿಕೆ.

ಒಂದು ನಿರ್ದೇಶ ಲೆಕ್ಕದ ಪ್ರಕಾರವೇ ಹಿಂದು ವಿದ್ಯಾರ್ಥಿಗಳು ಪಾಸಾಗುವರು. ಅಂತೆಯೇ ಉದ್ಯೋಗಗಳಿಗೆ ದೊರಕುವವರು ಮುಸಲ್ಮಾನರೇ. ಉಚ್ಚ ಶಿಕ್ಷಣ ಪಡೆದ ಎಷ್ಟೋ ಹಿಂದುಗಳು ಚಿಕ್ಕ ಚಿಕ್ಕ ಉದ್ಯೋಗ ಗಳಲ್ಲಿ ಕೊಳೆಯುತ್ತಿದ್ದಾರೆ

ಉದ್ಯೋಗಗಳೂ ಧರ್ಮತತ್ವಗಳೂ

ಇಂದು ವಿದ್ಯಾಶಾಖೆಯಲ್ಲಿ ವಿಶ್ವವಿದ್ಯಾ ಲಯವೊಂದನ್ನುಳಿದು-ಒಟ್ಟು ೧೨೨ ಜನ ಗಜೆ ಟೆಡ್ ಆಫೀಸರರಿದ್ದಾರೆ. ಇವರಲ್ಲಿ ೨೪ ಜನ ಹಿಂದುಗಳು, ಮುಖ್ಯ ಸ್ಥಾನಗಳಾವವೂ ಇವರಿ ಗಿಲ್ಲ. ಇದು ಹೀಗಿರಲು ಮುಸಲ್ಮಾನ ಅಧಿಕಾರಿ ಗಳಾದರೂ ಕಾಲಾನುಸಾರ ಮಾರ್ಪುಗಳನ್ನು ಸೂಚಿಸುವ ವಿಶಾಲಹೃದಯರಲ್ಲ. ೫ ಡಿವಿಜ ನಲ್ ಇನ್ಸಪೆಕ್ಟರರೂ ಮುಸಲ್ಮಾನರೇ. ೧೬ ಜನ ಜಿಲ್ಲಾ ಇನಸ್ಪೆಕ್ಟರರಲ್ಲಿ ಒಬ್ಬರೇ ಹಿಂದು ವಿದ್ಯಾಶಾಖೆ ಡೈರೆಕ್ಟರ ಆಫೀಸಿನಲ್ಲಿದ್ದ ೧೧೪ ಜನ ನಾನ್‌ಗಜೆಟೆಡ್ ಉದ್ಯೋಗಿಗಳಲ್ಲಿ ೧೫ ಜನ ಮಾತ್ರ ಹಿಂದುಗಳು. ಹೈಸ್ಕೂಲುಗಳ ಸಂಗಡ ಕಲೆತಿರುವ ಕಾಲೇಜುಗಳು ೫ ಇವೆ. ಇವುಗಳ ಪ್ರಿನ್ಸಿಪಾಲರು ಗಜೆಟೆಡ್ ಯೋಗ್ಯತೆ ಯುಳ್ಳ ಅಧ್ಯಾಪಕರು. ಈ ಒಬ್ಬಿಬ್ಬರನ್ನುಳಿದು ಮಿಕ್ಕ ಎಲ್ಲರೂ ಮುಸಲ್ಮಾನರೇ. ಹೈಸ್ಕೂಲು ಮಿಡ್ಲಸ್ಕೂಲು ಪ್ರೈಮರಿ ಸ್ಕೂಲುಗಳ ಹೆಡ್ಮಾಸ್ತರರಲ್ಲಿ ನೂರಕ್ಕೆ ೮೦ ಜನ ಮಹಮ್ಮದೀಯರೇ. ಇವರಲ್ಲಿ ಒಬ್ಬರಿಗಾದರೂ ಪ್ರಾದೇಶಿಕ ಭಾಷೆ ಬರುವದಿಲ್ಲ.

ಇತ್ತೀಚೆ ರಜಾಕಾರರ ಆಳಿಕೆಯಲ್ಲಿ ನಿಮ್ನ ಜಾತಿಯವರಿಗಾಗಿ ಅಲ್ಲಲ್ಲಿ ಶಾಲೆಗಳನ್ನು ತೆರೆ ದರು. ಅವುಗಳಲ್ಲಿ ಹೆಚ್ಚಾಗಿ ಅಧ್ಯಾಪಕರು ಮಹಮ್ಮದೀಯರೇ. ಈ ಶಾಲೆಗಳಲ್ಲಿ ಮುಸ್ಲಿಂ ಧರ್ಮಪ್ರಚಾರ, ಮುಸ್ಲಿಂ ಧರ್ಮದಲ್ಲಿ ಸೇರಿಸಿ ಕೊಳ್ಳುವದು ತಪ್ಪಿದರೆ ಬೇರೇನೂ ಇಲ್ಲ. ಈ ಶಾಲೆಗಳಿಗಾಗಿಯೇ ನಿಯಮಿಸಿದ ಒಬ್ಬ ಇನ್ ಸ್ಪೆಕ್ಟರನಿದ್ದಾನೆ ಈತನಿಗೂ ಈ ಶಾಲೆಗಳಿಗೂ ಏನೂ ಸಂಬಂಧವಿರುವದಿಲ್ಲ.

ಇನ್ನು ಹೈಸ್ಕೂಲುಗಳನ್ನು ಕಾಲೇಜುಗಳ ನ್ನಾಗಿ ಬೆಳೆಸಿ ಅದೇ ಹೆಡ್ಮಾಸ್ತರರನ್ನು ಪ್ರಿನ್ಸಿ ಪಾಲರನ್ನಾಗಿ ಮಾಡಿ ಹೆಚ್ಚು ಸಂಬಳವನ್ನು ಕೊಡುವದೊಂದು ಉಸ್ಮಾನಿಯಾ ವಿದ್ಯಾಶಾಖೆ ಯವರ ವೈಶಿಷ್ಟ್ಯ. ಅವರು ಪ್ರಿನ್ಸಿಪಾಲರಾದ ಮೇಲೆ ಕೈತುಂಬ ಸಂಬಳದೊಂದಿಗೆ ಮೈತುಂಬ ವಿಶ್ರಾಂತಿ. ಕಾಲೇಜು ತರಗತಿಯ ಬೋಧನೆಗೆ ಶಕ್ತಿ ಸಾಲದು. ಪ್ರಿನ್ಸಿಪಾಲರು ಹೈಸ್ಕೂಲಿಗೆ ಹೇಗೆ ಹೋಗಬೇಕು? ಇವರ ಎಲ್ಲ ಕೆಲಸ ಗಳನ್ನು ನೋಡಿಕೊಂಡು ಹೋಗಲು ಒಬ್ಬ ಸಹೋಪಾಧ್ಯಾಯನಿರುತ್ತಾನೆ. ಈತನು ಸಾಮಾನ್ಯವಾಗಿ ಹಿಂದುವೇ ಆಗಿರುವನು. ಅಧಿ ಕಾರ ಪ್ರಧಾನೋಪಾಧ್ಯಾಯರದು, ಚಾಕರಿ ಸಹೋಪಾಧ್ಯಾಯರದು. ಕೆಲ ಹೆಡ್ಮಾಸ್ತರರಿಗೆ ಪ್ರಿನ್ಸಿಪಾಲರೆಂದು ಕರೆಸಿಕೊಳ್ಳುವದೊಂದು ಹುಚ್ಚು. ಇಲ್ಲಿಯ ಮುಸ್ಲಿಮೇತರ ಉಪಾಧ್ಯಾ ಯರ ಕಷ್ಟಗಳನ್ನು ಅವರ ಬಾಯಿಂದಲೇ ಕೇಳಿ ತಿಳಿಯಬೇಕು. ಆದರೆ ಈಗ ಕೆಲಮಟ್ಟಿಗೆ ಅವರ ದಾಸ್ಯ ಕೊಳಗಿದೆ ಎನ್ನಬಹುದು; ಆದರೂ ಇತರ ಉಸ್ಮಾನಿಯಾ ಸಂಪ್ರದಾಯ ಗಳೂ ಮರ್ಯಾದೆಗಳೂ ಹಾಗೆಯೇ ಉಳಿ ದಿವೆ. ಎಷ್ಟೋ ಕಾಲಗಳಿಂದ ಸಂಬಳ ಪಡೆ ಯದೆ ಯೋಗ್ಯತೆಯ ಪ್ರಕಾರ ಉದ್ಯೋಗ ಪಡೆಯದೆ ಬಿದ್ದಿರುವ ಮಹಮ್ಮದೀಯೇ ತರರು ಇನ್ನೂ ಹಾಗೇ ಇದ್ದಾರೆ.

ಪ್ರಜಾದ್ರವ್ಯದ ದುರ್ವ್ಯಯ

ಹೈದರಾಬಾದಿನಲ್ಲಿ "ಮಹಬೂಬಿಯಾ ಗರ್ಲ್ಸ ಹೈಸ್ಕೂಲೊಂದಿದೆ. ಇದರಲ್ಲಿ ಬೇರೆ ಉಪಾಧ್ಯಾಯಿನಿಯರನ್ನುಳಿದು ೧೪ ಗೆಜೆಟೆಡ ಆಫೀಸರರಿದ್ದಾರೆ. "ಮಜೀದಿಯಾ ಗರ್ಲ್ಸ ಹೈಸ್ಕೂಲಿ"ನಲ್ಲಿ ೩ ಗೆಜೆಟೆಡ್ ಆಫೀಸರರು, 'ಮದರಾಸ ಅಲಿಯಾ' ಬಾಲಕರ ಸಾಲೆಯಲ್ಲಿ ೬ ಗೆಜೆಟೆಡ್ ಆಫೀಸರರು, ಜಾಗಿರದಾರರ ಕಾಲೇಜಿನಲ್ಲಿ (ಇದು ಕಾಲೇಜಲ್ಲ) ೮ ಜನ ಗೆಜೆ ಟೆಡ್ ಆಫೀಸರರು, ನಾಂಪಲ್ಲಿ ಗರ್ಲ್ಸ ಹೈಸ್ಕೂ ಲಿನಲ್ಲಿ ೩ ಹೀಗೆ ಇವರೆಲ್ಲರೂ ಪ್ರಾದೇಶಿಕ ಭಾಷೆ ಬರದಿರುವ ಮಹಮ್ಮದೀಯರೇ. ಈ ಎಲ್ಲ ಶಾಲೆಗಳಲ್ಲಿಯೂ ಉರ್ದು ಮುಖ್ಯ ಭಾಷೆ ಇವರಲ್ಲದೆ ಉಸ್ಮಾನಿಯಾ ಕಾಲೇಜುಗಳ ಪ್ರಿನ್ಸಿ ಪಾಲರೆಲ್ಲ ೨ ಸಾವಿರ ಸಂಬಳ ಪಡೆಯುತ್ತಿರುವ ಗಜೆಟೆಡ್ ಆಫೀಸರರೇ ಇದು ನೋಡಿ-ಆರ್ಟ್ಸ್ ಕಾಲೇಜು, ಸೈನ್ಸ್ ಕಾಲೇಜು, ಟೆಕ್ನಾಲಾಜಿಕಲ್ ಕಾಲೇಜು, ಎಂಜನಿಯರಿಂಗ್ ಕಾಲೇಜು, ಲಾ ಕಾಲೇಜು, ಸ್ತ್ರೀ ಕಾಲೇಜು, ಸಿಟಿ ಕಾಲೇಜು, ನಿಜಾಂ ಕಾಲೇಜು-ಇವಲ್ಲದೆ ಶಾಸ್ತ್ರಪರಿಶೋಧನ ಶಾಖೆಯ ಡೈರೆಕ್ಟರರು, ಅನುವಾದ ಶಾಖಾ ಡೈರೆಕ್ಟರರು ಇವರ ಮೇಲೆ ರಿಜಿಸ್ಟ್ರಾರರು ಉಪಾಧ್ಯಕ್ಷರೂ ಇದ್ದಾರೆ ಮೊನ್ನೆಯೇ ಸಿಟಿಕಾಲೇಜಿನಲ್ಲಿ ಮಾತ್ರ ಪ್ರಿನ್ಸಿ ಪಾಲ—ರಜಿಸ್ಟ್ರಾರರ ಪದವಿ ಹಿಂದುಗಳಿಗೆ ದೊರೆತಿವೆ. ಶಾಸ್ತ್ರಪರಿಶೋಧನೆಗಾಗಿಯೂ ಅನುವಾದಗಳಿಗಾಗಿಯೂ ಆಗಿರುವ ಖರ್ಚು ಲಕ್ಷದಿಂದ ಕೋಟಿಯವರೆಗೆ. ಫಲಿತಶೂನ್ಯ! ದ್ರವ್ಯವನ್ನು ಅಪವ್ಯಯಮಾಡಲು "ಮಘಪ ಪ್ರಭುತ್ವಕ್ಕೆ ಅನೇಕ ಮಾರ್ಗಗಳು ಸಿಕ್ಕಿವೆ. ಒಂದೇ ಶಾಲೆಯಲ್ಲಿ ಹೈಸ್ಕೂಲು, ಮಿಡ್ಲ ಸ್ಕೂಲು, ಪ್ರಾಯಮರಿಸ್ಕೂಲು ಹೀಗೆ ಮೂರು ವಿಭಾಗಗಳನ್ನೂ ಮಾಡುವದು, ಪ್ರಪಂಚದಮುಂದೆ ಶಾಲೆಗಳ ಸಂಖ್ಯೆ ಹೆಚ್ಚಾಗಿ ತೋರಿಸುವದು! ಇನ್ನು ಮೇಲೆ ಉದಾರ ಹೃದ ಯರು ಯಾರಾದರೂ ಶಾಲೆ ತೆರೆಯಬಯಸಿ ದರೆ,-"ಪ್ರಭುತ್ವ ಸಹಾಯಮಾಡಲು ಸಿದ್ಧ" ಎಂದು ಮೊನ್ನೆಯೇ ವಿದ್ಯಾಶಾಖೆಯ ಮಂತ್ರಿ ಗಳು ನುಡಿದಿರುವರು. ಆದರೆ ಈ ಮೊದಲು ಯಾರಾದರೂ ಇಂತಹ ಕಾರ್ಯಕ್ಕೆ ಕೈಹಾ ಕಿದ್ದೇ ಅದರೆ ಶಿಕ್ಷೆಗೇ ಗುರಿಯಾಗುತ್ತಿದ್ದರು.

ಮುಸ್ಲಿಂ ಲೈಬ್ರರಿಗಳಿಗೆ ಸರಕಾರಿ ಗ್ರಾಂಟು ಗಳು. ಹಿಂದುಗಳಿಗೆ ಲೈಬ್ರರಿತೆಗೆಯುವದು ಸಹ ಕ್ಲೇಶವುವಲ್ಲ. ಪಠ್ಯಗ್ರಂಥಗಳನ್ನು ನಿರ್ಣ ಯಿಸುವಲ್ಲಿಯೂ ಮತದ ವಿಚಾರವೇ. ಗ್ರಂಥ ವಸ್ತು ಮುಸ್ಲಿಂ ಧರ್ಮಾನುಕೂಲವಾಗಿರಬೇಕು ಇನ್ನೂ ಎಷ್ಟೋ ಅನಾನುಕೂಲಗಳು.

ಸರಕಾರಿ ಸ್ಕೂಲುಗಳಿಗೆ ಬಾಡಿಗೆಮನೆ ಬೇಕಾದರೆ ಮುಸ್ಲಿಮರ ಭವನಗಳೇ ಸಿಗುವವು ಅವುಗಳಿಗೆ ಪಿ. ಡಬ್ಲ್ಯು. ಡಿ. ಯವರು ಬಾಡಿಗೆ ನಿರ್ಧರಿಸಿ ತೋರಿದ ಔದಾರ್ಯ ಹೇಳ ಲಾಗದು. ಈ ಭವನಗಳನ್ನು ಈಗಲೇ ಖಾಲಿ ಮಾಡಿಸಿದರೆ ಎಷ್ಟೋ ಧನ ಉಳಿತಾಯವಾಗು ವದು. ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಿರೀಕ್ಷಣೆಗಾಗಿಯೂ ಹಿಂದು ಉಪಾಧ್ಯಾಯರೂ ಕೆಲಸಕ್ಕೆ ಬರುವದಿಲ್ಲ. ಏನೋ ಲಾಂಛನಕ್ಕೆ ಪಾಲ್ಕೈದು ಜನ ಹಿಂದುಗಳಿರುವರೇನೋ! ಹರಿಜನರಿಗಾಗಿ ತೆರೆದಿರುವ ಶಾಲೆಗಳನ್ನು ಮಾತ್ರ ಈಗಿಂದೀಗಲೇ ತೆಗೆಸಿ ಹಾಕಲಿಕ್ಕೆ ಬೇಕು. ಯಾಕಂದರೆ- ಇದು ಹಿಂದುಗಳಿಗೆ ತುಂಬ ಅಪಮಾನ. ಈಗಿದ್ದ ಶಾಲೆಗಳಲ್ಲಿ ಅವರು ಅಭ್ಯಾಸ ಮಾಡಿದರೇ ಒಳಿತು. ಹಿಂದು ಗಳಿಗಿಂತ ಅವರನ್ನು ದೂರವಿಟ್ಟು ಧರ್ಮಾಂತರ ಮಾಡಿಕೊಳ್ಳುವ ಕೆಟ್ಟ ಉದ್ದೇಶದಿಂದ ಅವನ್ನು ತೆರೆದಿದ್ದರು. ಹೈದರಾಬಾದಿನಲ್ಲಿ ಒಂದೆರಡು ಶಾಲೆಗಳನ್ನು ಬಿಟ್ಟರೆ ಹಿಂದು ಬಾಲಿಕೆಯರಿ ಗಾಗಿ ಎಲ್ಲಿಯೂ ಪ್ರವೇಶವಿಲ್ಲ. ಎಲ್ಲ ಪರದಾ ಶಾಲೆಗಳೇ. ಈ ಪರದಾ ಶಾಲೆಗಳಲ್ಲಿ ಎಲ್ಲರೂ ಓದುವ ಅನುಕೂಲ ಮಾಡಿಕೊಡಬೇಕು.

ಅನೇಕ ಜನ ವಿದ್ಯಾ ಶಾಖೋದ್ಯೋಗಿಗಳೂ ಉಪಾಧ್ಯಾಯರೂ ರಜಾಕಾರರ ಕಾಲದಲ್ಲಿ ಕ್ರೂರ ಕೃತ್ಯಗಳನ್ನು ಮಾಡಿದರು. ಅವರನ್ನು ತೆಗೆದುಹಾಕಬೇಕು.

ಮಾರ್ಪಾಡು ಬರಲಿಕ್ಕಿಲ್ಲವೇ?

ಆದರೆ ಇಂದಿಗೂ ಪ್ರಭುತ್ವದಲ್ಲಿ ಬದಲಾ ವಣೆಯ ಸೂಚನೆ ಕಾಣದಂತಿದೆ. ಮೊನ್ನೆ ಎಷ್ಟೋ ತನ್ನ ಗರ್ಜನಗಳಿಂದ ಆ ನೆಯ ತರಗತಿಯ ವರೆಗೂ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಲು ನಿಶ್ಚಯಿಸಲ್ಪಟ್ಟಿದೆ. ಮಾತೃ ಭಾಷೆಯಲ್ಲಿ ಬೋಧಿಸುವ ಉಪಾಧ್ಯಾಯರಿಗೆ ಟ್ರೇನಿಂಗಿನವ್ಯವಸ್ಥೆ ಏನೂ ಇಲ್ಲ. ಸೆಕಂಡರಿ ವಿದ್ಯಾಬೋರ್ಡಿನಲ್ಲಿ ಕನ್ನಡ, ತೆಲಗು, ಮರಾಠಿ ಮಾತೃಭಾಷೆಯುಳ್ಳವರನ್ನು ಸೇರಿಸಿ ಶಿಕ್ಷಣವೇ ಹೈಸ್ಕೂಲು ಶಿಕ್ಷಣದ ಸಂಸ್ಕರಣ ವನ್ನು ಕೈಗೊಳ್ಳಬೇಕು. ಇದು ವರೆಗೂ ಕಾಲೇಜುಗಳಲ್ಲಿಯ ಶಿಕ್ಷಣದ ವಿಷಯದಲ್ಲಿ ಪ್ರಭುತ್ವವು ಒಂದು ನಿಶ್ಚಯಕ್ಕೆ ಬರದಿರುವದ ರಿಂದ ಸಂಶಯಗಳಿಗೆ ಹಾದಿಯಾಗಿದೆ.

— ಎಂ. ಜಯತೀರ್ಥ ಶರ್ಮಾ

(ಆಂಧ್ರ ಪತ್ರಿಕೆಯ ಆಧಾರದಿಂದ)

ಬಾಡಿಗೆ ವಸೂಲಿಗೆ ಬಂದಿದ್ದ ಒಡೆಯ ನಿಗೆ ಕಲಾವಿದನೊಬ್ಬನು, ತಾಳ್ಮೆಗೆಡಬೇಡಿ, ಕೆಲದಿನ ತಡೆದರೆ ನನ್ನ ಈ ಕೋಣೆಯನ್ನು ತೋರಿಸಿ ಇಕೋ ಜನಗು ಇಲ್ಲೊಬ್ಬ ದೊಡ್ಡ ಕಲೆಗಾರ ವಾಸಿಸುತ್ತಿದ್ದ ಎನ್ನುತ್ತಾರೆ ಎನ್ನಲು, 'ಇಂದು ಸಂಜೆಯೊಳಗೆ ಬಾಡಿಗೆ ಸಲ್ಲಿಸದಿದ್ದರೆ ನಾಳೆಯಿಂದಲೇ ಜನರು ಹಾಗೆ ನ್ನುವಂತೆ ಮಾಡುತ್ತೇನೆ' ಎಂದು ಒಡೆಯ ಗದ್ದರಿಸಿದಾಗ ಕಲಾವಿದ ಪೆಚ್ಚಾದ!

ಬರೆದವರು
ಭಾರದ್ವಾಜ

...ದ ಮಾರ್ಗಗಳು

...ಪ್ರಥಮ ಸ್ಥಾನ ಕೊಡಬೇಕು

...ಸಂತುಷ್ಟ ...ಕೂಲಿಕಾರ ...ಂದ ಮೋಸ ...ದ್ದರಲ್ಲಿ ಆಶ್ಚರ್ಯ ...ದೃಢ ನಿರ್ಧಾರ ... ಎದುರಿಸದೆ ... ಸರಕಾರಕ್ಕೆ ...ಟು ತಿಂಗಳು

...ಬ್ಬರಯಂತ್ರ: ಹೊಸ ಮಾದರಿಯ ಈ ಬ್ರಿಟಿಶ ಯಂತ್ರ ...ಯಂಥ ಗೊಬ್ಬರವನ್ನು ಚಿಮುಕಿಸಲು ಉಪಯೋಗಿಸಲ್ಪಡು

...ದ ಕಾಂಗ್ರೆಸ್ ...ರಂಥ ಮಹಾ ...ಶವನ್ನು ಸ್ಥಿರ ...ಯಕ ...ಕರಣದಿಂದ ...ಲವೂ ಆಗಿದೆ. ... ಮುಟ್ಟದ್ದ ...ಗೆ ಅನ್ನ ವಸ್ತ್ರ ... ಕಮ್ಯುನಿಸಡ ... ನೀಗಿಸಲು

...ದಲು

...ಜೀವನಕ್ಕಾಗಿ ...ನ್ನು ವಿವೇಚಿಸು ...ವು ಗುಣಾನು ...ನೆಗಳನ್ನು ವ್ಯವ ...ವೆಂದು ಮನ ...ಬೇಕಾದುದಕ್ಕೇ ...ದೆ ಗೌಣವನ್ನು ...ನ್ನು ಗೌಣ ...ದು. ಕೃಷಿಗೇ ...ಕೆನ್ನಲು ಒಂದ ... ನಮ್ಮ ದೇಶ ...ನ ಒಕ್ಕಲತನ ... ಒಕ್ಕಲ ... ದೇಶವಲ್ಲಿ ...ರುವ ನಾಚಿ ...ವು ನಿವಾರಿಸ ... ಒಕ್ಕಲತನದ ...ದು ಅತಿ ಕಠಿಣ ...ಗಿನ ಅನುಭವ ... ಭಾರತವನ್ನು ...ಪೂರ್ಣವಾಗಿ

ಮಾಡುವ ನಿರ್ಧಾರವನ್ನು ಕೇಂದ್ರ ಸರಕಾರ ಸಾರಿದ್ದೇನೋ ಸರಿ. ಇದರ ಅರ್ಥ ೧೯೫೧ರೊಳಗೆ ನಾವು ಈಗಿದ್ದದ್ದಕ್ಕಿಂತ ವರ್ಷಕ್ಕೆ ೪೫-೫೦ ಲಕ್ಷ ಟನ್ ಧಾನ್ಯಗಳನ್ನು ಹೆಚ್ಚು ಬೆಳೆಯಲುಸಮರ್ಥರಾಗಬೇಕೆಂದಾಗುವದು. ಇದು ಮಾತಿನಲ್ಲಿ ಕಾಣುವಷ್ಟು ಕೃತಿಯಲ್ಲಿ ಸುಲಭವಾಗದು. ಪಂಜಾಬ ಸಿಂಧಗಳಂಥ ಆಹಾರ ಉಳಿಕೆಯ ಪ್ರಾಂತಗಳು ಭಾರತದಲ್ಲಿ

ದ್ದಾಗಲೆ ಕೊರತೆಯನ್ನು ನೀಗಿಸಲು ಹತ್ತು ವರ್ಷಗಳಲ್ಲಿ ಕೂಡ ಸಾಧ್ಯವಾಗಲಿಲ್ಲ. ಈಗ ಅವು ಕೈಬಿಟ್ಟ ಮೇಲೆ ೩ ವರ್ಷಗಳಲ್ಲಿ ಪರಿಸ್ಥಿತಿಯನ್ನು ಹದಕ್ಕೆ ತರಬೇಕಾದರೆ ಮಹಾ ಪ್ರಯತ್ನಗಳೇ ಬೇಕಾದಾವು. ೧೯೪೭-೪೮ರಲ್ಲಿ ೯ ಲಕ್ಷ ಟನ್ ಆಹಾರವನ್ನು ಹೆಚ್ಚಿಗೆ ಬೆಳೆಯಬೇಕೆಂದು ಗುರಿಯಿಟ್ಟುಕೊಳ್ಳಲಾಗಿತ್ತು. ಆದರೆ ೨ ಲಕ್ಷ ಟನ್ ಹೆಚ್ಚಿಸಬೇಕಾದರೆ ಸಾಕೋಸಾಕಾಯಿತು. ೧೯೪೮-೪೯ಕ್ಕೆ ೧೨॥ ಲಕ್ಷ ಟನ್ ಹೆಚ್ಚಿಗೆ ಬೆಳೆಯಬೇಕೆಂದು ಸರಕಾರ ನಿರ್ಧರಿಸಿತ್ತು. ಆದರೆ ಈ ವರೆಗಿನ ವರದಿಗಳಿಂದ ಈ ಗುರಿಯ ಕಾಲು ಭಾಗ ಕೂಡ ಈಡೇರುವದೆಂದು ಹೇಳಬರುವದಿಲ್ಲ. ಭತ್ತದ ಬೆಳೆಯಂತೂ ಹಿಂದಿನ ವರ್ಷಕ್ಕಿಂತ ಕಡಿಮೆಯೇ ಆಗುವದು. ಇದಕ್ಕೆ ಮಳೆಗಾಳಿಗಳ ಅಪ್ರಸನ್ನತೆಯೊ ಕಾರಣವಾಗಿರಬಹುದು. ಆದರೂ ಈ ಎರಡು ವರ್ಷಗಳಲ್ಲಿ ಆಹಾರೋತ್ಪಾದನೆಯನ್ನು ಹೇಳಿಕೊಳ್ಳುವಷ್ಟು ಹೆಚ್ಚಿಸಲು ನಮ್ಮಿಂದಾಗಿಲ್ಲವೆಂದು ಸಿದ್ಧವಾಗಿದೆ. ಸ್ಥಿತಿಗತಿ ಹೀಗೆಯೆ ಉಳಿದರೆ ಆ ಅಂತರ್‌ರಾಷ್ಟ್ರೀಯ ಆಹಾರ ತಜ್ಞರಾದ ಮಿ. ಡಾಡರು ಹೇಳಿದಂತೆ ಇನ್ನು ಹತ್ತು ವರ್ಷಗಳ ನಂತರವೂ ಭಾರತವು ವರ್ಷ ವರ್ಷವೂ ೧೦—೧೫ ಲಕ್ಷ ಟನ್ ಆಹಾರವನ್ನು ಆಯಾತಮಾಡಿಕೊಳ್ಳುತ್ತಲೇ ಹೋಗಬೇಕಾಗುವದು.

ಹಳ್ಳಿಗಳ ಮೇಲೆ ಅಶ್ರದ್ಧೆ

ನೂರಕ್ಕೆ ೧೩ ರಷ್ಟು ಜನರು ಮಾತ್ರ ಒಕ್ಕಲಿಗರಾಗಿರುವ ಅಮೇರಿಕೆಯಲ್ಲಿ ದೇಶಕ್ಕೆ ಬೇಕಾದಷ್ಟು ಆಹಾರ ಬೆಳೆದು ಹೊರಗೂ ಕಳಿಸಲು ಸಾಧ್ಯವಾಗುತ್ತಿದೆ. ಆದರೆ ಬಹುಸಂಖ್ಯರು ಒಕ್ಕಲಿಗರಾಗಿರುವ ಈ ದೇಶದ ಗತಿ ಹೀಗಾಗಲು ಬ್ರಿಟಿಶರು ತಮ್ಮ ಆಳಿಕೆಯಲ್ಲಿ ಹಳ್ಳಿಗಳನ್ನು ಪೂರ್ತಿಯಾಗಿ ಕಡೆಗಣಿಸಿದ್ದೇ ಕಾರಣ. ಹಳ್ಳಿಗಳ ಸಮಷ್ಟಿಜೀವನವನ್ನು ಅವರು ಕಿತ್ತುಕೆಡವಿರುವದರಿಂದ ಹಳ್ಳಿಗರನ್ನು ಸಂಘಟಿಸಿ ಯೋಗ್ಯ ಮಾರ್ಗದರ್ಶನ ಮಾಡಿಸುವದು ಅಸಾಧ್ಯಪ್ರಾಯವಾಗಿಬಿಟ್ಟಿದೆ. ಅಂದು ಹಳ್ಳಿಗಳ ಸ್ಫೂರ್ತಿಯನ್ನು ಹಾಳುಗೆಡಹಿದುದೇ ಇಂದು ಸರಕಾರದ ಸುದುದ್ದೇಶಗಳು ಹಳ್ಳಿಗಾಡಿನ ಪ್ರಗತಿಯಲ್ಲಿ ರೂಪುಗೊಳ್ಳದಿರಲು ಕಾರಣವಾಗಿದೆ.

ಒಕ್ಕಲತನದ ಸಮಸ್ಯೆಗಳನ್ನು ಬಿಡಿಸುವಾಗ ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳಲ್ಲಿ ಸ್ಪಷ್ಟವಾಗಿ ಭೇದವನ್ನು ಮಾಡತಕ್ಕದ್ದು. ದೀರ್ಘಾವಧಿ ಯೋಜನೆಗಳು ಎಷ್ಟೇ ರಮ್ಯವಾಗಿ ಕಂಡರೂ ಅವುಗಳಲ್ಲಿ ತುಂಬಾ ಹಣ ತೊಡಗಿಸಿಡುವದು ಸೂಕ್ತವಾಗಲಾರದು. ಸ್ಥಾನಿಕ ಆಹಾರೋತ್ಪಾದನ ಸಾಮರ್ಥ್ಯವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ಅಲ್ಪಾವಧಿ ಯೋಜನೆಗಳನ್ನು ರಭಸದಿಂದ ಸಾಗಿಸಬೇಕು. ಕೇಂದ್ರ ಸರಕಾರವೇ ಆಹಾರ ಯೋಜನೆಯ ಮೇಲ್ವಿಚಾರಣೆ ನಡೆಸಬೇಕಾದ್ದು ವಿಹಿತವಾಗಿದ್ದರೂ ಕೇಂದ್ರೀಯ ಆಡಳಿತೆಯಿಂದ ಆಹಾರ ವಿಷಯದಲ್ಲಿ ಪ್ರಾಂತಗಳ ಸ್ವಾವಲಂಬನಬುದ್ಧಿ ಸಡಿಲಾಗಿಬಿಟ್ಟಿದೆ. ತಮಗೆ ಅಷ್ಟು ಧಾನ್ಯಬೇಕು, ಇಷ್ಟು ಬೇಕೆಂದು ಕೇಂದ್ರಕ್ಕೆ ಪ್ರಾಂತಿಕ ಸರಕಾರಗಳು ಬೇಡಿಕೆಗಳನ್ನು ಕಳಿಸುವದೇನೋ ಸರಿ. ಆದರೆ ಎಕರೆಗೆ ಜಪಾನದಲ್ಲಿ ೩೦೦೦ ಪೌಂಡು, ಚೀನದಲ್ಲಿ ೨೫೦೦ ಪೌಂಡು ಭತ್ತ ಬೆಳೆಯುವಾಗ ಇಲ್ಲೇಕೆ ಬರಿ ೮೦೦ ಪೌಂಡು ಬೆಳೆಯಬೇಕೆಂದು ಪ್ರಾಂತಿಕ ಸರಕಾರಗಳು ಎಂದಾದರೂ ತಮ್ಮನ್ನೇ ಕೇಳಿಕೊಂಡಿವೆಯೆ?

ಹಳ್ಳಿಗಾಡುಗಳನ್ನು ಕಡೆಗಣಿಸಿದ್ದೇ ನಮ್ಮ ಎಲ್ಲ ತೊಂದರೆಗಳ ಮೂಲ. ಹಳ್ಳಿಗಳಲ್ಲಿ ಜೀವ ತುಂಬಿ ಸುಸಂಘಟಿತವಾಗಿ ಮಾಡುವದೇ ನಮ್ಮ ಮೊಟ್ಟಮೊದಲ ಕೆಲಸವಾಗಬೇಕು. ಚೀನ ಜಪಾನಗಳಲ್ಲಿ ಸಾಧ್ಯವಾದುದು ಇಲ್ಲಿಯೂ ಹೆಚ್ಚುಕಡಿಮೆ ಸಾಧ್ಯವಾಗಲೇಬೇಕು. ಧ್ಯೇಯಗಳೂ ಸಿದ್ಧಾಂತಗಳೂ ಕೇಳಲು ಎಷ್ಟೇ ರಮ್ಯವಾಗಿದ್ದರೂ ಅವನ್ನು ಅನುಸರಿಸುವಲ್ಲಿ ನಾವು ದುಡುಕಿದರೆ ಕೆಲಸ ಕೆಟ್ಟೀತು. ದುಡುಕಿನ ಪರಿಣಾಮವಾಗಿ ಹಳ್ಳಿಗಾಡಿನಲ್ಲಿ ಆರ್ಥಿಕ ಸುರಕ್ಷಿತತೆಯ ಭಾವನೆ ಅಳಿದು ಹೋಗಬಹುದು. ಆದುದರಿಂದ ಇದ್ದ ಸ್ಥಿತಿಗತಿಯಲ್ಲಿ ವಿವಿಧ ಹಿತಸಂಬಂಧಗಳೊಳಗೆ ಆದಷ್ಟು ಮಟ್ಟಿಗೆ ಸಾಮರಸ್ಯವನ್ನು ತಂದು, ಎಲ್ಲರಿಗೂ ಒಪ್ಪಿಗೆಯಾದ ಅಂಶಗಳ ಮೇಲೆ ಕಾರ್ಯಮಾಡಿ ಭೂಮಿಯ ಹುಟ್ಟುವಳಿಯನ್ನು ಹೆಚ್ಚಿಸಬೇಕು. ಜಮೀನುದಾರಿಯ ನಿರ್ಮೂಲನದಲ್ಲಿಯೆ ಆಗಲಿ ಸಾಗುವಳಿಯ ಕಾಯದೆಯಲ್ಲಿಯೆ ಆಗಲಿ ಅದರಿಂದಾಗುವ ದೂರ ಭವಿಷ್ಯತ್ತಿನ ಪರಿಣಾಮದ ಮೇಲೆ ಕಣ್ಣಿಟ್ಟು ಅದ್ಯತನ ಭವಿಷ್ಯತ್ತಿನಲ್ಲಿ ಉತ್ಪಾದನೆಯ ಮೇಲೆ ಆಗಬಹುದಾದ ದುಷ್ಪರಿಣಾಮವನ್ನು ಕಡೆಗಣಿಸುವ ಪ್ರವೃತ್ತಿಯನ್ನು ನಾವು ಸದ್ಯಕ್ಕಾದರೂ ಹತ್ತಿಕ್ಕಿಕೊಳ್ಳಬೇಕು. ಕೃಷಿವಿಜ್ಞಾನ ಶಾಲೆಗಳಲ್ಲಿ ಮಾಡಿದ ಪ್ರಯೋಗಗಳ ಫಲಿತಾಂಶವನ್ನು ವಿಶಾಲ ಪ್ರಮಾಣದಲ್ಲಿ ಆಚರಣೆಗೆ ತರುವದೂ ಅವಶ್ಯವಾಗಿದೆ.

ಪಡಬಿದ್ದ ಕೃಷಿಯೋಗ್ಯ ಭೂಮಿಗಳನ್ನು ಸಾಗು ಮಾಡುವ ದೊಡ್ಡ ಯೋಜನೆಗಳನ್ನು ಸರಕಾರ ಪ್ರಾರಂಭಿಸಿದೆ. ಲಕ್ಷಗಟ್ಟಳೆ ಎಕರೆ ಭೂಮಿ ಹೀಗೆ ಕೃಷಿಗೆ ಅಣಿಗೊಳಿಸಲ್ಪಡುತಿದ್ದರೆ ಇತ್ತ ಕೃಷಿಭೂಮಿಗಳು ಹೊಸತಾಗಿ ಪಡಬೀಳುತ್ತಿರುವ ಸುದ್ದಿಗಳೂ ಬರುತ್ತಿವೆ. ಮಧ್ಯಪ್ರಾಂತ-ವರ್‍ಹಾಡದಲ್ಲೆ ಈಗ ೫-೬ ವರ್ಷಗಳಿಂದ ೨ ಲಕ್ಷ ಎಕರೆ ಭೂಮಿ ಪಡಬಿದ್ದಿದೆಯಂತೆ. ಸರಕಾರದ ಯೋಜನೆಗಳು ಹೇಗೆ ಸೋರಿ ಹೋಗುತಿವೆಯೆಂಬದಕ್ಕೆ ಇದೊಂದು ನಿದರ್ಶನ. ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ನಮ್ಮ ಕಣ್ಣುಗಳು ಎಲ್ಲ ಕಡೆಗಳಲ್ಲೂ ಹರಿಯಬೇಕು.

-೧೦ನೆಯ ಪುಟಕ್ಕೆ

ಮೂಲೆ ಮೂಲೆಗಳಿಂದ

ಹಿಂದ-ಪಾಕ-ಯುರೋಪು ನೌಕಾ ಮಾರ್ಗದಲ್ಲಿಯ ತಿಕೀಟಿನ ಜಗಳವನ್ನು ತೀರ್ಮಾನಿಸಲು ಲಂಡನ್ನಿನಲ್ಲಿ ಬ್ರಿಟಿಶ್, ಭಾರತೀಯ ಮತ್ತು ಯುರೋಪ್ಯ ನೌಕಾ ಕಂಪನಿಗಳ ಪ್ರತಿನಿಧಿಗಳು ಚರ್ಚೆ ನಡೆಸಿ ಒಪ್ಪಂದ ಮಾಡಿಕೊಂಡರು. ಸಭೆಗೆ ಡಚ್ಚರ ಪ್ರಾತಿನಿಧ್ಯವಿಲ್ಲ. ಸಿಂಧ್ಯ ನೌಕಾ ಕಂಪನಿಯ ವ್ಯವಸ್ಥಾಪಕರಾದ ಎಂ. ಎ. ಮಾಸ್ತರರು ಭಾರತಕ್ಕೆ ಯೋಗ್ಯ ಭಾಗ ದೊರಕುವಂತೆ ಪ್ರಯತ್ನಿಸಿರುವುದಾಗಿ ಹೇಳಿದರು.

ಫ್ಲಶಿಂಗಮೆಡೋಸಿನಲ್ಲಿ ಕೂಡಿದ ಸಂ. ರಾ. ಸಂಘವು ೧೪ ಜನರ ಒಂದು ಸಮಿತಿಯನ್ನು ಸ್ಥಾಪಿಸಿ ಅದಕ್ಕೆ ಸಂ. ರಾ. ಸಂಘದ ಸಂರಕ್ಷಕ ದಳವನ್ನು ರಚಿಸಲು ಆಜ್ಞೆಮಾಡಿದೆ. ಈ ಮೊದಲು ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿ ಟ್ರಿಗ್ವೀವ್ ಲೈ ಹೀಗೆ ಸಲಹೆ ಮಾಡಿದ್ದರು. ಅದನ್ನೀಗ ಇಡೀ ಸಭೆ ಸ್ವೀಕರಿಸಿ ಮೊದಲಿನಂತೆ ವಿಧಿಸಿದೆ.

ಸ. ರಾ. ಸಂಘಕ್ಕೆ ಸೇರಲು ಇಸ್ರೇಲ್ ಮಾಡಿಕೊಂಡ ಅರ್ಜಿಯನ್ನು ವಿಚಾರಿಸಲು ಅನುಕೂಲ ಮತಗಳು ಬಹಳ ಬಿದ್ದುದರಿಂದ ಇನ್ನು ಒಂದೆರಡುವಾರಗಳಲ್ಲಿ ಅದನ್ನು ಸಭೆ ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ. ಅದೇ ಮೇರೆಗೆ ಇಂಡೋನೇಶಿಯದ ಪ್ರಶ್ನೆಗೆ ಸಂಬಂಧಿಸಿದ ಅಹವಾಲುಗಳನ್ನು ವಿಶೇಷ ರಾಜಕೀಯ ಸಮಿತಿ ಕೇಳಬೇಕೆಂದೂ ಸಭೆ ತೀರ್ಮಾನಿಸಿತು.

ಈಗ ಒಂದುತಿಂಗಳಿಂದ ವಿಚಾರವಿನಿಮಯ ಮಾಡುತ್ತಿದ್ದ **ಡಚ್ ಮತ್ತು ಇಂಡೋನೇಶಿಯ ಪ್ರಜಾರಾಜ್ಯದ** ಪ್ರತಿನಿಧಿಗಳು ಒಂದು ಒಪ್ಪಂದದ ಹಂತವನ್ನು ಮುಟ್ಟಿದ್ದಾರೆ. ಅದು ಭದ್ರತಾಮಂಡಲ ಮಾರ್ಚ್ ೨೩ ರಲ್ಲಿ ಕೊಟ್ಟ ಆದೇಶವನ್ನು ಅವಲಂಬಿಸಿದೆ. ಅದರ ಪ್ರಕಾರ ಜೋಗ್ ಜಕಾರ್ತದಲ್ಲಿ ಪ್ರಜಾರಾಜ್ಯದ ಸರಕಾರ ಆಳುವುದಕ್ಕೆ ಡಚ್ಚರು ಮನ್ನಣೆ ಕೊಡಬೇಕು, ಅದಕ್ಕೆ ಅವರು ಆ ಪ್ರದೇಶವನ್ನು ತಿರುಗಿ ಬಿಟ್ಟುಕೊಡಬೇಕು ಮತ್ತು ಸ್ವತಂತ್ರ ಇಂಡೋನೇಶಿಯ ರಾಜ್ಯ ಮಂಡಲವನ್ನು ನಿರ್ಮಿಸುವ ಗುರಿಯಿಂದ ಹೇಗಿನಲ್ಲಿ ಒಂದು ದುಂಡುಮೇಜಿನ ಪರಿಷತ್ತನ್ನು ಕೂಡಿಸಬೇಕು. ಡಚ್ಚರೀಗ ಮೇಲಿನ ಶರ್ತುಗಳಿಗೆ ಒಪ್ಪಿದ್ದಾರೆಂದು ತಿಳಿಯುತ್ತದೆ.

ಇಂಡೊಚೀನದ ವಿಯಟ್ ಮಿನ್ ದಲದವರು ಇತ್ತೀಚೆಗೆ ಬೊಂಕೆ ಮತ್ತು ಫಟಕೆಗಳ ಸಮೀಪ ಒಂದು ಫ್ರೆಂಚ್ ಯುದ್ಧ [illegible] ಮೇಲೆ ದಾಳಿ ಮಾಡಿದರು. [illegible] ಒಂದು ಯುದ್ಧವೇ ನಡೆದು [illegible] ವಿಯಟ್ ಮಿನ್ನರು ಸರಕಾರೀ ಅಧಿಕಾರಿಗಳ [illegible] ಹಾಳ್ಗೆಡಹಿ, ಹಣ ಕಾಸು ಅಧೀನ [illegible] ವನ್ನು [illegible] ಓಡಿಹೋದ[illegible] ಘರ್ಷಣದಲ್ಲಿ ಇಬ್ಬರು ಫ್ರೆಂಚರೂ [illegible] ವಿಯಟ್ ಮಿನ್ನರೂ ಮಡಿದರು.

ಇಸ್ರೇಲಿಗಳು ರಶಿಯದ ಯುದ್ಧ[illegible] ಮತ್ತು ಅಮೇರಿಕ ಕೊಟ್ಟ ಸಾಲದ ಬಲದಿಂ[illegible] ಪಾಲಿಸ್ತಾನದ ಕೇಂದ್ರದಿಂದ ಉತ್ತರಕ್ಕೆ [illegible] ಸೈನ್ಯದ ಸಾಲುಗಳನ್ನು ವೃದ್ಧಿಗೊಳಿಸುತ್ತಿ[illegible] ಕಾರಣದಿಂದ ಅರಬ ರಾಷ್ಟ್ರಗಳೆಲ್ಲ [illegible] ಸಿದ್ಧತೆ ನಡೆಸಬೇಕೆಂದು ಇಜಿಪ್ತದ ಪತ್ರಿಕೆಗ[illegible] ಎಚ್ಚರಿಸಿವೆ.

ಪಾಲಿಸ್ತಾನಿನ ಧರ್ಮಪರೀಕ್ಷ[illegible] ಬ್ರಿಟನ್ನು ವಹಿಸಿದ್ದಾಗ ಇದ್ದ ಗಡಿಗೆ [illegible] ಯಲು ಸಿರಿಯ ನಿರಾಕರಿಸಿದೆ ಎಂದು [illegible] ಯುತ್ತದೆ.

ಶಾಂಘಾಯಿಯಲ್ಲೀಗ ಘೋರ [illegible] ನಡೆದಿದೆ. ನಗರದ ೧೫೦ ಮೈಲುಗಳ [illegible] ವಲಯದಲ್ಲಿ ಕಮ್ಯುನಿಸ್ಟರು ಸರಕಾರೀ [illegible] ಗಳ ರಕ್ಷಣಾವ್ಯೂಹವನ್ನು ಒಡೆದೆ[illegible] ಸಿದರು. ಕೈಚಾಂಗ್ ಮತ್ತು ಕುನ್[illegible] ಗಳನ್ನು ಮಾತ್ರ ಸರಕಾರೀ ದಳಗ[illegible] ಭದ್ರವಾಗಿ ಕಾದುಕೊಂಡಿವೆ. ನಾಗರಿಕ[illegible] ನಗರದಿಂದ ಹೊರಹೊರಡುವುದು [illegible] ಸಾಗಿದೆ. ಸದ್ಯದ ಕಾಳಗದಲ್ಲಿ ಸಾವಿರಾ[illegible] ಕಮ್ಯುನಿಸ್ಟರು ಸತ್ತರು. ಕಮ್ಯುನಿಸ್ಟ[illegible] ವಾದ ಚಟುವಟಿಕೆಗಳನ್ನು ಮಾಡಿದ ಆ[illegible] ಪದ ಮೇಲೆ ೩೦ ಚೀನೀಯರನ್ನು ಸರಕಾ[illegible] ಸಾರ್ವಜನಿಕವಾಗಿ ಗಲ್ಲಿಗೇರಿಸಿತು. ಹಾ[illegible] ಕಾಂಗಿನಲ್ಲಿಯ ೩೫೦ ಚದುರ ಮೈಲಿನ ತ[illegible] ಪ್ರದೇಶವನ್ನು ರಕ್ಷಿಸಿಕೊಳ್ಳಲು ಬ್ರಿಟ[illegible] ಹೆಚ್ಚಿನ ಯುದ್ಧ ಸಹಾಯವನ್ನು ಅಲ್ಲಿ[illegible] ತಮ್ಮ ಅಧಿಕಾರಿಗೆ ಕಳಿಸಿದ್ದಾರೆ.

ಪೂರ್ವಪಾಲಿಸ್ತಾನದ ಕೆಲಭಾಗಗಳ[illegible] ಟ್ರಾನ್ಸ್‌ಜೋರ್ಡನ್ನು ಆಕ್ರಮಿಸಿದೆ. ಅಲ್ಲಿ[illegible] ಅರಬರಿಗೆ ವಿಶ್ವಾಸ ಹುಟ್ಟಿಸುವುದರ [illegible] ವಾಗಿ ಹೊಸ ಮಂತ್ರಿಮಂಡಲದಲ್ಲಿ ೩ [illegible] ಸ್ಥಾನೀ ಅರಬ ಪ್ರತಿನಿಧಿಗಳನ್ನು ಸೇ[illegible] ಕೊಂಡು ಅವರಲ್ಲಿ ಒಬ್ಬನಾದರು[illegible] ಅಬುಲ್ಲ ಹಾದಿಗೆ ವಿದೇಶ ಖಾತೆಯ[illegible] ಒಪ್ಪಿಸಲಾಗಿದೆ.

-೧೦ನೆಯ ಪುಟಕ್ಕೆ

ಬ್ರಿಟಿಶ ರಾಜಕುಮಾರಿ ಎಲಿಜಬೆತ ಮತ್ತು ಮಗು

...ಪರಂಗ

...ನ್ಮ ಸಿನೆಮಪ್ರದರ್ಶಕರು

... ಸಿನೆಮ ಪ್ರದರ್ಶನಗೃಹಗಳು ಧನ ... [illegible] ... ಕೃತಿಗಳನ್ನು ಪ್ರದರ್ಶಿಸು ... ಇದು ಒಂದು ಬಗೆಯ ... [illegible] ... ಪ್ರದರ್ಶಕರು ಅಥವಾ "ಸಿನೆಮ ... ಸೌಂದರ್ಯೋಪಾಸಕ ಜನತೆ ... ತೆಗೆದುಕೊಂಡು ಅದರಿಗೆ ... [illegible] ... ಗಳನ್ನು ಒದಗಿಸದೆ ... ಒಂದು ಬಗೆಯ ಸುಲಿಗೆಯು ... ನಾಗಿಬಿಟ್ಟಿದೆ.

... [illegible] ... ರಸಿಕರಂಗೆ ... ಎಂಥ ಸಿನೆಮ ಬಂದರೂ ಅದನ್ನು ... ಆನಂದದಿಂದಲಿರಬೇಕೆಂದು ... ಪ್ರತಿಯಾಗಿ, ಸರಿಯಾದ ... ಈ ಪ್ರದರ್ಶಕರು ಕೊಟ್ಟ ... ಬಹುದು. ಅದರೂ ... [illegible] ... ಜನರ ... [illegible] ... ಧೀಮಂತರಿಗೆ ... [illegible]

... [illegible] ... ಹಲವರ [ವ್ಯಾಪಾರದೃಷ್ಟಿ ... ಒಂದೆರಡು ... ಕೆಳಗಿದೆ. ... ಯುದ್ಧಕಾಲದಿಂದ ಇಂದಿನ ... [illegible] ... ಪಟೇಲರ ... [illegible] ... ವಿದ್ಯುಚ್ಛಕ್ತಿಗೆ ಹೆಚ್ಚಿಗೆ ಹಣ ... ಜನಪ್ರಿಯ ಚಿತ್ರ ... ಪ್ರವೇಶ ... ಮತ್ತು ಅವು ... ಮೊದಲಿನ ದರ ... ಯೋಗ್ಯವಾದ ಆಸನಗಳ ... ಲಕ್ಷ್ಯಕೊಡದಿರುವುದು ... ದುರ್ನಯಗಳು ಪ್ರದ ... ಆಧಾರವಾಗಿವೆ.

... ಇನ್ನೂ ಒಂದು ದುರ್ವ್ಯಾಪಾರ ... ಚಿತ್ರಪರೀಕ್ಷಕರು ಅಶ್ಲೀಲ ... ತೆಗೆದುಹಾಕಿದ ಹಾಡು ... ಗ್ರಾಮೋಫೋನಿನಲ್ಲಿ ರಿಕಾರ್ಡು ಮಾಡಿ ... ಇಂಥ ಹಾಡುಗಳನ್ನು ನಮ್ಮ ... ಹೊಟೇಲುಗಳಲ್ಲಿ ... [illegible] ... ಇದಕ್ಕೆ ಕಾಯದೆಯಿಂದ ಪ್ರತಿ ... ಸಿನೆಮಗಳ ಪರೀಕ್ಷಣ ... ಮತ್ತು ... [illegible] ... ಕೊಳ್ಳಕೊಂಡು ...

... ಒಂದು ಬಗೆಯ ಪ್ರಲೋಭನವಿದೆ. ... [illegible]

ಚಿತ್ರ ವಾರ್ತೆ

ಶರತ್‌ಚಂದ್ರರ 'ಚಂದ್ರನಾಥ' ಎಂಬ ಕಾದಂಬರಿಯನ್ನು ವಸ್ತುವಾಗಿ ತೆಗೆದುಕೊಂಡು ಹೊಸ ಹೊಂದು ಚಿತ್ರವನ್ನು ತಯಾರಿಸಲು ಹೊರಟ ಪ್ರಸಿದ್ಧ ತಾರೆ ಕಾನನದೇವಿ ಕಲಕತ್ತದ ಹೈಕೋರ್ಟಿನ ತೀರ್ಪಿನಂತೆ ಶ್ರೀ. ಶಂಭುನಾಥ ಬ್ಯಾನರ್ಜಿಗೆ ಹಕ್ಕಿನ ಪ್ರಯುಕ್ತ ದಂಡ ತೆರಬೇಕಾಯಿತು. ಏಕೆಂದರೆ, ಮೂಲತಃ ಶ್ರೀ. ಬಿ. ಎನ್. ಸರಕಾರರು ಅದರ ಹಕ್ಕನ್ನು ಪಡೆದಿದ್ದು, ಬಳಿಕ ಅವರು ಅದನ್ನು ಶ್ರೀ ಶಂಭುನಾಥರಿಗೆ ಬಿಟ್ಟುಕೊಟ್ಟಿದ್ದರಂತೆ.

× × ×

ಹಾಲಿವುಡ್ಡಿನ ತಾರೆ ಜಯನಾಲಿಸ್ ಎಂಬಾಕೆ ಲಾಸ್ ಏಂಜಲೀಸಿನ ಒಬ್ಬ ಶ್ರೀಮಂತ ಶಿಲ್ಪಜ್ಞನನ್ನು ಮದುವೆಯಾದಳು. ಮದುವೆಯಾದ ಕೂಡಲೆ ಮನೆ ಮಾಡಬೇಕಾಗಿದ್ದುದರಿಂದ ಬಹುಶಃ ಶಿಲ್ಪಿಯನ್ನೇ ಆರಿಸಿ ಆಕೆ ಮದುವೆಯಾಗಿರಬಹುದೆಂದು ಕೆಲವರ ತರ್ಕ!

× × ×

ಬಾರ್ಬರಾ ಫೋರ್ಡ್ ಎಂಬ ಹಾಲಿವುಡ್ಡಿನ ನಟಿ ತನ್ನ ಗಂಡ ನಟವರ ರಾಬರ್ಟ್ ವಾಕರನೊಡನೆ ವಿವಾಹ ವಿಚ್ಛೇದ ಮಾಡಿಕೊಂಡಳು. ಹಾಗೆ ಮಾಡಿಕೊಳ್ಳಲು, ಮದುವೆಯಾದ ಐದೇ ವಾರಗಳಲ್ಲಿ ಅವನು ಅವಳನ್ನು ತವರುಮನೆಗೆ ಕಳಿಸಿದ್ದೇ ಕಾರಣವಂತೆ!

× × ×

ಹಾಲಿವುಡ್ಡಿನ ಚಿತ್ರವಿದ್ಯಾನಿಲಯದವರಿಂದ ಇಂಗ್ಲಂಡಿನ ಸರ್ ಲಾರೆನ್ಸ್ ಒಲಿವಿಯರ್ ಮತ್ತು ಶ್ರೀಮತಿ ಜೇನ್‌ವೈಮನ್ ಇವರು ಈ ವರ್ಷದ ಅತ್ಯುತ್ತಮ ತಾರೆಯರೆಂದು ಗಣಿಸಲ್ಪಟ್ಟು ಬಹುಮಾನಿತರಾಗಿದ್ದಾರೆ. ಒಲಿವಿಯರ್ "ಹ್ಯಾಮ್ಲೆಟ್"ನಲ್ಲಿಯೂ ವೈಮನ್ನಳು "ಜಾನಿ ಬೆಲ್ಲಿಂಡಿಯಾ"ದಲ್ಲೂ ಪಾತ್ರವಹಿಸಿದ್ದರು. ವರ್ಷದ ಅತ್ಯುತ್ತಮ ಚಿತ್ರ ಎಂಬ ಬಿರುದು "ಹ್ಯಾಮ್ಲೆಟ್"ಗೇ ದೊರಕಿತು. ಒಲಿವಿಯರರೇ ಅದರ ನಿರ್ಮಾತರು.

× × ×

"ಮಣ್ಣಿನ ಮಕ್ಕಳು" ಎಂಬ ಭಾರತೀಯ ಚಿತ್ರವನ್ನು ರಶಿಯಕ್ಕೆ ಕಳಿಸಲಾಯಿತು. ಅಲ್ಲಿ ಅದನ್ನು ಪ್ರದರ್ಶಿಸಿದಾಗ ಅದನ್ನು ಕಂಡ ಅಧಿಕಾರಿಗಳು ಅದರಲ್ಲಿ ಬರುವ ರೈತನ ಗೋಳನ್ನು ನೋಡಿ "ಭಾರತದ ಒಕ್ಕಲಿಗನ ಜೀವನ ಕಷ್ಟಕರವೂ ನಿರಾಶಾಮಯವೂ ಆಗಿದೆ" ಎಂದು ಉದ್ಗರಿಸಿದರಂತೆ. ಇದರಿಂದ ಕಮ್ಯುನಿಜಮ್ಮಿನ ಪ್ರಸಾರಕ್ಕೆ ಭಾರತ ಒಳ್ಳೆಯ ಸ್ಥಳ ಎಂದು ಅವರಿಗೆ ತೋರುವಂತಾಯಿತೆಂದು ಕೆಲವರ ಊಹೆ.

ಕೀರ್ತಿ, ಧನ ಮತ್ತು ಸಿನೆಮಸುವಾಸಿನಿಯರ ಸಹವಾಸವನ್ನು ಸಂಪಾದಿಸಲು ಅನುಕೂಲ ಕಲ್ಪಿಸಿಕೊಡುವದಾಗಿ ಹೇಳಿ ಅದಕ್ಕೆ ಕೆಲ ರೂಪಾಯಿಗಳ ರಿಜಿಸ್ಟ್ರೇಶನ್ ಫೀ ಎಂದು ಜಾಹೀರು ಮಾಡಿ ಆ ಪ್ರಕಾರ ಅಜ್ಞಾನಸುಂದರರಿಂದ ಹಣ ಸುಲಿಯುವುದು ಈಗ ನಡೆಯುತ್ತಿದೆಯೆಂದು ತಿಳಿದುಬಂದಿದೆ. ಇಂಥ ದುರಭ್ಯಾಸಗಳನ್ನು ನಿಲ್ಲಿಸಲು ಸರಕಾರ ತಕ್ಕ ಕ್ರಮ ಕೈಕೊಳ್ಳದಿದ್ದರೆ ಪರಿಸ್ಥಿತಿ ದುರ್ನಿವಾರ್ಯ ಮಟ್ಟಕ್ಕೆ ಮುಟ್ಟಬಹುದು.

— ಸಿನೆಮಾಭಕ್ತ



ಬಾಲ ಪೋಲೀಸರು— ಲಂಡನ್ ರಸ್ತೆಯ ಮೇಲೆ ಮಕ್ಕಳಿಗೊದಗುವ ಅಪಘಾತಗಳನ್ನು ತಡೆಯಲು [ಈ ಹುಡುಗರು ಮಕ್ಕಳ ಸಂಚರಿಸುವ ಸ್ಥಳಗಳಲ್ಲಿ ಹೀಗೆ ಕಾವಲುಕೊಡುತ್ತಾರೆ.

ವಿಶೇಷ ಲೇಖ

ಭಾರತದ ಆರ್ಥಿಕ ಪುನರು...

ಕನಸು ಕಾಣುವದರಿಂದ ಫಲವಿಲ್ಲ— ಒಕ್ಕಲತನದ ಪ್ರ...

ನಮ್ಮ ರಾಷ್ಟ್ರೀಯ ಉತ್ಪನ್ನದ ಸರಿಯಾದ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಲು ಕೇಂದ್ರ ಸರಕಾರದ ಹಣಕಾಸಿನ ಶಾಖೆಯವರು ಬೇಗನೆ ಕ್ರಮಗಳನ್ನು ಕೈಕೊಳ್ಳುವರೆಂದು ಕೇಳಬರುತ್ತದೆ. ಆದರೆ ಈ ದೇಶದ ದಾರಿದ್ರ್ಯದ ಪರಮಾವಧಿಯನ್ನು ತೋರಿಸಿಕೊಡಲು ಬೇರೆ ಬೇರೆ ಬೆಳೆಗಳನ್ನು ಬೆಳೆಯುವ ಸಾಗುವಳಿ ಭೂಮಿ, ದನಕರುಗಳ ಸಂಖ್ಯೆ, ಅವುಗಳು ಕೊಡುವ ಹೈನ, ಅಡವಿಗಳಿಂದಲೂ ಗಣಿಗಳಿಂದಲೂ ದೊರಕುವ ಉತ್ಪನ್ನ, ವಿವಿಧ ವರ್ಗಗಳ ಆದಾಯ ಮೊದಲಾದ ಅಂಶಗಳನ್ನು ಜಾಗರೂಕತೆಯಿಂದ ಲೆಕ್ಕ ಮಾಡಬೇಕಾಗುವದಿಲ್ಲ. ಅದು ಕೆಲವೇ ಅಂಶಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ.

ಭಾರತ-ಬ್ರಿಟನ್

ಉದಾಹರಣೆಗಾಗಿ, ಬ್ರಿಟನ್ನು ಒಕ್ಕಲತನದ ರಾಷ್ಟ್ರವಲ್ಲ, ಔದ್ಯಮಿಕ ರಾಷ್ಟ್ರ. ಆದರೂ ೧೯೪೫ ರಿಂದ ೧೯೪೯ ರ ಅವಧಿಯೊಳಗೆ ಅದು ಹೊರಗಿಂದ ತರಿಸುವ ಆಹಾರ ವಸ್ತುಗಳ ಪ್ರಮಾಣವನ್ನು ಕ್ರಮಶಃ ತಗ್ಗಿಸುತ್ತ ಬಂದು ದೇಶದಲ್ಲೇ ಆಹಾರವನ್ನು ಹೆಚ್ಚಾಗಿ ಬೆಳೆಯುತ್ತಿದೆ. ಆದರೆ ನೂರಕ್ಕೆ ೭೦ ರಷ್ಟು ಜನರು ಹೊಲಗಳಲ್ಲಿ ದುಡಿಯುತಿರುವ ಭಾರತದಲ್ಲಿ ನಾವು ಕಾಣುತಿರುವುದೇನು? ೧೯೪೬ ರಲ್ಲಿ ೧೫ ಲಕ್ಷ, ೧೯೪೭ ರಲ್ಲಿ ೨೦ ಲಕ್ಷ, ೧೯೪೮ ರಲ್ಲಿ ೩೦ ಲಕ್ಷ ಟನ್ ಆಹಾರವನ್ನು ನಾವು ಆಯಾತ ಮಾಡಿಕೊಂಡೆವು. ೧೯೪೯ ರಲ್ಲಿ ೪೫ ಲಕ್ಷ ಟನ್ ಆಹಾರವನ್ನು ೨೦೦ ಕೋಟಿ ರೂಪಾಯಿಯ ಅಗಾಧ ವೆಚ್ಚದಿಂದ ತರಿಸುವವರಿದ್ದೇವೆ.

ಇದು ನಮ್ಮ ಆರ್ಥಿಕ ವ್ಯವಸ್ಥೆಯನ್ನು ನಡೆಸಿದವರ ಶುದ್ಧ ಆಯೋಗ್ಯತೆಯನ್ನು ತೋರಿಸುತ್ತದೆ. ಹಾಲು, ಮೀನು, ಬಟಾಟಿ, ಕಾಯಿಪಲ್ಲೆ ಮತ್ತು ಧಾನ್ಯಜನ್ಯ ಪದಾರ್ಥಗಳ ತಲಾ ಉಪಯೋಗದ ಪ್ರಮಾಣ ಬ್ರಿಟನ್ನಿನಲ್ಲಿ ೧೯೪೮—೪೯ ರಲ್ಲಿ ಯುದ್ಧ ಪೂರ್ವಕ್ಕಿಂತ ಹೆಚ್ಚಾಗಿದ್ದು ಉಳಿದ ಆಹಾರ ವಸ್ತುಗಳ ಬಳಕೆ ಹೆಚ್ಚು ಕಡಿಮೆ ಮೊದಲಿನಷ್ಟೇ ಇದೆ. ಇದು ಬ್ರಿಟಶರ ಕಾರ್ಯಕ್ಷಮತೆಗೆ ನಿದರ್ಶನವಾಗಿದೆ. ಹಾಲನ್ನಂತೂ ಬ್ರಿಟಿಶರು ಇಂದು ಯುದ್ಧ ಪೂರ್ವಕ್ಕಿಂತ ಒಂದೂವರೆ ಪಟ್ಟು ಬಳಸುತಿದ್ದಾರೆ. ಆದರೆ ಆಹಾರ ಹೆಚ್ಚು ಬೆಳೆಯುವದಕ್ಕಾಗಿ ೩೦ ಕೋಟಿ ರೂಪಾಯಿಗಳನ್ನು ಸುರಿದ ಮೇಲೂ ಇಂದು ಧಾನ್ಯದ ತಲಾ ಉಪಯೋಗ ಭಾರತದಲ್ಲಿ ೧೦—೧೨ ಔನ್ಸ್ [ದಿನಕ್ಕೆ] ಇದೆ. ಯುದ್ಧ ಪೂರ್ವದಲ್ಲಿ ಇದು ಒಂದು ಪೌಂಡಿಗಿಂತಲೂ ಹೆಚ್ಚಾಗಿತ್ತು.

ಯುದ್ಧದ ಹೊಡೆತ

ಎರಡನೆ ಮಹಾಯುದ್ಧಕ್ಕಿಂತ ಮೊದಲೇ ಭಾರತದ ಆರ್ಥಿಕ ಸ್ಥಿತಿ ಸಮರ್ಪಕವಾಗಿದ್ದಿಲ್ಲ ಯುದ್ಧಕಾಲದಲ್ಲಂತೂ ಅದರ ಮೇಲೆ ಅಸಹ್ಯ ಭಾರಬಿದ್ದು ಅದರ ಮೂಳೆ ಮುರಿದು ಹೋಗಿದೆ. ಮೊದಲೇ ಈ ದೇಶದ ಅಸಂಖ್ಯ ಪ್ರಜೆಗಳಿಗೆ ಏನೂ ಸಾಲದಿದ್ದ ರಾಷ್ಟ್ರೀಯ ಉತ್ಪನ್ನ ಯುದ್ಧ ಕಾಲದಲ್ಲಿ ಇನ್ನಷ್ಟು ಸೊರಗಿಹೋಯಿತು. ಭೂಮಿ, ದುಡಿಮೆ ಮತ್ತು ಬಂಡವಳಗಳ ಸಹಯೋಗದಿಂದ ಉತ್ಪನ್ನವಾದ ವಸ್ತು ಮತ್ತು ಸೇವೆಗಳೇ ರಾಷ್ಟ್ರೀಯ ಉತ್ಪನ್ನದ ಸೆಲೆಗಳು. ಆದರೆ ಯುದ್ಧಕಾಲದಲ್ಲಿ ಕೃಷಿಭೂಮಿಗೆ ಸಾಕಷ್ಟು ಗೊಬ್ಬರ ಸಿಗಲಿಲ್ಲ, ಆಡವಿಗಳನ್ನು ಸಿಕ್ಕಾಬಟ್ಟೆ ಕಡಿದುದರಿಂದ ಮಳೆಯೂ ಸರಿಯಾಗಿ ಬರದಾಗಿದೆ, ಕೃಷಿಗೆ ಬೇಕಾದ ಸಲಕರಣೆಗಳೂ ದುರ್ಲಭವಾಗಿಬಿಟ್ಟವೆ.

ಅತ್ತ ಉದ್ದಿಮೆಯ ರಂಗದಲ್ಲಿ ಕೂಲಿಕಾರರಿಗೆ ಕೂಲಿ ಹೆಚ್ಚು ದೊರೆತರೂ ಅತಿ ಪ್ರಸರಣದ ದೆಸೆಯಿಂದ ಸರಕುಗಳು ತುಟ್ಟಿಯಾದುದರಿಂದ ಆವರ ಕೂಲಿಯ ನಿಜವಾದ ಬೆಲೆ ಕಡಿಮೆಯೆ ಆಯಿತು. ಬಂಡವಳಗಾರರಿಗೇನೋ ಧಾರಾಳವಾಗಿ ಹಣ ದೊರೆಯಿತು. ಆದರೆ ಸವೆದುಹೋದ ಯಂತ್ರಗಳೇ ಮೊದಲಾದ ಸಾಧನಗಳ ಪುನರ್ನವೀಕರಣಕ್ಕೆ ಅವಕಾಶವೇ ಇರಲಿಲ್ಲವಾಗಿ ದೇಶದಲ್ಲಿದ್ದ ನಿಜವಾದ ಬಂಡವಳವೂ ಕರಗುತ್ತಲೇ ಬಂತು.

ಭ್ರಾಂತಿವಿಲಾಸ

ಸಂಗಡಲೇ ನಮ್ಮ ಮನಸು ಕೆಲ ಭ್ರಾಂತಿಗಳಿಂದ ಮಬ್ಬಾಗಿತ್ತು. ರಾಜಕೀಯ ಸ್ವಾತಂತ್ರ್ಯಸಾಧನೆಯೇ ನಮ್ಮಲ್ಲಿ ಅತ್ಯುತ್ತಮರಾದವರ ಮನಸ್ಸನ್ನು ಆಕ್ರಮಿಸಿತ್ತು. ಆ ಸ್ವಾತಂತ್ರ್ಯ ಕೈಗೂಡಿದೊಡನೆ ಆರ್ಥಿಕ ಉದ್ಧಾರ ತಂತಾನೆ ಬರುವದೆಂಬೊಂದು ಮಸುಕಾದ ಕಲ್ಪನಾರಾಜ್ಯದಲ್ಲಿ ನಾವು ಓಲಾಡುತಿದ್ದೆವು. ವಸ್ತುಸ್ಥಿತಿಯ ನೈಜವನ್ನು ಮನಗಾಣಲು ಇದರಿಂದ ಆತಂಕವಾಯಿತು. ಸಾಲದ್ದಕ್ಕೆ ನಮಗೆ ಬ್ರಿಟನ್ನಿನಿಂದ ಬರಬೇಕಾಗಿದ್ದ ಸ್ಟರ್ಲಿಂಗ್ ಶಿಲ್ಕಿನ ಅದ್ಭುತ ಅಂಕೆಯೂ ನಮ್ಮಲ್ಲಿ ಒಂದು ಕೃತಕ ಶ್ರೀಮಂತಿಕೆಯ ಕಲ್ಪನೆಯನ್ನು ಹುಟ್ಟಿಸಿತು. ಅನೇಕರು ಅನೇಕ ವಿಧವಾದ ಕಾಗದದ ಆರ್ಥಿಕ ಯೋಜನೆಗಳನ್ನು ಈ ಸ್ಟರ್ಲಿಂಗ್ ಶಿಲ್ಕಿನ ಭರವಸೆಯಿಂದಲೇ ಪ್ರಚುರಗೊಳಿಸಿದರು.

ಇವೆಲ್ಲ ಸಂಗತಿಗಳಿಂದ, ಆರ್ಥಿಕ ಬಿಕ್ಕಟ್ಟನ್ನು ಎದುರಿಸುವದಕ್ಕಾಗಿ ನಾವೆಲ್ಲರೂ ತುಟಿಬಿಗಿದು ಉದ್ಯುಕ್ತರಾಗಬೇಕಾಗಿದ್ದಾಗ ನಮ್ಮ ಸರಕಾರಿ ವರ್ಗಗಳಲ್ಲಿ ನಮ್ಮ ಆರ್ಥಿಕ ಸುರಕ್ಷಿತತೆಯ ಭ್ರಾಮಕ ಕಲ್ಪನೆಯಿಂದ ಆಲಸ್ಯವೇ ಕಾಣಬರುತಿತ್ತು. ಇಂಗ್ಲಂಡಿನಲ್ಲಿ ಸರಕಾರ ಮೊದಲ್ಗೊಂಡು ಎಲ್ಲ ಹೊಣೆಗಾರ ವ್ಯಕ್ತಿಗಳೂ ಪರಿಸ್ಥಿತಿಯ ಗಂಭೀರತೆಯನ್ನು

ಒತ್ತಿ ಹೇಳ...
ಮನೋವೃತ್ತಿ...
ರಾದರೂ ...
ಹೋಗಿ ಸಡಿಲ...
ವಿಲ್ಲ. ಆರ್ಥಿ...
ದಿಂದ ಸರ್ವ...
ಹಾದಿಯೇ ...
ಮನದಟ್ಟಾಗಿ...

ಡ ಗು...
ಸ್ಯೆಕಲ್ಲಿನಂತಿ...
ತಿದೆ.

ಮಾತ್ರ ಆಗಿ...
ಸುದೈವದಿ...
ಸಂಸ್ಥೆಯೂ ...
ವ್ಯಕ್ತಿಗಳ ...
ವಾದನೆಲ...
ವಾಗಿವೆ.
ಆರ್ಥಿಕ ಸ್ಥಿ...
ಈ ಸಂಧಿಯ...
ತನವೂ ದೆ...
ವಸತಿಗಳನ್ನು...
ವಿಮ್ನನ ...
ಮುಂದಾಗು...

ನಮ್ಮ ...
ಕೈಕೊಳ್ಳಬೆ...
ವಾಗ, ...
ಕ್ರಮವಾಗಿ...
ಸ್ಥಿತಗೊಳಿ...
ಗಾಣಬೇಕ...
ಮೊದಲ ...
ಮಹತ್ವಾ...
ವಾಗಿಯೂ ...
ಸರ್ವಪ್ರಾ...
ಕ್ಕಿಂತ ಹೆ...
ದಲ್ಲಿ ನೂ...
ವನ್ನವಲಂ...
ತನದಲ್ಲಿ ...
ಆಹಾರಾ...
ಕೆಗೇಡಿನ ...
ಬೇಕಾಗಿ...
ಉತ್ಪಾದ...
ಕಾರ್ಯವೆಂ...
ದಿಂದ ವಿ...
ಮೂ...
ಆಹಾರ ...

ಹೊಸ ಪುಸ್ತಕಗಳು

ಮಹಾತ್ಮರ ವ್ಯಕ್ತಿತ್ವದ ಮೇಲೆ ಬೆಳಕು

"ಬಾಪೂ ದರ್ಶನ" ಎಂಬ ಒಂದು ಉಪನ್ಯಾಸ ಮತ್ತು ಕವನಗಳ ಸಂಗ್ರಹವನ್ನು ಮೈಸೂರಿನ ಆಕಾಶವಾಣಿಯವರು ಪ್ರಸಿದ್ಧಿಸಿದ್ದಾರೆ. ೧೪೩ ಪುಟಗಳ ಮತ್ತು ಒಂದೂಕಾಲು ರೂಪಾಯಿ ಬೆಲೆಯ ಈ ಪುಸ್ತಕದಲ್ಲಿಯ ಪ್ರಥಮ ಉಪನ್ಯಾಸ ಕವಿವರ್ಯ ಪುಟ್ಟಪ್ಪನವರದು. ಈ ಉಪನ್ಯಾಸದ ಸಾರವನ್ನು ಅವರ "ಬಂಕಿಮ ಚಂದ್ರಮಹಾಶಯನು ಯಾವ ಲೋಕಾಲೋಕ ಶಕ್ತಿಯನ್ನು 'ವಂದೇಮಾತರಂ' ಎಂಬ ಮಂತ್ರಗೀತೆಯಿಂದ ರಾಷ್ಟ್ರಪುರುಷನ ಹೃದಯಕ್ಕೆ ಆಹ್ವಾನಗೈದು, ರಾಷ್ಟ್ರಕುಂಡಲಿನಿ ಉನ್ಮೀಲಿತವಾಗಿ ಉನ್ಮೇಷಗೊಳ್ಳುವಂತೆ ಮಾಡಲು ಸಮರ್ಥನಾದನೋ ಆ ಚಿಚ್ಛಕ್ತಿಯ ಇಚ್ಛಾವಿನ್ಯಾಸಗಳೆ ಈ ಎಲ್ಲ ವಿಭೂತಿಗಳೋಪಾದಿಯಲ್ಲಿ ವಿಕಾಸಗೊಳ್ಳುವುದನ್ನು ಕಾಣುತ್ತದೆ ಪೂರ್ಣದೃಷ್ಟಿ" ಎಂಬ ವಾಕ್ಯ ಸಾರರೂಪವಾಗಿ ಕೊಡುತ್ತದೆ. ಈ ಪೂರ್ಣ ದೃಷ್ಟಿಗೆ ಕರ್ತೃವನ್ನು ಹುಡುಕಿದವರಿಗೆ ಈ ಉಪನ್ಯಾಸದಲ್ಲಿ ಕವಿವರ್ಯರು ಬೀರಿದ ಬೆಳಕು ಕಾಣದಿರಲಾರದು. ಆಗ ಮಾತ್ರ "ಪೂರ್ಣದೃಷ್ಟಿ ಗಾಂಧೀಜಿಗೆ" ಎಂಬ ತಲೆಬರಹದ ಅರ್ಥ ಸ್ಪಷ್ಟವಾದೀತು! ಇವರ ಒಂದೂವರೆ, ಬೃಹತ್ತು, ಶ್ರೀಮಂತಗರ್ಭಿತ ಮೊದಲಾದ ಪ್ರಯೋಗಗಳು ಶಬ್ದಶಾಸ್ತ್ರದ ಮೋರೆಯನ್ನು ಮೀರಿ ಪ್ರಯುಕ್ತವಾಗಿರುವುದು ಕವಿವರ್ಯರ ಪಾಂಡಿತ್ಯಪ್ರಿಯತೆಗೆ ಅಷ್ಟು ಶೋಭಿಸುತ್ತದೆಂದು ಹೇಳಲು ಬರದು. ಉಪನ್ಯಾಸವು ಮಹಾತ್ಮರೆಂಬ ವರ್ಗವನ್ನು ವಸ್ತುವನ್ನಾಗಿ ತೆಗೆದುಕೊಂಡು ಅನೇಕ ಅನ್ಯಥಾಸಿದ್ಧ ತತ್ವಗಳ ವಿವರಣೆಗೆ ಹೊರಟಿದೆಯಲ್ಲದೆ ಶ್ರೀ ಮದ್ಗಂಭೀರವೆಂದು ಉಪನ್ಯಾಸಕರು ತಿಳಿದ ಆಡಂಬರದ ಶೈಲಿಯಲ್ಲಿ ಸಾಗಿದೆ. ಆದುದರಿಂದ ಓದುಗರಿಗೆ ಇದು ವೇದಾಂತೋಪದೇಶವೋ ಗಾಂಧಿಯವರ ಬಗ್ಗೆ ಆಡುವ ಮಾತುಗಳೋ ಎಂಬ ಸಂದೇಹ ಹುಟ್ಟುತ್ತದೆ.

ಎರಡನೆಯ ಉಪನ್ಯಾಸ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರದು. ಮೊದಲಿನ ಬರಹ ಕವಿ ವೇದಾಂತಿ ಮತ್ತು ಪಂಡಿತನಾದ ಬಗೆಯನ್ನು ತೋರಿಸಿದರೆ ಇದು ಸಾಮಾನ್ಯ ಬರಹಗಾರ ಒಮ್ಮೆಲೇ ಆಕಸ್ಮಿಕ ಸ್ಫೂರ್ತಿಪಡೆದು ಕವಿಯಾಗ ಹೊರಟ ಬಗೆಯನ್ನು ತನ್ನ ಶೈಲಿಯ ಮೂಲಕ ಹೊರಗೆಡಹುತ್ತದೆ. ಶರ್ಮರ ಉದ್ಗಾರಗಳು ಒಂದು ಭಕ್ತಿಯುಕ್ತ ಸ್ತೋತ್ರ ರೂಪದಲ್ಲಿವೆ; ಪ್ರಾಮಾಣಿಕತೆಯ ಮೆರುಗು ಅವುಗಳಲ್ಲಿ ಕಾಣುತ್ತದೆ. "ನಮ್ಮ ಗುಡಿಗೆ ಬರುವ ಹೊಲೆಯ ಭಕ್ತ ನೀನಲ್ಲವೇ? ಸತ್ಯವಾದಿನಿ-ಅಹಿಂಸಾ ಪೂಜಾರಿಣಿ ಹೆಣ್ಣು ನೀನಲ್ಲವೇ? ಕಸ ತಿಂದು ರಸವಿತ್ತು ಸಲಹುವ ಗೋವು ನೀನಲ್ಲವೆ? ದಾಸ್ಯವನ್ನು ಹರಿದೊಗೆಯಲು ಸೆಣಸುವ ದಲಿತ-ಪತಿತ ನೀನಲ್ಲವೆ? ಅರಿಯಲಾರದೆ ತೊಳಲುವ ನಮ್ಮ ಮನ್ನಿಸು ತಂದೆ. ಕೈಹಿಡಿದು ನಡೆಸು" ಎಂಬ ಒಂದೇ ಮಾತು ಸಾಕು ಅದಕ್ಕೆ ದೃಷ್ಟಾಂತ.

ರಾಮರಾಜ್ಯದ ಕನಸು

ರಾಮರಾಜ್ಯ ಎಂದರೆ ಏನೆಂಬುದನ್ನು ಬಹಳ ತಿಳಿಯಾಗಿ ಶ್ರೀ ನ. ಭದ್ರಯ್ಯನವರು ಮೂರನೆಯ ಉಪನ್ಯಾಸದಲ್ಲಿ ಹೇಳಿದ್ದಾರೆ. ಗಾಂಧಿಯವರು ಶ್ರೀ ಎಚ್. ಜಿ. ವೆಲ್ಸರಿಗೆ ಕೊಟ್ಟ ಉತ್ತರವೆಂದು ಉಲ್ಲೇಖಿಸಿದ "ಮಾನವನು ನಿರ್ವಹಿಸಬೇಕಾದ ಕರ್ತವ್ಯದ ಪಟ್ಟಿಯೊಂದನ್ನು ಮಾಡಿರಿ ಸೂಜಿಯ ಹಿಂದೆ ದಾರ ಬರುವಂತೆ ಕರ್ತವ್ಯವನ್ನು ಹಕ್ಕು ಅನುಸರಿಸುತ್ತದೆ" ಎಂಬ ವಾಕ್ಯ ರಾಮರಾಜ್ಯದ ನಿರ್ಮಾಣಕ್ಕೆ ಅಡಿಗಲ್ಲೆಂಬುದು ಒಂದು ಮಹಾವಾಕ್ಯವೇ ಸೈ. ಇದಕ್ಕೆ ಶ್ರೀರಾಮನ ಕರ್ತವ್ಯನಿಷ್ಠೆಯನ್ನು ಉದಾಹರಿಸಲಾಗಿದೆ. "ನಿಮಗೆ ಅಗತ್ಯವಿಲ್ಲದುದನ್ನು ಅನುಭವಿಸಿದರೆ ನೀವು ಕಳ್ಳರಾಗುತ್ತೀರಿ." ಎಂಬುದು ಶ್ರೀಮಂತರಿಗೆ ಗಾಂಧಿಯವರು ಕೊಟ್ಟ ಉಪದೇಶವೆಂದು ಶ್ರೀಭದ್ರಯ್ಯನವರು ಹೇಳಿರುವುದು ಕಮ್ಯೂನಿಜಮ್ಮಿಗೆ ಹತ್ತಿರದ ಮಾತಾಗಿದೆ. ಶ್ರೀ. ಕೆ. ಟಿ. ಭಾಷ್ಯಂ 'ಗಾಂಧೀಜಿಯವರ ತತ್ವ'ದ ಮೇಲೆ ನಾಲ್ಕು ಮಾತು ಹೇಳಿದ್ದಾರೆ. ಅದು ನೆಟ್ಟಗಿದೆ. 'ಗಾಂಧೀಜಿಯವರ, ವೈಯಕ್ತಿಕ, ಕೋಟಿಯಾಂತರ, ಮನಹ, ಕೈಗಾರಿಕಾಭಿವೃದ್ಧಿ ಅಂತರ್ರಾಷ್ಟ್ರೀಯ ಮುಂತಾದ ಶಬ್ದಜೋಡಣೆಗಳು ಅವರ ಮಾತಿನಲ್ಲಿ ಬಂದಿವೆ. "ಭೇದಭಾವದಿಂದ ವೈಷಮ್ಯ, ವೈಷಮ್ಯದಿಂದ ಭಯಭೀತಿಗಳು, ಭಯಭೀತಿಗಳಿಂದ ಹಿಂಸಾಕೃತ್ಯ, ಹಿಂಸೆಯಿಂದ ಪ್ರತಿಹಿಂಸೆ ಹೀಗೆ ಇದರ ಪರಂಪರೆ" ಎಂದು ಅವರು ವ್ಯಾಖ್ಯಾನಿಸಿದ ಮನಃಶಾಸ್ತ್ರದ ಸೂತ್ರ ವೈಜ್ಞಾನಿಕ ಅಥವಾ ತಾತ್ವಿಕ ಮಹಾವಾಕ್ಯವಾಗಿ ತೋರುತ್ತದೆ ಮತ್ತು ಅಹಿಂಸಾವಾದದ ಸಮರ್ಥನೆಗೆ ಹಿಮಾಲಯೋಪಮ ಆಧಾರವಾಗಿದೆ.

ಶ್ರೀ ಜಿ. ಪಿ. ರಾಜರತ್ನಂ ಗೀತಾ ವಾಕ್ಯದಲ್ಲಿ ಕೃಷ್ಣನಿಗಿರುವ ಸರ್ವತ್ವವನ್ನು ಗಾಂಧಿಯವರಿಗೆ ಅನ್ವಯಿಸಿ ಅವರ ಅಂತಾರಾಷ್ಟ್ರೀಯತೆಯನ್ನು ಎರಡು ಮಾತಿನಲ್ಲಿ ಹೇಳಿಬಿಟ್ಟಿದ್ದಾರೆ ಡಾ. ಡಿ. ಎ. ಪುರುಷೋತ್ತಮರು "ಗಾಂಧಿಯವರು ಮತ್ತು ನಾಗರಿಕತೆಯ ಭವಿಷ್ಯತ್ತು" ಎಂಬ ತಲೆಬರಹದ ಒಂದು ಆಂಗ್ಲೋಪನ್ಯಾಸವನ್ನು ಕೊಟ್ಟಿದ್ದಾರೆ. ಅದರಲ್ಲಿ ದಿಲ್ಲಿಯಲ್ಲಾದ ಏಶಿಯ ಸಮ್ಮೇಲನಕ್ಕೆ ಗಾಂಧಿಯವರು ಕೊಟ್ಟ ಸಂದೇಶವನ್ನು ಸಾರಭೂತವೆಂದು ಕೊಟ್ಟಿದ್ದಾರೆ. ಅನಂತರ ಶ್ರೀಗಳಾದ ಕೆ. ಚಂಗಲರಾಯರೆಡ್ಡಿ, ಎಚ್. ಸಿ. ದಾಸಪ್ಪ, ಕೆ. ವಿ. ರಾಘವಾಚಾರ್ ಇವರು ಗಾಂಧಿಯವರೊಡನೆ ತಮಗಾದ ಸಂಪರ್ಕದ ಬಗ್ಗೆ ಹೇಳಿದ್ದಾರೆ. ಶ್ರೀಗಳಾದ ಕೆ. ಸಂಪದ್ಗಿರಿರಾವ್, ಡಿ. ಎಚ್. ಚಂದ್ರಶೇಖರಯ್ಯ ಇವರು ಗಾಂಧಿಯವರ ಶಿಕ್ಷಣದ ಆದರ್ಶವನ್ನು ವಿವರಿಸಿದ್ದಾರೆ.

ಸತ್ವಸಂಪನ್ನತೆಯೂ ಕಾರ್ಯಸಾಧನೆಯೂ

ಸಾಹಿತಿದೃಷ್ಟಿಗೆ ಗಾಂಧಿಯವರು ಹೇಗೆ ಕಾಣಿಸಿದರೆಂಬುದನ್ನು ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರು "ಸತ್ಯಂ, ಶಿವಂ, ಸುಂದರಂ" ಎಂಬ ಅಳಿಗೋಲಿನಿಂದ ಅಳೆದು ಗಾಂಧಿಯವರ ಬರಹಉತ್ತಮಸಾಹಿತ್ಯರಾಶಿ ಎಂದು ಸಮರ್ಥಿಸಿರುವುದು ಮನನೀಯವೂ ಮಾನ್ಯವೂ ಆಗಿದೆ. ಮುಂದೆ "ಕೈಮುಗಿವ ಗಾಂಧಿ", "ಶ್ರೀ ಗೊಮ್ಮಟ ಜಿನ ಗಾಂಧಿ", "ಸಭ್ಯತಾ ದೇವತೆ" ಎಂಬ ಕವನಗಳನ್ನು ಶ್ರೀಗಳಾದ ವಿ. ಸೀತಾರಾಮಯ್ಯ, ಜಿ. ಪಿ. ರಾಜರತ್ನಂ, ಕೆ. ವಿ. ಪುಟ್ಟಪ್ಪ ಇವರು ಜೋಡಿಸಿದ್ದಾರೆ. ಮೊದಲನೆಯದು "ಅವಾಙ್ಮಯ ಛಂದ"ದಲ್ಲೂ ಎರಡನೆಯದು ವಿವಿಧವೃತ್ತ ವಿಲಾಸದಲ್ಲೂ ಮೂರನೆಯದು ಸರಳ ರಗಳೆಯಲ್ಲೂ ಗಾಂಧೀಗುಣಗಾನ ಮಾಡಿವೆ. ಶ್ರೀ ಆರ್. ಚೆನ್ನಿಗರಾಮಯ್ಯನವರು ಗಾಂಧೀಜಿ ಮಾಡಿದ ಅಸ್ಪೃಶ್ಯೋದ್ಧಾರವನ್ನು ಎತ್ತಿ ಆಡಿದ್ದಾರೆ. ಅದೇ ವಿಷಯವನ್ನು ಶ್ರೀ ನಿಟ್ಟೂರು ಶ್ರೀನಿವಾಸರಾಯರೂ ಪ್ರತಿಪಾದಿಸಿದ್ದಾರೆ. ಬಳಿಕ ಗಾಂಧಿಯವರು ಮಾಡಿದ ಅಲ್ಪಸಂಖ್ಯರ ಸೇವೆಯ ಬಗ್ಗೆ ಶ್ರೀ ಮುಹಮ್ಮದ್ ಶರೀಫರು ಆಂಗ್ಲಭಾಷೆಯಲ್ಲಿ ಮಾತಾಡಿದ್ದನ್ನು ಕೊಡಲಾಗಿದೆ.

ಗಾಂಧಿಯವರು ಗ್ರಾಮಾಭಿವೃದ್ಧಿ ಮತ್ತು ಖಾದಿಯ ಬಗ್ಗೆ ಉಪದೇಶಿಸಿದ ಮತ್ತು ಸಾಧಿಸಿದ ಅಂಶಗಳನ್ನು ಶ್ರೀ ಟಿ. ಮರಿಯಪ್ಪನವರೂ 'ಧರ್ಮ ಸಾಮ್ರಾಜ್ಯ' ಎಂಬ ಅಕ್ಷರಶಃ ಶಬ್ದಚಿತ್ರ ಎನಿಸುವ ಒಂದು ವಿರೂಪ ಲೇಖನವನ್ನು ಶ್ರೀ ನ. ಭದ್ರಯ್ಯನವರೂ 'ಗಾಂಧಿಯವರೂ ಗ್ರಾಮೋದ್ಧಾರವೂ' ಎಂಬುದರ ಮೇಲೆ ಶ್ರೀ ಗೋರೂರು ರಾಮಸ್ವಾಮಿ, ಅಯ್ಯಂಗಾರರೂ 'ಗಾಂಧೀಜಿ ಮತ್ತು ಖಾದಿ ಎಂಬುದರ ಮೇಲೆ ಶ್ರೀ ಎಸ್. ವಿ. ರಂಗಣ್ಣನವರೂ ಎರಡೆರಡು ಮಾತುಗಳನ್ನು ಆಡಿದ್ದಾರೆ. ಗಾಂಧಿಯವರ ರಾಜಕಾರಣದ ಮಾತೆತ್ತಿ ಶ್ರೀಗಳಾದ ಗೋರೂರು ರಾಮಸ್ವಾಮಿ ಅಯ್ಯಂಗಾರರೂ ಮಹಿಳೆಯರಿಗೆ ಗಾಂಧಿಯವರು ಕೊಟ್ಟ ಉಪದೇಶವನ್ನು ಶ್ರೀಮತಿ ಎಂ. ವಿ. ಲಕ್ಷ್ಮಿಯವರು ಕೆಲಮಾತುಗಳಲ್ಲಿ ಹೇಳಿದ್ದಾರೆ. ಅವು ನೀತಿ, ನಡತೆ, ನಾಗರಿಕತೆಗಳ ಜಿಜ್ಞಾಸುಗಳಿಗೆ ಬಹಳ ಪ್ರಯೋಜನಕರವಾಗುವಂತಿವೆ.

ಪ್ರಸ್ತುತ ಪುಸ್ತಕದ ವಿಷಯವರ್ಗೀಕರಣ ಮುದ್ರಣಸೌಂದರ್ಯ ಇವು ಮೆಚ್ಚುವಂಥವಿವೆ. ಆದರೆ ಸಮಸ್ತ ಪದಗಳನ್ನು ಕಂಡಕಂಡಲ್ಲಿ ವ್ಯಸ್ತವಾಗಿ ಮುದ್ರಿಸಿರುವ ಮತ್ತು ಕೆಲವೆಡೆ ತದ್ವ್ಯತಿರೇಕವಾಗಿ ಮಾಡಿರುವ ಅಂಶವನ್ನು ಶ್ಲಾಘ್ಯವೆನ್ನಲು ಬರದು. ಒಟ್ಟಿನಲ್ಲಿ ಗಾಂಧಿಯವರ ಬಹುಮುಖವಾದ ವ್ಯಕ್ತಿತ್ವ, ಕಾರ್ಯ ಮತ್ತು ಸತ್ವಸಂಪನ್ನತೆಗಳನ್ನು ಚಿಕ್ಕದಾದರೂ ಚೊಕ್ಕ ಭಾಷಣಗಳಿಂದ ತಿಳಿಯಪಡಿಸಿದ ವಿವಿಧ ಭಾಷಣಕಾರರನ್ನೂ ಈ ಭಾಷಣಗಳನ್ನು ಕಲೆಹಾಕಿ ಓದುಗರೆದುರು ಇಟ್ಟ ಮೈಸೂರು ಆಕಾಶವಾಣಿಯವರನ್ನೂ ಯಾವ ಕನ್ನಡಿಗನೂ ಅಭಿನಂದಿಸದಿರಲಾರನು.

ನಿಮಿಷಾವಲೋಕನ

Women, Family & Socialism ಎಂಬ ಪುಸ್ತಕದಲ್ಲಿ ಶ್ರೀ ಡಿ. ವಾಯ್. ದೇಶಪಾಂಡೆಯವರು ಸ್ತ್ರೀಯ ಬಂಧವಿಮೋಚನೆಯಾಗಿ ಅವಳಿಗೆ ಪುರುಷ ಸಮಾನವಾದ ಆರ್ಥಿಕ ಸ್ವಾತಂತ್ರ್ಯ ಸಿಗಬೇಕೆಂದೂ ಇದರಿಂದ ಸಮಾಜದ ಕಟ್ಟು ಸಡಿಲಾಗಿ ಅದು ಹಾಳಾಗುವಂತಿಲ್ಲೆಂದೂ ಪ್ರತಿಪಾದಿಸಿದ್ದಾರೆ. ಅವರ ವಿಚಾರಗಳನ್ನೊಪ್ಪಲಿ ಬಿಡಲಿ, ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ನಿರೂಪಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆಂದು ಒಪ್ಪಲೇಬೇಕು. ಮುಂಬಯಿಯ ಹಿಂದ್ ಕಿತಾಬ್ಸ್ ಲಿಮಿಟೆಡ್ (೨೬೧-೨೬೩ ಹಾರ್ನಬಿ ರೋಡ) ನವರು ಪ್ರಕಟಿಸಿದ್ದಾರೆ. ರೂ. ೧/೮ ಅದೇ ಪ್ರಕಾಶನ ಸಂಸ್ಥೆ ಪ್ರಕಟಿಸಿದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರ University Addresses (ಬೆಲೆ ರೂ. ೨.೮) ಪುಸ್ತಕದಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ವಿಶ್ವವಿದ್ಯಾಲಯಗಳ ಪದವೀದಾನ ಸಮಾರಂಭಗಳಲ್ಲಿ ನಮ್ಮ ಗವರ್ನರ ಜನರಲ್ಲರು ಮಾಡಿದ ೧೪ ಭಾಷಣಗಳನ್ನು ಕೂಡಿಸಿ ಪ್ರಕಟಿಸಲಾಗಿದೆ. ರಾಜಾಜಿಯವರ ವಾಣಿಯೆಂದರೆ ಋಷಿವಾಣಿಯಂತೆ ಗಂಭೀರವೂ ವಿವೇಕಪೂರ್ಣವೂ ಆದುದು. ಪ್ರತಿಯೊಬ್ಬ ವಿದ್ಯಾಭಿಮಾನಿಯೂ ಅವಶ್ಯ ಮನನಮಾಡಬೇಕಾದ ಪುಸ್ತಕ.

ಪ್ರಸಿದ್ಧ ಘಟನಾತಜ್ಞರೂ ವಕೀಲರೂ ಈಗ ಕೊಲ್ಲಾಪುರದ ಶಹಾಜಿ ಕಾಲೇಜಿನ ಅಧ್ಯಾಪಕರೂ ಆದ ಶ್ರೀ ರಘುನಾಥರಾವ್ ಬಿ. ನಾಯಕರು ಬರೆದ Paramountcy in Indian Constitutional Law ಪುಸ್ತಕದಲ್ಲಿ ಹಿಂದೀ ಸಂಸ್ಥಾನಗಳ ಘಟನಾತ್ಮಕ ಸ್ಥಾನಮಾನಗಳನ್ನು ವಿವೇಚಿಸಿದ್ದಾರೆ. ಅವುಗಳ "ಸಾರ್ವಭೌಮತ್ವ"ದ ಒಣ ಹೆಮ್ಮೆ ನಿರಾಧಾರವೆಂದು ಅವರು ಕಾಯದೆಯ ಬಲದಿಂದ ತೋರಿಸಿಕೊಟ್ಟಿದ್ದಾರೆ. ಆದರೆ ಇಂದು ಆ "ಸಾರ್ವಭೌಮತ್ವ"ವನ್ನು ಹಿಂದೀ ಸಂಸ್ಥಾನ ಶಾಪಿ ಅಮೂಲ ಕಿತ್ತುಹಾಕಿದ್ದು ಸಮಸ್ಯೆಯೆ ಉಳಿದಿಲ್ಲವಾದರೂ ಮುನ್ನುಡಿಕಾರ ನ್ಯಾ. ಲೋಕೂರರು ಹೇಳುವಂತೆ ಪುಸ್ತಕದ ಮಹತ್ವ ಕಡಿಮೆಯಾಗಿಲ್ಲ. ಬೆಲೆ? ಹನ್ನೆರಡು ಪುಟಗಳ The Future of States in Free India ಎಂಬ ಕಿರುಹೊತ್ತಿಗೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕರಾದ ಶ್ರೀ ಜಿ. ಎಸ್ ಹಾಲಪ್ಪನವರು ಅಳಿದುಳಿದ ಹಿಂದೀ ಸಂಸ್ಥಾನಗಳ (ಮೈಸೂರು ಮತ್ತು ತಿರ್ವಾಂಕೂರು) ಭವಿಷ್ಯವನ್ನು ವಿವೇಚಿಸುತ್ತ ಈ ಸಂಸ್ಥಾನಗಳು (ಮತ್ತು ಉಳಿದ ಸಂಸ್ಥಾನ ಒಕ್ಕೂಟಗಳು) ಪ್ರಾಂತಗಳಷ್ಟೇ ಅಧಿಕಾರಗಳನ್ನು ಗಳಿಸಿಕೊಂಡು ಉಳಿದವುಗಳನ್ನು ಕೇಂದ್ರಕ್ಕೆ ಬಿಟ್ಟುಕೊಡಲೇಬೇಕಾಗುವದೆಂದೂ ಮೈಸೂರು ತಿರ್ವಾಂಕೂರು ಸಂಸ್ಥಾನಗಳು ನೆರೆಹೊರೆಯ ಸಭಾಷಾಪ್ರದೇಶಗಳೊಡನೆ ಎರಕವಾಗುವದು ಕೂಡ ತಪ್ಪಿದ್ದಲ್ಲವೆಂದೂ ತೋರಿಸಿ ಕೊಟ್ಟಿದ್ದಾರೆ. ಮೈಸೂರು ಮಹಾರಾಜರನ್ನು ಅಖಿಲ ಕರ್ನಾಟಕದ ಘಟನಾತ್ಮಕ ಅರಸರನ್ನಾಗಿ ಒಪ್ಪಿ ಈ ಹೊಸ ಘಟಕವಾಗಬೇಕೆಂಬ ಅವರ ಅಭಿಪ್ರಾಯ ಮಾತ್ರ ಸ್ವೀಕೃತವಾಗುವ ಸಂಭವವಿಲ್ಲ. ಅಂಥ ಆಶೆಯಿಟ್ಟುಕೊಂಡವರ ಕಲ್ಪನೆಯನ್ನು ತ್ರಿಮೂರ್ತಿ ವರದಿ ಪೂರ್ಣವಾಗಿ ನಿರಸನಗೊಳಿಸಿದೆ.

ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಕ್ಯಾಲೆಂಡರು

ಜಗದ್ಗುರು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ನಂಜನಗೂಡು ಇವರು ಸಿದ್ಧಪಡಿಸಿದ ಕ್ಯಾಲೆಂಡರನ್ನು ಆದರದಿಂದ ಸ್ವಾಗತಿಸುತ್ತೇವೆ. ಈ ಕ್ಯಾಲೆಂಡರಿನಲ್ಲಿ ಮೇಲ್ಭಾಗದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ವೃಂದಾವನ ಮತ್ತು ಮೂರ್ತಿಯನ್ನು ಅಂದವಾಗಿ ಮುದ್ರಿಸಲಾಗಿದ್ದು ಕೆಳಗೆ ಚೈತ್ರಾದಿಮಾಸಗಳ ಪಂಚಾಂಗವನ್ನು ಕೊಡಲಾಗಿದೆ. ಏಕಾದಶ್ಯಾ ದಿವಿಚಾರವನ್ನೂ ಧಾರ್ಮಿಕ ಹಬ್ಬ ಹುಣ್ಣಿವೆ ಜಯಂತಿ ಪುಣ್ಯತಿಥಿಗಳನ್ನೂ ಕೊಡಲಾಗಿದ್ದು ಆಂಗ್ಲ ತಾರೀಕುಗಳನ್ನೂ ಕೊಡಲಾಗಿದೆ. ಪಂಚಾಂಗಸ್ಥ ತಿಥಿ ತಾರೀಕು ಮುಂತಾದವುಗಳನ್ನು ತಿಳಿದುಕೊಳ್ಳಲು ಇದೊಳ್ಳೆ ಉಪಯುಕ್ತವಾಗಿದೆ. ಮೈಸೂರು ನಗರದಲ್ಲಿರುವ ಶ್ರೀ ಪರಿಮಳ ಪವರ ಪ್ರೆಸ್ಸಿನಲ್ಲಿ ಅಂದವಾಗಿ ಮುದ್ರಿತವಾಗಿದೆ. ಸಂಗ್ರಾಹ್ಯವಾಗಿದೆ.

ಮೇ ... ರಿಂದ ೨೨ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಘಿಡೆ, ಬೆಳಗಾಂವಿ

ಮೇಷ

ಪ್ರಕೃತಿ ಚಾಕ್ಷತವು. ಮಕ್ಕಳ ಉನ್ನತಿ ಕಾಣದಿದ್ದರೂ ಅವರ ಬಗ್ಗೆ ಅಷ್ಟು ಚಿಂತೆ ಪಡಬೇಕಾಗಿಲ್ಲ. ... ಹೊರತು ಪ್ರಾಪಂಚಿಕ ಸುಖ ಅತಿ ... ಉದ್ಯೋಗದಲ್ಲಿ ಉತ್ಕರ್ಷವಾದರೂ ... ಸ್ಪರ್ಧೆಗಳಲ್ಲಿ ಯಶಸ್ಸು. ಆದರೂ ಕಷ್ಟವಿನ ಆರ್ಜಿತ ಹೆಚ್ಚು ಕಡಿಮೆ ಇರುವದು. ಒಂದು ಮಂಗಲ ಕಾರ್ಯ ನಿಮ್ಮ ಕೈಯಿಂದಾಗಬಹುದು ಭೆಟ್ಟಿಯಿಂದ ಅಷ್ಟು ಫಲವಿಲ್ಲದಿದ್ದರೂ ಪತ್ರ ವ್ಯವಹಾರ ಮತ್ತು ಪ್ರವಾಸ ಸಫಲವಾಗುವವು. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೬, ೨೦, ೨೧ ಅನುಕೂಲ.

ವೃಷಭ

... ಹೆಂಡತಿಯ ಆರೋಗ್ಯ ಚನ್ನಾಗಿರದಿದ್ದರೂ ನಿಮ್ಮ ಆರೋಗ್ಯವೂ ಇತರ ಪ್ರಾಪಂಚಿಕ ಸುಖಗಳೂ ಸಮಾಧಾನಕರವಾಗಿರುವವು. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ಉದ್ಯೋಗದಲ್ಲಿ ಲಾಭ ಮತ್ತು ಪ್ರತಿಷ್ಠೆ ಉತ್ತಮ. ಕುಂಬ ... ಇಚ್ಛಿತ ಫಲಪ್ರಾಪ್ತಿ. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳೂ ಇದ್ದಂತಿರುವವು. ಪ್ರವಾಸ ತ್ರಾಸದ್ದಾದರೂ ಪ್ರೇಕ್ಷಣೀಯ ಸ್ಥಳಗಳ ದರ್ಶನದಿಂದ ಪ್ರಸನ್ನರಾಗುವಿರಿ. ಭೆಟ್ಟಿ ಪತ್ರವ್ಯವಹಾರಗಳಿಗೂ ಅನುಕೂಲ. ರೋಹಿಣಿಯ ಕೊನೆಯ ೩ ಮತ್ತು ಮೃಗಶಿರದ ೧ ನೆ ಚರಣಗಳಿಗೆ ಸ್ವಲ್ಪ ತೊಂದರೆ ಹೆಚ್ಚು. ತಾ. ೧೬, ೧೮, ೧೯, ೨೨ ಅನುಕೂಲ.

ಮಿಥುನ

ಸ್ವಂತದ ಮತ್ತು ಸಂತತಿಯ ಪ್ರಕೃತಿ ಕೆಡಬಹುದು ಅಲ್ಲದೆ ನಿಮಗೆ ಪತ್ನೀ ವಿರಹವೂ ಒದಗಬಹುದು. ಆದರೆ ಉದ್ಯೋಗದಲ್ಲಿ ಪ್ರತಿಷ್ಠೆ ಅಷ್ಟು ಚನ್ನಾಗಿಲ್ಲದಿದ್ದರೂ ಲಾಭ ಕೈತುಂಬ. ಸ್ಥಾವರದಲ್ಲಿ ಏನಾದರೂ ಹೊಸ ತೊಂದರೆಗಳು ಏಳಬಹುದು. ವಾದ ಸ್ಪರ್ಧೆಗಳಲ್ಲಿ ವೆಚ್ಚ ಹೆಚ್ಚಾದರೂ ಕೊನೆಗೆ ನಿಮಗೇ ಯಶ. ಯಾರೋ ಒಬ್ಬ ಹೆಣ್ಣುಮಗಳು ನಿಮ್ಮಲ್ಲಿ ಹಗೆ ತಳೆಯಬಹುದು. ನಿಮಗೂ ... ವಿಷಯಗಳೂ ಜೊತೆಯಾಗಿ ... ಸಂಭವ. ಪ್ರವಾಸ ಸುಖಕರ. ಪತ್ರವ್ಯವಹಾರಕ್ಕಿಂತ ಭೆಟ್ಟಿ ಒಳಿತು. ಆರ್ದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೆ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೬, ೨೦, ೨೧ ಅನುಕೂಲ.

ಕರ್ಕ

ನೀವು ಮುಂದಿನ ವಾರವನ್ನು ಹೆಚ್ಚು ಆಸೆಯಿಂದ ಎದುರು ನೋಡಬಹುದು. ಈ ... ನಿಮಗೆ ದಂಪತಿಗಳಿಗೆ ದೈಹಿಕ ಕ್ಲೇಶ ... ಇರುವದು. ಮಕ್ಕಳ ವರ್ತನೆಯೂ ಅಷ್ಟು ಸಮಂಜಸವಾಗಿರದು. ಒಬ್ಬದ ಅತಿಥಿಗಳಿಗೆ ನೀವು ಆಶ್ರಯ ಕೊಟ್ಟು ಕಷ್ಟಪಡಬೇಕಾದೀತು. ಉದ್ಯೋಗದಲ್ಲಿ ಎಲ್ಲವೂ ಬಯಸಿದಂತೆ. ವಾದ ಸ್ಪರ್ಧೆಗಳಲ್ಲಿ ಮಧ್ಯಮ ಸ್ಥಿತಿ. ಪ್ರವಾಸಾದಿ ಕಾರ್ಯಗಳು ಯಶಸ್ವಿಯಾಗುವವು. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷದ ೧ನೇ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೭, ೧೮, ೧೯, ೨೨ ಅನುಕೂಲ.

ಸಿಂಹ

ಮಕ್ಕಳಿಗೂ ದಾಯಾದ್ಯರಿಗೂ ಅನಾರೋಗ್ಯ. ಪತ್ನಿಯೊಡನೆ ಮತಭೇದ. ಆದರೆ ಸ್ಥಾವರ ಆಸ್ತಿಯ ಹೆಚ್ಚಳ ಮತ್ತು ಉದ್ಯೋಗದಲ್ಲಿ ಉತ್ತಮ ಪ್ರತಿಷ್ಠೆ. ಲಾಭ ಮಾತ್ರ ... ಮಧ್ಯಮ. ಶತ್ರುಗಳಿಗಿಂತ ಮಿತ್ರರ ಕಾಟವೇ ಹೆಚ್ಚು. ಪ್ರವಾಸಾದಿ ಕಾರ್ಯಗಳು ನಿರ್ವಿಘ್ನ. ಮಘೆಯ ಕೊನೆಯ ೩ ಮತ್ತು ಪೂರ್ವೆಯ ೧ನೆ ಚರಣಗಳಿಗೆ ಅನುಕೂಲ ಕಾಲ. ತಾ. ೧೬, ೨೦ ... ಹಿತಾವಹ.

ಕನ್ಯಾ

ನಿಮಗೂ ಮಕ್ಕಳಿಗೂ ಸುಖ ಕ್ಲೇಶದಾಯಕ ... ಸ್ತ್ರೀಸುಖ ಉತ್ತಮ. ಒಬ್ಬ ಪ್ರತಿಷ್ಠೆಯ ಮುಖ್ಯಗೆ ನಿಮ್ಮ ಅವಶ್ಯವಿಲ್ಲದ ಹಸ್ತಕ್ಷೇಪವನ್ನು ಕೊಳ್ಳುವ ಗೋಜಿಗೆ ಹೋಗದೇ ಇರಿ. ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭ ಮಧ್ಯಮವಾಗಿದ್ದರೂ ಅಲ್ಪ ಸ್ವಲ್ಪ ಅನಿರೀಕ್ಷಿತ ಲಾಭವಾದೀತು. ಧಾರ್ಮಿಕ ಕೃತ್ಯಗಳ ಕಡೆಗೆ ಒಲವು. ವಾದಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳ ತೋರು ಬಲವಾಗಿರುವದು. ಭೆಟ್ಟಿ ಫಲಿಸದು. ಪತ್ರವ್ಯವಹಾರ ಒಳಿತು. ಪ್ರವಾಸವೂ ಸುಖಕರ. ಹಸ್ತದ ಕೊನೆಯ ೩ ಮತ್ತು ಚಿತ್ರೆಯ ೧ ನೆ ಚರಣಗಳಿಗೆ ಸ್ವಲ್ಪ ಅನಿಷ್ಟವಿದೆ. ತಾ. ೧೬, ೧೮, ೧೯, ೨೨ ಅನುಕೂಲ.

ತುಲಾ

ನಿಮಗೆ ಶಾರೀರಿಕ ಮತ್ತು ನಿಮ್ಮವರಿಗೆ ಮಾನಸಿಕ ತ್ರಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಗಳು ಅಷ್ಟಕ್ಕಷ್ಟೆ. ಆದರೂ ಲಾಭ ಚನ್ನಾಗಿರುವದು. ಅನಿರೀಕ್ಷಿತ ಲಾಭವೂ ದೊರಕುವ ಯೋಗವುಂಟು. ವಾದ ಸ್ಪರ್ಧೆಗಳಲ್ಲಿ ಹೇಳಬೇಕಾದ ಮಾತೇನೂ ಇಲ್ಲ. ಪರಸ್ತ್ರೀ ವಿಷಯದಲ್ಲಿ ಸ್ವಲ್ಪ ಮನಸ್ಸನ್ನು ಬಿಗಿಹಿಡಿಯಬೇಕೆಂದು ನಿಮಗೆ ಉಪದೇಶ ಕೊಡಬೇಕಾಗಿದೆ. ಪ್ರವಾಸಾದಿ ಕಾರ್ಯಗಳು ಅನುಕೂಲವಾಗಿ ಪರಿಣಮಿಸಲಿಕ್ಕಿಲ್ಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖೆಯ ೧ ನೆ ಚರಣಗಳಿಗೆ ತೊಂದರೆಯಿಲ್ಲದೆ ಗೆಲವಿಲ್ಲ. ತಾ. ೧೬, ೨೦, ೨೧ ಅನುಕೂಲ.

ವೃಶ್ಚಿಕ

ನಿಮ್ಮ ಪ್ರಕೃತಿ ಅಷ್ಟು ಚೆನ್ನಾಗಿರದ್ದರಿಂದ ಲಿಯೋ ಏನೋ ದುರಾಗ್ರಹ ದುಃಶಂಕೆಗಳಿಂದ ಉಂಟಾದ ಮೊಂಡ ಮಾತುಗಳಿಂದ ಹೆಂಡತಿ ಮಕ್ಕಳ ಮನನೋಯಿಸುವಿರಿ ಉದ್ಯೋಗದಲ್ಲಿ ಲಾಭ ಪ್ರತಿಷ್ಠೆಗಳು ಚನ್ನಾಗಿರುವವು. ಆದರೆ ಪರಕಾರ್ಯದಲ್ಲಿ ಅಡ್ಡಗಾಲಿಕ್ಕುವ ದುರ್ಬುದ್ಧಿಯನ್ನು ಬಿಡಿರಿ. ವಾದ ಸ್ಪರ್ಧೆಗಳಲ್ಲಿ ಯಶ. ಪ್ರವಾಸಕ್ಕೂ ಭೆಟ್ಟಿಗೂ ಅನುಕೂಲವಿಲ್ಲ. ಪತ್ರವ್ಯವಹಾರ ಲೇಸು. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠದ ೧ ನೆ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೬, ೧೭, ೧೮, ೧೯ ಹಿತ.

ಧನು

ನಿಮ್ಮ ಪ್ರಕೃತಿ ಸುಖವಾಗಿದ್ದರೂ ಹೆಂಡತಿಯದು ತುಸು ಕೆಡುವದು. ಆದರೂ ಅನ್ಯೋನ್ಯ ಪ್ರೀತಿಯಿಂದ ನಿಮ್ಮ ಸಂಸಾರ ಆನಂದದಿಂದಲೇ ಸಾಗುವದು. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭ ಕಡಿಮೆಯೆ ಧಂದೆ ಮಾಡುವವರಿಗಿಂತ ನೌಕರಿಯಲ್ಲಿರುವವರಿಗೆ ಹೆಚ್ಚು ಅನುಕೂಲ. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಪ್ರವಾಸಾದಿ ಕಾರ್ಯಗಳಿಗೆ ಕೈಹಾಕದಿರುವದೇ ಒಳಿತು. ಮೂಲದ ಕೊನೆಯ ೩ ಮತ್ತು ಪೂರ್ವಾಷಾಢದ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೬, ೧೯, ೨೦ ಹಿತ.

ಮಕರ

ನಿಮ್ಮ ಬ್ಬರ ಪ್ರಕೃತಿ ಅಲ್ಪಸ್ವಲ್ಪ ಅಸ್ವಸ್ಥವಾದರೂ ಮಕ್ಕಳ ಉನ್ನತಿ, ಉದ್ಯೋಗದಲ್ಲಿ ಲಾಭ ಮತ್ತು ಪ್ರತಿಷ್ಠೆ ಮೊದಲಾದ ಅನುಕೂಲ ಸಂವಿಧಾನಗಳಿಂದ ಪ್ರಾಪಂಚಿಕ ಸುಖ ಚೆನ್ನಾಗಿರುವದೆಂದೇ ಹೇಳಬೇಕು. ಮಿತ್ರ ಮತ್ತು ವರಿಷ್ಠ ಜನರೊಡನೆ ಅಲ್ಪಸ್ವಲ್ಪ ವಿರೋಧ ಪೊಡೆಯಬಹುದು. ವಾದ ಸ್ಪರ್ಧೆಗಳಲ್ಲಿ ಸಮಾನ ಸ್ಥಿತಿ. ಶ್ರವಣದ ಕೊನೆಯ ೩ ಮತ್ತು ಧನಿಷ್ಠೆಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೮, ೧೯, ೨೦, ೨೧ ಅನುಕೂಲ.

ಕುಂಭ

ಸ್ವಂತದ ಪ್ರಕೃತಿ ಚನ್ನಾಗಿದ್ದರೂ ಹೆಂಡತಿಗೆ ಅನಾರೋಗ್ಯ. ಅಲ್ಲದೆ ವ್ಯವಹಾರದಲ್ಲಿ ಅನೇಕ ಜನರನ್ನು ಒಲಿಸಿಕೊಳ್ಳಬೇಕಾದ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭ ಅಷ್ಟಕ್ಕಷ್ಟೇ. ಮಾಡಿದ ಸೇವೆ ಅಪರಾಧಕ್ಕೆ ಕಾಲದೆಂಬಂತೆ ನಿಮ್ಮ ಧಾರ್ಮಿಕ ಕಾರ್ಯಗಳು ಗತಿಯಾದೀತು. ವಾದ ಸ್ಪರ್ಧೆಗಳಲ್ಲಿ ಒಪ್ಪಂದವಾಗುವ ಸಂಭವ. ಪ್ರವಾಸಾದಿ ಕಾರ್ಯಗಳ ಒಂದಿಷ್ಟು ತೊಂದರೆಯಾದರೂ ಮನಸಿನಂತೆ ಆಗುವವು. ಶತತಾರೆಯ ಕೊನೆಯ ೩ ಮತ್ತು ಪೂರ್ವಾಭಾದ್ರೆಯ ೧ ನೆ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೬, ೨೦, ೨೧, ೨೨ ಹಿತ.

ಮೀನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭ ಕಡಿಮೆ. ಮೈತ್ರಿಯಲ್ಲಿ ವಿರೋಧ. ಆದರೆ ವಾದ ಸ್ಪರ್ಧೆಗಳಲ್ಲಿ ಜಯ. ಸ್ಥಾವರದಲ್ಲಿ ಹೆಚ್ಚಳ. ಅಪ್ಪರಲ್ಲಿ ಮಂಗಲ ಕಾರ್ಯ. ಪ್ರವಾಸ ಹಿತಕರವಾಗದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರಕ್ಕೆ ಅನುಕೂಲವಿದೆ. ಉತ್ತರಾಭಾದ್ರೆಯ ಕೊನೆಯ ೩ ಮತ್ತು ರೇವತಿಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೬, ೧೭, ೧೯ ಅನುಕೂಲ.

(ಮುಖಪುಟದಿಂದ ಬಂದುದು)

ಬಂಡವಳದ ಸಮಸ್ಯೆ

ಉದ್ದಿಮೆಗಳ ರಂಗದಲ್ಲಾದರೂ ಸ್ಥಿತಿಗತಿ ಇದಕ್ಕಿಂತ ತೃಪ್ತಿಕರವಾಗಿಲ್ಲ. ಯುದ್ಧದ ಒತ್ತಡದಿಂದ ಬ್ರಿಟಿಶ ಸಾಮ್ರಾಜ್ಯದ ಇತರ ಅನೇಕ ರಾಷ್ಟ್ರಗಳು ಉದ್ಯಮಗಳನ್ನು ವಿಸ್ತರಿಸಿ ತಮ್ಮ ಆರ್ಥಿಕ ಸ್ಥಿತಿಯನ್ನು ದೃಢತರವಾಗಿ ಮಾಡಿಕೊಂಡವು. ಆದರೆ ಭಾರತದ ಸ್ಥಿತಿ ತದ್ವಿಪರೀತವಾಗಿ ಶೋಚನೀಯವಾಗಿದೆ. ಮೊದಲನೆಯದಾಗಿ, ಬಂಡವಳದ ಕೊರತೆಯಿದೆ. ಆಧುನಿಕ ಅರ್ಥಪ್ರಣಾಲಿಯಲ್ಲಿ ಬಂಡವಳಕ್ಕೆ ಮಹತ್ವದ ಸ್ಥಾನವಿದೆ. ಬಂಡವಳಗಾರನು ಉತ್ಪಾದನದ ಸಾಧನಗಳನ್ನು ಒದಗಿಸಿ ತಕ್ಕಮಟ್ಟಿನ ಹಾನಿಯ ಸಂಭವವನ್ನು ಎದುರಿಸುತ್ತಾನೆ ಹಿಂದುಸ್ಥಾನದಲ್ಲಿ ಉತ್ಪಾದನೆ ಕಡಿಮೆ ಮಟ್ಟದಲ್ಲಿರುವದರಿಂದ ಬಂಡವಳದ ಸಂಗ್ರಹದ ಪ್ರಮಾಣವೂ ಕಡಿಮೆ. ನೂರಾರು ಕೋಟಿ ರೂಪಾಯಿಗಳ ಯೋಜನೆಗಳನ್ನು ಸಿದ್ಧಪಡಿಸುವದರಿಂದಲೇ ಉದ್ದಿಮೆಗಳ ವಿಸ್ತರಣವಾದೀತೆಂದು ಬಗೆದಿದ್ದ ಮುಂದಾಳುಗಳಿಗೆ ಯಂತ್ರಾದಿ ಸಾಮಗ್ರಿಗಳನ್ನು ತರಿಸಲು ವಿದೇಶೀ ವಿನಿಮಯ ಹಣವೂ ದೇಶೀ ಬಂಡವಳವೂ ಎಷ್ಟು ದುರ್ಲಭವಾಗಿವೆಯೆಂದು ಇದೀಗ ತಿಳಿದು ಬಂದಿದೆ. ಮೇಲಾಗಿ ಕೂಲಿಕಾರರ ಅಸಂತೋಷವೂ ಉತ್ಪಾದನೆಯ ಹೆಚ್ಚಳಕ್ಕೆ ಅಡ್ಡಿ ಮಾಡಿದೆ. ಉತ್ಪಾದನೆಯನ್ನು ಹೆಚ್ಚಿಸಿದ ಹೊರತು ಕೂಲಿಯನ್ನು ಹೆಚ್ಚಿಸಿ ಯಾವ ಪುರುಷಾರ್ಥವೂ ಇಲ್ಲೆಂದು ಕೂಲಿಕಾರರಿಗೆ ಮನವರಿಕೆ ಮಾಡಿಕೊಡಬೇಕು.

ಬಂಡವಳದ ಕೊರತೆಯನ್ನು ನೀಗಿಸಲು ವಿದೇಶೀ ಬಂಡವಳದ ಪ್ರವೇಶಕ್ಕೆ ಉತ್ತೇಜನ ಕೊಡುವ ಧೋರಣವನ್ನು ವಹಿಸಿದ್ದು ಯೋಗ್ಯವೇ ಆಗಿದೆ. ಆದರೆ ಇದರಲ್ಲಿಯೂ ನಾವು ಪೂರ್ತಿ ಭರವಸೆಯಿಟ್ಟು ನಿಶ್ಚಿಂತರಾಗುವಂತಿಲ್ಲ. ಸ್ಟರ್ಲಿಂಗ್ ಶಿಲ್ಕುಗಳ ಮೇಲಿಟ್ಟ ವ್ಯರ್ಥ ಭರವಸೆ ನಮ್ಮನ್ನು ನಿಷ್ಕ್ರಿಯರಾಗಿ ಮಾಡಿದಂತೆ ವಿದೇಶೀ ಬಂಡವಳದ ಮೇಲಿನ ಅತಿಭರವಸೆಯೂ ನಮ್ಮನ್ನು ವೈಗಳ್ಳರನ್ನಾಗಿ ಮಾಡಿ ಮೋಸಗೊಳಿಸಬಹುದು. ಇಂದು ವಿದೇಶಗಳಲ್ಲಿ ಹಣ ತೊಡಗಿಸಬಲ್ಲ ಶ್ರೀಮಂತ ದೇಶವೆಂದರೆ ಅಮೇರಿಕೆಯೊಂದೇ. ಅಮೇರಿಕೆಗೆ ವರ್ಷಕ್ಕೆ ೨೦೦ ಕೋಟಿ ಡಾಲರುಗಳನ್ನು ವಿದೇಶಗಳಲ್ಲಿ ತೊಡಗಿಸುವ ಸಾಮರ್ಥ್ಯವಿದೆಯೆಂದು ಗಣಿಸಲಾಗಿದೆ. ಆದರೆ ಇದರಲ್ಲಿ ಪಶ್ಚಿಮ ಯುರೋಪ, ದಕ್ಷಿಣ ಅಮೇರಿಕೆ, ಮಧ್ಯ ಪೂರ್ವ, ತುರ್ಕಿ, ಚೀನ, ಜಪಾನ, ಆಗ್ನೇಯ ಏಶಿಯ ಇವುಗಳಿಗೆ ಕ್ರಮಾನುಗತ ಪ್ರಾಧಾನ್ಯ ದೊರೆತು, ಮತ್ತೇನಾದರೂ ಉಳಿದರೆ ಮಾತ್ರ ಭಾರತಕ್ಕೆ ಹರಿದುಬರಬಲ್ಲದು. ಅದ್ದರಿಂದ ಅಮೇರಿಕೆಯ ಬಂಡವಳ ನಾವು ಕರೆದಾಕ್ಷಣ ಇತ್ತ ಬರುವರೆಂದು ನಂಬಿ ಸುಮ್ಮನಿದ್ದರೆ ನಮ್ಮಂಥ ದಡ್ಡರು ನಾವೇ ಸರಿ. ಅದರ ಬದಲಿಗೆ ಆಹಾರದ ಆಯಾತಕ್ಕಾಗಿ ವರ್ಷಕ್ಕೆ ನಾವೀಗ ತೆರುತ್ತಿರುವ ೧೩೦ ಕೋಟಿ ರೂಪಾಯಿಗಳಲ್ಲಿ, ಆಹಾರೋತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಹಟದಿಂದ ದುಡಿದು, ಉಳಿತಾಯ ಮಾಡಿ ಔದ್ಯೋಗಿಕ ವಿಸ್ತರಣಕ್ಕೆ ಉಪಯೋಗಿಸುವದು ಶ್ರೇಯಸ್ಕರ. ಎಲ್ಲ ಬಗೆಯ ವ್ಯರ್ಥ ಮತ್ತು ವಿಲಾಸದ ವೆಚ್ಚಗಳನ್ನು ನಿಲ್ಲಿಸಿ ದೇಶದ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಎಲ್ಲ ವರ್ಗಗಳ ಜನರನ್ನೂ ಒಂದುಗೂಡಿಸಲು ನಮ್ಮ ಮುಂದಾಳುಗಳು ಟೊಂಕ ಕಟ್ಟಬೇಕು.

ಮೂಲೆಮೂಲೆಗಳಿಂದ

(ಮುಖಪುಟದಿಂದ)

ಪಾಶ್ಚಾತ್ಯ ರಾಷ್ಟ್ರಗಳು ... ತನ್ನ ಒಕ್ಕೂಟದ ಅಂಗವಾಗಿ ... ಪ್ರಕಾರ ಯುರೋಪ್ಯ ಸಮಿತಿಯನ್ನು ... ಕೊಂಡಿದೆ. ಲಂಡನ್ನಿನಲ್ಲಿ ಒಕ್ಕೂಟದ ರಾಷ್ಟ್ರಗಳ ಪ್ರತಿನಿಧಿಗಳು ಅದರ ... ಸಹಿ ಹಾಕಿದವು. ಇನ್ನೂ ಹೆಚ್ಚಿನ ಪರಸ್ಪರ ಐಕ್ಯವನ್ನೂ ಸಾಮಾಜಿಕ ಮತ್ತು ಆರ್ಥಿಕ ಪುರೋಭಿವೃದ್ಧಿಯನ್ನೂ ಸಾಧಿಸುವುದು ಸಮಿತಿಯ ಉದ್ದೇಶವೆಂದು ಸಾರಲಾಗಿದೆ.

ಗ್ರೀಕ್ ದಂಗೆಗಾರರ ಮುಖಂಡನು ಅಲ್ಲಿಯ ಸರಕಾರದೊಡನೆ ರಾಜಿಯನ್ನು ಮಾಡಿಕೊಳ್ಳಲು ತಾನು ಸಿದ್ಧನಿರುವುದಾಗಿ ಸಂ. ರಾ. ಸಂಘಕ್ಕೆ ವರದಿ ಮಾಡಿದ್ದಾನೆ. ಭದ್ರತಾ ಮಂಡಲದಲ್ಲಿ ಹೇಳಿಕೆ ಕೊಡಲು ತನ್ನ ಪ್ರತಿನಿಧಿಗೆ ಅವಕಾಶ ಕೊಡಬೇಕೆಂದು ಅವನು ಕೇಳಿಕೊಂಡಿದ್ದಾನೆ. ಆದರೆ ಗ್ರೀಸಿನ ವಿದೇಶ ಮಂತ್ರಿ ಯಾವ ಮಾತುಕತೆಗೂ ಅವಕಾಶವಿಲ್ಲೆಂದು ಸಾರಿದ್ದಾನೆ.

ಬ್ರಹ್ಮದೇಶದ ಇನ್‌ಸೀನಿನ ರಣರಂಗದಲ್ಲಿ ಇನ್ನೂ ೩೦೦೦ ಹಿಂದೀಯರು ಸಿಕ್ಕಿಬಿದ್ದಾಡುತ್ತಿದ್ದಾರೆ. ದಂಗೆಗಾರರಿಗೂ ಸರಕಾರೀ ದಲಗಳಿಗೂ ಕದನ ನಡೆದೇ ಇದೆ.

ಕಾಮನ್‌ವೆಲ್ತಿನ ಪರಿಷತ್ತಿನಲ್ಲಿ ಪಂಡಿತ ನೆಹರು ಒಂದು ದೊಡ್ಡ ವಿಜಯವನ್ನು ಸಂಪಾದಿಸಿದರೆಂದು ಬ್ರಿಟೀ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಅಂತಾರಾಷ್ಟ್ರೀಯ ನಿಧಿಯವರು ತಮ್ಮ ದೂರಪ್ರಾಚ್ಯದ ಶಾಖೆಯನ್ನು ಸಧ್ಯದಲ್ಲೇ ಮುಂಬಯಿಯಲ್ಲಿ ತೆರೆಯಲಿದ್ದಾರೆ. ಹಿಂದ- ಹಿಂದೀ ರಿಜರ್ವ ಬ್ಯಾಂಕಿನಲ್ಲಿದ್ದ ಶ್ರೀ ಬಿ. ಆರ್. ಶೆಣೈ ಅವರು ಅದರ ಮುಖ್ಯಾಧಿಕಾರಿಯಾಗುವರು.

ಭದ್ರತಾಮಂಡಲದ ಮುಂದೆ ಮತ್ತೆ ಹೈದರಾಬಾದಿನ ಪ್ರಶ್ನೆಯನ್ನು ಎತ್ತಲು ಸರ್ ಎಂ. ಜಾಫರುಲ್ಲಾಖಾನರು ಬಯಸಿರುವುದು ಸುವೇದ್ಯವಿದೆ. ಆದರೆ ಇತ್ತೀಚೆಗೆ ಜಯಪ್ರದವಾಗಿ ಕಾಮನ್‌ವೆಲ್ತ್ ಪರಿಷತ್ತು ಕೊನೆಗಂಡಿರುವಾಗ ಭಾರತದ ಅಂತಾರಾಷ್ಟ್ರೀಯ ಪ್ರತಿಷ್ಠೆಯನ್ನು ಭಂಗಗೊಳಿಸಲು ಗುರಿಹೂಡಿದ ಸರ್ ಜಾಫರುಲ್ಲಾರ ಈ ಪ್ರಯತ್ನವನ್ನು ಭದ್ರತಾಮಂಡಲದ ಸದಸ್ಯರು ಮೆಚ್ಚುವುದಿಲ್ಲ ಎಂದು ಸುದ್ದಿಗಾರರೊಬ್ಬರ ವರದಿ ಬಂದಿದೆ.

ಪ್ಯಾರಿಸ್ಸಿನಲ್ಲಿ ನಡೆಯಲಿರುವ ಚತುರಾಷ್ಟ್ರ ವಿದೇಶ ಮಂತ್ರಿ ಸಮ್ಮೇಳನದೆದುರು ಪಶ್ಚಿಮ ಜರ್ಮನಿಯ ಘಟನಾ ಸಭೆಯೊಡನೆ ಸಹಕರಿಸಿ ಕೆಲಸ ಮಾಡುವ ಯೋಜನೆಯೊಂದನ್ನು ಜರ್ಮನಿಯ ಏಕೀಕರಣದ ದೃಷ್ಟಿಯಿಂದ ತಯಾರಿಸಿ ಇಡಲು ಸಿದ್ಧವಿರುವುದಾಗಿ "ಜರ್ಮನ್ ಪೀಪಲ್ಸ್ ಕೌನ್ಸಿಲ್" ಎಂಬ ಸಂಸ್ಥೆ ಸಾರಿದೆ.

ಅಮೇರಿಕದಿಂದ ಮದ್ದು ಗುಂಡು, ಟ್ಯಾಂಕು, ವಿಮಾನ ಮುಂತಾದ ಯುದ್ಧೋಪಕರಣಗಳನ್ನು ತರಿಸಲು ಹಿಂದೀ ಸೈನ್ಯಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಹಿಂದೀ ಸಂರಕ್ಷಣ ಶಾಖೆಯ ಕಾರ್ಯದರ್ಶಿ ಶ್ರೀ ಎಚ್. ಎಂ. ಪಟೇಲರು ಅಮೇರಿಕಕ್ಕೆ ಭೆಟ್ಟಿಯಿತ್ತುದರ ಕಾರಣಗಳಲ್ಲಿ ಇದೂ ಒಂದು ಎಂದು ತಿಳಿಯುತ್ತದೆ.

ಗ್ರೀನ್‌ಲೆಂಡಿಗೆ ಹೆಚ್ಚು ಸೈನ್ಯ ಬಲವನ್ನು ಅಮೇರಿಕ ಕಳಿಸುತ್ತಿರುವುದಾಗಿ ಲಂಡನ್ನಿನಲ್ಲಿ ತಿಳಿದು ಬಂದಿದೆ. ಅದನ್ನು ಅಮೇರಿಕ ೧೯೪೦ರಲ್ಲಿ ಆಕ್ರಮಿಸಿ ಅಂದಿನಿಂದ ಇಂದಿನ ವರೆಗೆ ತನ್ನ ವಶದಲ್ಲಿ ಇಟ್ಟುಕೊಂಡಿದೆ.

ಹಿಂದಿನ ಚಕ್ರವರ್ತಿ ಬಾವುದಾಯಿ ಇತ್ತೀಚೆಗೆ ಫ್ರಾನ್ಸಿನಿಂದ ಇಂಡೋಚೀನಕ್ಕೆ ಬಂದಿದ್ದಾರೆ. ಫ್ರೆಂಚರೊಡನೆ ಮಾಡಿಕೊಂಡಿರುವ ಕರಾರಿನಂತೆ ಅವರು ವೀಟನಾಮಿನ ನೂತನ ಸಂಸ್ಥಾನದ ಪ್ರಮುಖರಾಗಲಿದ್ದಾರೆ. ಉತ್ತರ ವಿಟನಾಮಿನ ಇಂಡೋಚೀನೀ ನ್ಯಾಯ ನ್ಯಾಯಾಲಯ ಅವರನ್ನು ದೇಶದ್ರೋಹದ ಆರೋಪದ ಮೇಲೆ ... ಕಳಿಸಿದೆ.

ಸಂ. ರಾ. ಸಂಘದ ರಾಜಕೀಯ ಸಮಿತಿಯು ತನ್ನ ಸದಸ್ಯರಿಗೆ ತಮ್ಮ ರಾಜತಾಂತ್ರಿಕ ಸಂಬಂಧವನ್ನು ಸ್ಪೇನಿನೊಡನೆ ಬೇಕಾದ ಹಾಗೆ ಇಟ್ಟುಕೊಳ್ಳುವ ಸ್ವಾತಂತ್ರ್ಯವಿದೆ ಎಂದು ತೀರ್ಮಾನಿಸಿತು.

ನೌಖಾಲಿಯಲ್ಲಿಯ ಗಾಂಧೀಶಾಂತಿದೌತ್ಯ

೧೯೪೬ ರಲ್ಲಿ ಗಾಂಧಿಯವರು "ಮಾಡು ಇಲ್ಲವೆ ಮಡಿ" ಎಂಬ ಪವಿತ್ರೋದ್ದೇಶದಿಂದ ನೌಖಾಲಿಗೆ ಹೋದಾಗ ಅಲ್ಲಿಯ ಅಲ್ಪಸಂಖ್ಯರ ಜಾತಿಯು ದಿಕ್ಕೆಟ್ಟು ಹೋಗಿತ್ತು ಮತ್ತು ಅಲ್ಲಿಂದ ಹೊರಟು ಹೋಗಲು ಉತ್ಸುಕವಾಗಿತ್ತು. ಆ ಅಲ್ಪಸಂಖ್ಯರ ನಿರ್ಗಮನವನ್ನು ತಡೆಯಲು ಮತ್ತು ಅವರ ಮೊದಲಿನ ಮನೆಗಳಲ್ಲಿ ಅವರನ್ನು ಪುನಃ ಹೋಗಿ ವಾಸಿಸುವಂತೆ ಮಾಡಲು, ಮುಸಲ್ಮಾನರೂ ಹಿಂದುಗಳೂ ಪರಸ್ಪರರನ್ನು ಗೌರವಿಸಿ ರಕ್ತಸಂಬಂಧದ ಅಣ್ಣತಮ್ಮಂದಿರಂತೆ ಪ್ರೀತಿ ಮತ್ತು ಸ್ನೇಹಗಳಿಂದ ಒಟ್ಟಿಗೆ ಇರುವಂತಾಗುವ ವರೆಗೆ ತಾವು ಅಲ್ಲಿಂದ ಹೊರಡುವದಿಲ್ಲವೆಂದು ಗಾಂಧಿಯವರು ಪ್ರತಿಜ್ಞೆ ಮಾಡಿದರು. ಅಲ್ಪಸಂಖ್ಯಜಾತಿಯ ಎಲ್ಲರೂ ಭಯದಿಂದ ಊರುಬಿಟ್ಟು ಓಡಿ ಹೋದರೂ ಒಬ್ಬನೇ ಒಬ್ಬ ವ್ಯಕ್ತಿಯು ತನ್ನ ದೈವಭಕ್ತಿಯ ಬಲದಿಂದ ಸ್ವಾಭಿಮಾನಿಯಾಗಿ ಸ್ವಧರ್ಮಾಚರಣೆಯನ್ನು ಸ್ವತಂತ್ರವಾಗಿ ಮಾಡುತ್ತ ಹೇಗೆ ಅಲ್ಲಿ ಬಾಳಬಲ್ಲನು ಎಂಬುದನ್ನು ತೋರಿಸುವದರ ಸಲುವಾಗಿ ಅಲ್ಲಿ ತಾವೊಬ್ಬರೇ ಉಳಿಯುವದಾಗಿ ಅವರು ಸಾರಿದರು. ಅವರ ಇರುವಿಕೆ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಸಮತ್ವಕ್ಕೆ ತರಲು ಕಾರಣವಾಯಿತು. ಆದರೆ ತಮ್ಮ ಕಾರ್ಯ ಮುಗಿಯುವದರೊಳಗೇ ಅವರು ಬಿಹಾರಕ್ಕೆ ಹೋಗಬೇಕಾಯಿತು. ತಾವು ನೌಖಾಲಿಯಲ್ಲಿ ಹಿಂದು ಅಲ್ಪಸಂಖ್ಯರಿಗೆ ಏನು ಮಾಡಿದರೋ ಅದನ್ನು ಬಿಹಾರದಲ್ಲಿ ಮುಸಲ್ಮಾನ ಅಲ್ಪಸಂಖ್ಯರಿಗೆ ಮಾಡಬೇಕಾಗಿ ಬಂದಿತು. ಬಿಹಾರದಿಂದ ಅವರು ದಿಲ್ಲಿಗೆ ಸಾಗಿದರು. ನೌಖಾಲಿಯನ್ನು ಬಿಡುವುದರ ಮೊದಲು ನೌಖಾಲಿಯಲ್ಲಿ ಮತ್ತೆ ಗಲಭೆ ಪ್ರಾರಂಭವಾದುದೇ ಆದರೆ ತಾವು ಆಮರಣ ಉಪವಾಸವನ್ನು ಕೈಕೊಳ್ಳುತ್ತೇವೆ ಎಂದು ಸಾರ್ವಜನಿಕವಾಗಿ ಘೋಷಿಸಿ ತಮ್ಮ ಶಾಂತಿದೌತ್ಯದ ಸದಸ್ಯರಿಗೆ ತಮ್ಮ ಪ್ರತಿಜ್ಞೆಯನ್ನು ತಾವಿಲ್ಲವಾಗ ಪೂರೈಸಲು ಹೇಳಿದರು. ಪೂರ್ವ ಬಂಗಾಲದವರಾದ, ಅಹಿಂಸೆಯಲ್ಲಿ ಸಂಪೂರ್ಣ ಶ್ರದ್ಧೆಯುಳ್ಳ ಮತ್ತು ನೌಖಾಲಿಯ ಗಾಂಧೀ ಶಿಬಿರಗಳ ಆಡಳಿತೆಗಾರರಾಗಿದ್ದ ಶ್ರೀ ಸತೀಶ ಚಂದ್ರದಾಸಗುಪ್ತರಿಗೆ ಕಾಜಿರಖಿಲ್ಲನ್ನು ಕೇಂದ್ರವನ್ನಾಗಿ ಮಾಡಿಕೊಂಡು ಸರಕಾರದೊಡನೆ ತಮ್ಮ ಪ್ರತಿನಿಧಿಯಾಗಿ ವ್ಯವಹರಿಸಲು ಅವರು ನಿಯಮಿಸಿದರು.

ಗಾಂಧಿಯವರು ನೌಖಾಲಿಗೆ ಮೂರು ವಾರಗಳಲ್ಲಿ ಹಿಂದಿರುಗಬೇಕಾಗಿತ್ತು. ಆದರೆ ದೇವರ ಇಚ್ಛೆ ಬೇರೆಯಾಗಿತ್ತು. ದಿಲ್ಲಿಯಲ್ಲಿ ತಾವು ಮಾಡಬೇಕು ಇಲ್ಲವೆ ಮಡಿಯಬೇಕು ಎಂಬ ಪರಿಸ್ಥಿತಿಯುಂಟಾಗಿದೆ, ಅದರಿಂದ ನೌಖಾಲಿಯಲ್ಲಿ ತಾವು ನಿಯಮಿಸಿದ ಜನರು ತಂತಮ್ಮ ನಿಯುಕ್ತ ಕಾರ್ಯದಲ್ಲಿ ಅದೇ ಮೇರೆಗೆ ಮಾಡಬೇಕು ಇಲ್ಲವೆ ಮಡಿಯಬೇಕು, ಎಂದು ಗಾಂಧಿಯವರು ದಿಲ್ಲಿಯಿಂದ ಪತ್ರ ಬರೆದರು. ಅವರು ೧೯೪೮ ರ ಜನವರಿ ೩೦ ರಲ್ಲಿ ಅಂತರ್ಜಾತೀಯ ಮತ್ತು ಅಂತರಾಧಿರಾಜ್ಯಕ ವೇದಿಕೆಯಲ್ಲಿ ಕೊಟ್ಟ ಕಟ್ಟಕಡೆಯ ಆಹುತಿ ಆ ಪವಿತ್ರ ಆದೇಶಕ್ಕೆ ಕೊನೆಯ ಮುದ್ರೆಯನ್ನೊತ್ತಿತು.

ಗಾಂಧೀಶಿಬಿರವು ಮುಖ್ಯವಾಗಿ ಎರಡೂ ಜಾತಿಗಳ ಸೇವೆಯ ಸಲುವಾಗಿ ಮಾಡುವ ರಚನಾತ್ಮಕ ಕಾರ್ಯಗಳ ಮೂಲಕ ತನ್ನ ಕೈಯಲ್ಲಾದಷ್ಟುಮಟ್ಟಿಗೆ ಆ ಪವಿತ್ರೋದ್ದೇಶವನ್ನು ಸಾಧಿಸಲು ಪ್ರಯತ್ನಿಸುತ್ತ ಬಂದಿದೆ. ಶಿಬಿರದಲ್ಲಿ ೨೨ಶಾಖೆಗಳೂ ಸುಮಾರು ೩೫ ಕೆಲಸಗಾರರೂ ಇದ್ದಾರೆ. ಸುಮಾರು ೫-೬ ಜನರನ್ನು ಬಿಟ್ಟರೆ ಅವರಲ್ಲಿಯ ಎಲ್ಲರೂ ಪೂರ್ವ ಬಂಗಾಲದವರೇ ಆಗಿದ್ದಾರೆ. ಅವರೆಲ್ಲರೂ ಮನೋವಾಕ್ಕಾಯಗಳಿಂದ ಅಹಿಂಸಾ ಪ್ರತಿಜ್ಞೆಯನ್ನು ಸ್ವೀಕರಿಸಿದವರೇ ಇದ್ದಾರೆ ಮತ್ತು ಹಿಂದು ಮುಸಲ್ಮಾನರ ಐಕ್ಯದಲ್ಲಿ, ಹಿಂದು ಧರ್ಮದಿಂದ ಸಂಪೂರ್ಣವಾಗಿ ಅಸ್ಪೃಶ್ಯತೆಯನ್ನು ಹೊಡೆದೋಡಿಸುವುದರಲ್ಲಿ ಮತ್ತು ನಿರ್ಭೇದ ಬುದ್ಧಿಯಿಂದ ಎಲ್ಲರಿಗೂ ನಿಃಸ್ವಾರ್ಥ ಸೇವೆ ಸಲ್ಲಿಸುವುದ'ಲ್ಲಿ ಅವರು ನಂಬಿಗೆಯುಳ್ಳವರಾಗಿರಬೇಕು. ಗಾಂಧಿಯವರಿಗೆ ಅವರ ನೌಖಾಲಿದೌತ್ಯಕ್ಕೆ ನೇರವಾಗಿ ಐಚ್ಛಿಕ ದಾನ ರೂಪದಿಂದ ಬಂದ ಸುಮಾರು ೪॥ ಲಕ್ಷ ರೂಪಾಯಿಗಳ ನಿಧಿಯಿಂದಲೇ ಅವರ ಖರ್ಚು ವೆಚ್ಚಗಳು ಸಾಗುತ್ತಿವೆ. ಗಾಂಧಿಯವರ ಮರಣಾನಂತರ ೫೦ ಸಾವಿರಕ್ಕಿಂತ ಸ್ವಲ್ಪ ಹೆಚ್ಚಾಗುವಷ್ಟು ಹಣವೂ ಕೆಲ ಭೂಮಿಕಾಣಿಗಳೂ ಉದಾರ ದಾನವಾಗಿ ಬಂದಿವೆ.

ಶಿಬಿರದ ಸದಸ್ಯತ್ವವನ್ನು ಜಾತಿ, ಧರ್ಮ, ಬಣ್ಣಗಳ ಭೇದವಿಲ್ಲದೆ ಎಲ್ಲರಿಗೂ ತೆರೆದಿಡಲಾಗಿದೆ. ಅದಕ್ಕೆ ಮುಸಲ್ಮಾನ ಸದಸ್ಯರೂ ಸ್ನೇಹಿತರೂ ಇದ್ದಾರೆ. ಅವರ ಸಂಖ್ಯೆ ಬೆಳೆಯುತ್ತಲೇ ಇತ್ತು. ಆದರೆ ಏತನ್ಮಧ್ಯೆ ಶಿಬಿರಕ್ಕೂ ಶಿಬಿರದ ಚಟುವಟಿಕೆಗಳಿಗೂ ಶತ್ರುವಾದ ಒಂದು ಪ್ರತೀಕಾರಬುದ್ಧಿಯ ಗುಂಪಿನ ಜನರ ಬೆದರಿಕೆ, ಪ್ರಾಯಶ್ಚಿತ್ತದಂಡ ಮತ್ತು ಸಾಮಾಜಿಕ ಒತ್ತಾಯಗಳ ಫಲವಾಗಿ ಅವರು ತಮ್ಮ ಸದಸ್ಯತ್ವವನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದಿತು. ತನ್ನ ಮೌಲಿಕವಾದ ಅಹಿಂಸಾತತ್ವಕ್ಕೆ ವಿರುದ್ಧವೆಂದು ತಿಳಿದು ಶಿಬಿರವು ಗೌಪ್ಯಕ್ಕೆ ಎಡೆಗೊಡುವದಿಲ್ಲ. ಅದರ ಕಚೇರಿಯ ಕಾಗದ ಪತ್ರಗಳೂ ಲೆಕ್ಕದ ಪುಸ್ತಕಗಳೂ ಪರೀಕ್ಷಣೆಗಾಗಿ ತೆರೆದಿವೆ. ತನ್ನ ಸೇವೆಯನ್ನು ಸರಕಾರಕ್ಕೆ ವಶಪಡಿಸಿದ ಅದು ಸರಕಾರದೊಡನೆ ಅತಿನಿಕಟ ಸಹಕಾರ ಮತ್ತು ಸಹಭಾಗಿತ್ವಗಳಿಂದ ನಡೆಯಲು ಸದಾ ಸಿದ್ಧವಿದೆ. ಶಿಬಿರದ ಇಬ್ಬರು ಸದಸ್ಯರಾದ ಶ್ರೀಗಳಾದ ಸತೀಶಚಂದ್ರ ದಾಸಗುಪ್ತ ಮತ್ತು ಚಾರು ಚೌಧರಿಯವರನ್ನು ಗೃಹೋದ್ಯಮ ವರ್ಧನ ಸಮಿತಿಗಳಿಗೂ ಪ್ರಾಂತಿಕ ಮತ್ತು ಜಿಲ್ಲಾ ಅಲ್ಪಸಂಖ್ಯರ ಸಂಘಕ್ಕೂ ಸದಸ್ಯರನ್ನಾಗಿ ಸರಕಾರ ತೆಗೆದುಕೊಂಡಿದೆ.

ಶಿಬಿರ ಸಂಘಟಿಸಿದ ಕಾರ್ಯಗಳಲ್ಲಿ ವಸ್ತ್ರದ ಕೊರತೆಯನ್ನು ನೀಗಿಸಲು ನೂಲುವದು ನೇಯುವದು ಮತ್ತು ಅದಕ್ಕೆ ಸಂಬಂಧಿಸಿದ ಇತರ ಕೆಲಸಗಳಲ್ಲಿ ತರಬೇತು ಕೊಡುವದು ಮುಖ್ಯವಾದವು. ಹಿಂಜುವದು, ನೂಲುವದು ಮತ್ತು ನೇಯುವುದು ಇವನ್ನು ಸುಮಾರು ೨೦೦೦ ಸ್ತ್ರೀ ಪುರುಷರಿಗೆ ಶಿಬಿರವು ತನ್ನ ಶಾಖೆಗಳ ಮೂಲಕ ಕಲಿಸಿದೆ. ಶಿಬಿರದ ಮೇಲ್ವಿಚಾರಣೆಯಲ್ಲಿ ಅವರಲ್ಲಿ, ಅನೇಕರು ಕಡೆಯ ಪಕ್ಷ ತಂತಮ್ಮ ಬಳಕೆಗೆಂದಾದರೂ ಒಂದೊಂದು ಜೊತೆ ಧೋತ್ರ ಅಥವಾ ಸೀರೆಯನ್ನು ತಯಾರಿಸಿದ್ದಾರೆ. ಕಾಜಿರ್‌ಖಿಲ್ಲಿನಲ್ಲಿ ಅದು ಸುಲಭದರದ ಸ್ಥಳೀಯ ನೂಲುವ ಮತ್ತು ಹಿಂಜುವ ಉಪಕರಣಗಳ ಸಂಶೋಧನೆ ಮತ್ತು ತಯಾರಿಕೆಗಾಗಿಯೂ ಒಂದು ಸಂಸ್ಥೆಯನ್ನು ಸ್ಥಾಪಿಸಿದೆ ಎಲ್ಲರಿಗಿಂತ ಮೊದಲು ಅದು ಮೂಲ ಶಿಕ್ಷಣ ಪ್ರಸಾರವನ್ನು ಕೈಗೊಂಡಿತು, ಅದು ಜನಪ್ರಿಯವಾಗುತ್ತಲೂ ನಡೆಯಿತು; ಆದರೆ ಸ್ಥಳೀಯ ಸ್ವಾರ್ಥಿಗಳ ಪ್ರಚಾರ, ಸಾಮಾಜಿಕ ಒತ್ತಾಯ ಮತ್ತು ಭಯಪ್ರದರ್ಶನಗಳದೆಸೆಯಿಂದ ಶಾಲೆಗಳಿಗೆ ಬರುವ ಹುಡುಗರ ಸಂಖ್ಯೆ ಇಳಿಯಲಾರಂಭಿಸಿತು. ರಸ್ತೆ, ಸಂಕಗಳ (ಪೂಲುಗಳ) ರಚನೆ ಮತ್ತು ದುರಸ್ತುಗಳಿಗಾಗಿ, ಕೆರೆ ಕಾಲುವೆಗಳಲ್ಲಿಯ ಕೊಳಚೆ ಹೂವಿನ ಗಿಡಗಳನ್ನು ಕಿತ್ತು ಚೊಕ್ಕ ಮಾಡಲು ಮತ್ತು ಉಚಿತ ಬೀಜವಿತರಣದ ಮೂಲಕ ಸರಕಾರಿ ಮತ್ತು ಆಹಾರಪದಾರ್ಥಗಳನ್ನು ಬೆಳೆಯಲು ಮುಖ್ಯವಾಗಿ ಸ್ವಯಂಪ್ರವೃತ್ತಿಯಿಂದ ಹಿಂದುಮುಸಲ್ಮಾನರ ಸಂಯುಕ್ತ ಪ್ರಯತ್ನವನ್ನು ಅದು ಜಯಪ್ರದವಾಗಿ ಸಂಘಟಿಸಿತು. ಶುಶ್ರೂಷಾಪಥಕಗಳ ನೆರವಿನಿಂದ ಕಾಜಿರಖಿಲ್, ಭಾಟಿಯಾಲ್ಪುರ, ಮೊಗರಪಾರ, ಕಾರ್ಪ್ಪರ್ ಮತ್ತು ಗೋಪೈರ್‌ಬಾಗುಗಳಲ್ಲಿ ಮಕ್ಕಳಿಗೆ, ರೋಗಿಗಳಿಗೆ ಮತ್ತು ಬಸುರಿ ಬಾಣಂತಿಯರಿಗೆ ಹಾಲುಪುಡಿಯನ್ನು ಒದಗಿಸಲು ಹಾಲಿನ ಅರವಟ್ಟಿಗೆಗಳನ್ನು ಅದು ಸ್ಥಾಪಿಸಿತು. ಉಭಯ ಜಾತಿಯ ಬಡವರಿಗೂ ವೈದ್ಯಕೀಯ ಸಹಾಯವನ್ನೊದಗಿಸಲು ಬಹಳ ಮೊದಲೇ ಕಾಜಿರಖಿಲ್, ಭಾಟಿಯಾಲ್ಪುರ ಮತ್ತು ಚಂಗರಗಾವಗಳಲ್ಲಿ ಆಸ್ಪತ್ರೆಗಳನ್ನು ಆರಂಭಿಸಲಾಯಿತು. ಶಿಬಿರವು ಒಟ್ಟು ೨೦೦೦ ಕ್ಕಿಂತ ಹೆಚ್ಚು ಸದಸ್ಯರಿರುವ ಒಂದು ನೇಕಾರರ ಸಹಕಾರ ಸಂಘವನ್ನು ಸಂಘಟಿಸಿದೆ. ಕಷ್ಟಕಾಲದಲ್ಲಿ ಬತ್ತ ಕುಟ್ಟುವದು, ಕೊಬ್ಬರಿಯೆಣ್ಣೆ ತೆಗೆಯುವದು "ಶಾಟಿ" ಪುಡಿಯನ್ನು ತಯಾರಿಸುವದು, ಸರಕಾರದ ಸಹಾಯ ಪಡೆದು ಅಗ್ಗದರಕ್ಕೆ ನೂಲುವದು ಮತ್ತು ನೇಯುವದು ಮುಂತಾದ ಕೆಲಸಗಳಿಂದ ಆ.. ಬಡವರಿಗೆ ಸಹಾಯಮಾಡಿತು. ಹಿಂದುಗಳಲ್ಲಿ ಯಾವ ರೂಪದ ಅಸ್ಪೃಶ್ಯತೆಯೂ ಇರದಂತೆ ಮಾಡುವದಕ್ಕೆ ಹೆಚ್ಚಿನ ಪ್ರಾಮುಖ್ಯ ಕೊಟ್ಟು ಅವರಲ್ಲಿ ವೈಯಕ್ತಿಕ ಉದಾಹರಣೆಗಳ ಮೂಲಕ ಮತ್ತು ಸಾಮೂಹಿಕ ಪ್ರಾರ್ಥನಾ ಸಂಘಟನೆಯ ಮೂಲಕ ಅಹಿಂಸಾತ್ಮಕ ಧೈರ್ಯವನ್ನು ಬೆಳೆಸಲು ಮತ್ತು ಇತರ ಉಪಕಾರಗಳನ್ನು ಮಾಡಲು ಯತ್ನಿಸಿ ಅಲ್ಪಸಂಖ್ಯ ಜಾತಿಯ ಸಾಮಾಜಿಕ ಮತ್ತು ನೈತಿಕ ಏಳಿಗೆಗಾಗಿ ಅದು ದುಡಿಯುತ್ತಿದೆ.

ಮೊದಲು ಶಿಬಿರದಲ್ಲಿ ಗಾಂಧಿಯವರು ಮತ್ತು ಸಹಿತಲಾಬುಗಳ ಜೊತೆಗೆ ಬಂದವರು ಕೆಲಸ ಮಾಡುತ್ತಿದ್ದರು; ಅನಂತರ ಬಂಗಾಲೀ ಸರಕಾರದ ಅನುಜ್ಞೆ ಮತ್ತು ಅನುಮತಿಗಳನ್ನು ಪಡೆದು ಬಂದವರೂ ಸೇರಿಕೊಂಡರು. ಭಾರತದ ವಿಚ್ಛೇದನವಾದ ಮೇಲೂ ಅದರ ರೂಪಗುಣಗಳು ಒಂದೇ ತೆರನಾಗಿ ಉಳಿದವು. ಭಾರತ ಪಾಕಿಸ್ತಾನಗಳೆರಡರ ಸ್ತ್ರೀಪುರುಷರೂ ಶಿಬಿರದಲ್ಲಿ ಕೆಲಸ ಮಾಡುತ್ತಿದ್ದಾರೆ. ನೌಖಾಲಿಯ ಶಾಂತಿದೌತ್ಯವನ್ನು ಒಂದು ಅಂಗವಾಗಿ ಉಳ್ಳ ಗಾಂಧೀ ಶಾಂತಿದೌತ್ಯದ ಕೆಲಸಗಾರರು ಭಾರತದಲ್ಲೂ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಬಹುದು. ಹೀಗೆ ತನ್ನ ರಚನೆ, ಚರಿತ್ರೆ ಮತ್ತು ಕಾರ್ಯಗಳ ರೀತಿ ಮತ್ತು ತಾನು ನಿಲ್ಲಿಸಲು ಪ್ರತಿಜ್ಞೆ ಮಾಡಿದ ಅಲ್ಪಸಂಖ್ಯರ ನಿರ್ಗಮನ, ಇವುಗಳ ಮೂಲಕ ಉಂಟಾದ ಅಂತರಾಧಿರಾಜ್ಯಕ ಪರಿಣಾಮಕತೆಯ ದೆಸೆಯಿಂದ ಶಿಬಿರವು ಅಂತರಾಧಿರಾಜ್ಯಕ ಲಕ್ಷಣವನ್ನು ಹೊಂದಿದೆ.

ಶಿಬಿರವು ರಾಜಕಾರಣವನ್ನು ಹೊರಗಿರಿಸಿದೆ. ಅದು ಅಂತರಾಧಿರಾಜ್ಯಕ ಸ್ನೇಹ ಮತ್ತು ಜಾತೀಯ ಸಾಮಂಜಸ್ಯಗಳನ್ನು ನಂಬುತ್ತದೆ. ಪಾಕಿಸ್ತಾನದ ಅಲ್ಪಸಂಖ್ಯರಿಗೆ ಪಾಕಿಸ್ತಾನ ಎಷ್ಟರಮಟ್ಟಿಗೆ ಬಹುಸಂಖ್ಯರದ್ದೋ ಅಷ್ಟೇ ನಿಮ್ಮದೂ ಆಗಿದೆಯೆಂದೂ ಅದರಿಂದ ಅದಕ್ಕೆ ನೀವು ನಿಷ್ಠರಾಗಿ ನಡೆದುಕೊಳ್ಳಬೇಕೆಂದೂ ಅದುಹೇಳುತ್ತದೆ. ಮಿಕ್ಕವರೊಡನೆ ನಿಮಗೂ ಸಮಾನವಾದ ಹಕ್ಕುಗಳು ಬೇಕೆಂದಿದ್ದರೆ ನೀವು ಸರಕಾರಕ್ಕೆ ಪರಸ್ಪರವಾದ ಕರ್ತವ್ಯ ಮತ್ತು ಋಣಗಳನ್ನು ಸಲ್ಲಿಸಬೇಕು ಎಂದೂ ಅದು ಅವರಿಗೆ ಹೇಳಿದೆ; ಏಕೆಂದರೆ, ಪ್ರತಿಯೊಂದು ಹಕ್ಕೂ ಅದಕ್ಕೆ ಪ್ರತಿಯಾದ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿದ್ದರಿಂದಲೇ ಲಭ್ಯವಾಗುತ್ತದೆ. ಸರಕಾರ, ಅದರ ಅಧಿಕಾರಿಗಳು ಅಥವಾ ಸ್ಥಳೀಯ ಸ್ವಾರ್ಥಿಗಳು, ಇವರು ದುಷ್ಕಾರ್ಯದಲ್ಲಿ ಯಾವ ರೀತಿಯಲ್ಲೇ ಆಗಲಿ, ಅವರು ಭಾಗಿಗಳಾಗಬೇಕೆಂಬುದು ಇದರ ಅರ್ಥವಲ್ಲ. ಆದರೆ ಪಾಕಿಸ್ತಾನದ ಪ್ರಜೆಗಳಾಗಿರುವ ಅವರು ತಮ್ಮ ಕಷ್ಟಗಳ ಪರಿಹಾರಕ್ಕಾಗಿ ಪಾಕಿಸ್ತಾನ ಸರಕಾರಕ್ಕಲ್ಲದೆ ಭಾರತ ಸರಕಾರಕ್ಕೆ ಅಥವಾ ಹೊರಗಿನ ಇತರ ದೇಶಗಳ ಸರಕಾರಗಳಿಗೆ ಶರಣು ಹೋಗಬಾರದು. ಪಾಕಿಸ್ತಾನದ ಪ್ರಜೆಗಳಾದ ಅವರಿಗೆ ಆ ಸರಕಾರ ತಪ್ಪು ಮಾಡಿದರೆ ಅದರೊಡನೆ ಜಗಳಾಡುವ ಹಕ್ಕುಂಟು. ಆದರೆ ಅವರ ಜಗಳದ ಬಗೆ ಕೇವಲ ಗೃಹಕಲಹದ ಸ್ವರೂಪದ್ದಾಗಿಯೇ ಇರಬೇಕು.

ಸಂಖ್ಯೆಯ ಕೀಳ್ಮೆಯ ದೆಸೆಯಿಂದ ಅಲ್ಪಸಂಖ್ಯರು ಪಾಕಿಸ್ತಾನದಲ್ಲಿಯ ತಮ್ಮ ಭವಿತವ್ಯದ ಬಗ್ಗೆ ನಿರಾಶರಾಗಬೇಕಾಗಿಲ್ಲ. ಪ್ರತಿಭಾಸಂಪನ್ನ ಅಲ್ಪಸಂಖ್ಯರು ರಾಜ್ಯದಲ್ಲಿ ಪ್ರಗತಿಯ ಮುಂದಲವೆನಿಸಿ ಆ ರೀತಿ ಮನ್ನಣೆ ಪಡೆದದ್ದಕ್ಕೆ ಇತಿಹಾಸ ಹಲವು ಪ್ರಸಿದ್ಧ ನಿದರ್ಶನಗಳನ್ನು ಕೊಡುತ್ತದೆ. ಉದಾ- ಬ್ರಿಟಿಶರ ರಾಜ್ಯದಲ್ಲಿ ಸ್ಕಾಟ್ಲಿಂಡಿನವರು; ಹತ್ತಿರದಲ್ಲೇ ನೋಡಬೇಕಾದರೆ, ಭಾರತದಲ್ಲಿಯ ಪಾರಸೀ ಜಾತಿ. ತಮ್ಮ ಉದ್ಯಮಶೀಲತೆ, ಜ್ಞಾನ, ಕೌಶಲ, ಸತ್ಯಸಂಧತೆ, ಪ್ರಾಮಾಣಿಕತೆ ಮತ್ತು ನಿಃಸ್ವಾರ್ಥ ಬುದ್ಧಿಗಳಿಂದ ಅವರು ಪ್ರಸಿದ್ಧರಾದರೆ ಅವರು ರಾಜ್ಯದ ಒಂದು ಬೆಲೆಬಾಳುವ ಆಸ್ತಿಯೆನಿಸಿ, ಅವರು ಸರಕಾರವನ್ನು ಒಲಿಸಹೋಗುವುದರ ಬದಲು ಅವರನ್ನೇ ಒಲಿಸಿಕೊಳ್ಳಲು ಸರಕಾರ ಬರುವಂತಾಗುವುದು. ಅದುಪರಿಂದ ಅವರ ಭವಿತವ್ಯವು ಬಹಳ ಮಟ್ಟಿಗೆ ಅವರನ್ನೇ ಅವಲಂಬಿಸಿದೆ.

ತನ್ನ ಅಹಿಂಸೆ, ಮಾಡಿದ ನಿಃಸ್ವಾರ್ಥಸೇವೆ ಮತ್ತು ನಿಷ್ಪಾಪಬುದ್ಧಿಯಿಂದ ಅಪ್ಪವನ್ನು ಸಹಿಸಿಕೊಳ್ಳುವುದು ಇವುಗಳಿಂದ ಏನು ದೊರೆಯ ಬಹುದೋ ಅವಲ್ಲದೆ ಇನ್ನಾವುದನ್ನೂ ರಕ್ಷಣೆಗಾಗಿ ಶಿಬಿರವು ಅಪೇಕ್ಷಿಸುವುದಿಲ್ಲ. ಅದಕ್ಕೆ ಒಂದೇ ಒಂದು ಮಹತ್ವಾಕಾಂಕ್ಷೆ, ಗುರಿ ಇದೆ; ಅದೆಂದರೆ, ಗಾಂಧಿಯವರ ಪ್ರತಿಜ್ಞೆಯನ್ನು ಪೂರಯಿಸುವುದು; ಮತ್ತು ತನಗೆ ಜೊತೆ

[illegible]

ತಪ್ಪು ಭಾವನೆ

[illegible] ಉದ್ದೇಶ ಗಾಂಧೀಜಿಯ [illegible] ಸಾಧಿಸುವದಾಗಿರದೆ [illegible] ಆಗಿದ್ದರೆ ಮೊದಲು [illegible] ಆ ತತ್ವಗಳನ್ನು ಅನುಸರಿಸಲು [illegible] ಮಂತ್ರಿಯಾದ ಶ್ರೀ ಮುರಾರ [illegible] ಗಾಂಧೀಜಿಯ ಭಾಷಣಗಳು [illegible] ಈ ವಿಷಯದಲ್ಲಿ [illegible] ಅಥವಾ ನೀವೂ ಅವರಿಗೆ [illegible] ಅವರು ಹಿಮಾಲಯದಂಥ [illegible] ಗಳನ್ನು ಮಾಡುವಾಗ ನೀವೇಕೆ [illegible] ಅದಿ ತೋರಿಸುವದಿಲ್ಲ? ನೀವು [illegible] ಯನ್ನು ಕುರಿತು ಬರೆದ ಟಿಪ್ಪಣಿ [illegible] ಮಂತ್ರಿಗಳು ಓದಿದರೆ ಪಾತ್ರಿಕ ಭಾ[illegible] ಹೊರಟು ಹೋಗದಿರವು. [illegible] ಪದೇಪದೇ ಗಾಂಧೀಜಿಯ [illegible] ಉಚ್ಚರಿಸುತ್ತಾರೆ. ಆದರೆ [illegible] ಮಾತ್ರ ಅವರನ್ನು ಅನುಸರಿಸುವದೇ [illegible] ಇದಕ್ಕೆ ಉಪಾಯವನ್ನು ಸೂಚಿಸ[illegible]

ನನಗೆ ಆಗಾಗ್ಗೆ ಬರುತ್ತಿ[illegible] ಇದೊಂದು ಮಾದರಿ ಪತ್ರ. ಅದರಲ್ಲಿರುವ [illegible] ಕಟು ಭಾವನೆಗಾಗಿ ಅದಕ್ಕೆ ನಾನಿಲ್ಲಿ ಸ್ಥಾನಕೊಟ್ಟಿರುವೆ, ಇಂಥ ಟೀಕಾಕಾರರಲ್ಲಿರುವ ವಿಚಾರ ಸಂಕರ, ತಪ್ಪು ಭಾವನೆ ಮತ್ತು ಅನ್ಯಾಯವಾದ ವಿಚಾರಗಳನ್ನು ಜನರೆದುರು [illegible] ತೋರಿಸುವುದಕ್ಕಾಗಿ ಕೊಟ್ಟಿದ್ದೇನೆ [illegible] ತನದಿಂದ ಈ ಬಗೆಯ ವಿಚಾರಗಳನ್ನು [illegible] ಲಾಗುತ್ತಿದೆ. ಅವು ಜನರನ್ನು ತಪ್ಪುದಾರಿ [illegible] ಸುತ್ತವೆ.

"ಹರಿಜನ"ದ ಮುಖ್ಯ ಉದ್ದೇಶವೆಂದರೆ, ಜನರಿಗೆ ಕಲಿಸಿ ತಮ್ಮದೇ ಸ್ವರಾಜ್ಯವನ್ನು ಸ್ಥಾಪಿಸಿ ಅದರ ಒಳ್ಳೆಯ ಫಲಗಳ[illegible] ಭೋಗಿಸಲು ಅವರನ್ನು ಸಮರ್ಥ[illegible] ಮಾಡುವದು. "ಹರಿಜನ" ಹರಿಜನರ [illegible] ದೇವರ ಮಕ್ಕಳಾದ ಜನರ ಸೇವಕ. ಅ[illegible] ಮಂತ್ರಿಗಳ ಒಡೆಯನೂ ಅಲ್ಲ, ಆಳೂ [illegible] ಮಂತ್ರಿಗಳೂ ಜನರ ಸೇವಕರಾಗಿರುವದರಿಂದ ಅವರೂ "ಹರಿಜನ"ವೂ ಒಂದೇ ಧ್ಯೇಯ[illegible] ದುಡಿಯುವ ಕೆಲಸಗಾರರೇ ಸರಿ.

ಹಿಂದುಸ್ತಾನದಲ್ಲಿರುವ ಎಲ್ಲ ಮಂತ್ರಿಗಳನ್ನು ಎಣಿಸಿದರೂ ಅವರ ಸಂಖ್ಯೆ ಎರಡು ನೂರಕ್ಕಿಂತ ಹೆಚ್ಚಾಗಿಲ್ಲ. ಅವರಲ್ಲಿ ಪ್ರಮು[illegible] ಸ್ಥಾನ ವಹಿಸಿದವರಂತೂ ನೂರಕ್ಕಿಂತಲೂ ಕಡಿಮೆಯಾಗಿದ್ದಾರೆ. ಅವರಿಗೇನಾ[illegible] ಸೂಚನೆಗಳನ್ನು ಮಾಡಬೇಕಾಗಿ[illegible] "ಹರಿಜನ" ದ ಮೂಲಕ ಮಾಡುವದಕ್ಕಿಂತ ನೇರವಾಗಿ ಮಾಡುವದೇ ಫಲಕಾರಿ, [illegible] "ಹರಿಜನ" ಇರುವದು ಜನರಿಗೆ ಶಿಕ್ಷಣ [illegible] ವದಕ್ಕೆ ಮತ್ತು ಜನರಿಗೂ ಅಧಿಕಾರಿಯವರಿ[illegible] ಉಪಯೋಗದೀಕಬಹುದಾದ ವಿಚಾರ[illegible] ಪ್ರಕಟಪಡಿಸುವದಕ್ಕಾಗಿ.

ನನ್ನನ್ನು ಗಾಂಧೀಜಿಯೊಡನೆ ಹೋಲಿಸುವದು ಸಾಧ್ಯವೇ ಇಲ್ಲ. ಗಾಂಧೀಜಿ [illegible] ಮಂತ್ರಿಗಳ ನಾಯಕರಾಗಿದ್ದರು. ಅದ[illegible] ಗಾಂಧೀಜಿಯ ಕೈಕೆಳಗೆ ತರಬೇತಿ ಹೊಂದಿದವರು. ಆದರೆ, ಪ್ರಮುಖ ಮಂತ್ರಿಗಳಲ್ಲಿ [illegible] ನವರು ನನಗಿಂತ ಹಿರಿಯರಿದ್ದೇ ಇದ್ದ[illegible]

—[illegible]

ವಂತೆ, ಗಾಂಧಿಯವರು ಮಾಡಿದ [illegible] ದರ್ಶನದಂತೆ ಸರ್ವರಲ್ಲೂ ಸದಿಚ್ಛೆಯನ್ನು ತಾಳಿ, ಯಾರಲ್ಲೂ ತಪ್ಪುತ್ತಿಲ್ಲದೆ, [illegible] ವರೆಗೆ ಮತ್ತು ಸತ್ಯಾನ್ವೇಷಿಗಳ ಸಂಘಕ್ಕೆ ಹುಟ್ಟಿ ವಾದ ರೀತಿಯಲ್ಲಿ ತನ್ನವರು [illegible] ಗುವಂತೆ ಮಾಡಿ ಇಲ್ಲವೆ ಅ[illegible] ಮಡಿದು ಜಾತೀಯ ಮತ್ತು [illegible] ಜ್ಯಕ ಶಾಂತಿ ಸೌಹಾರ್ದ[illegible] ದುಡಿಯುವುದು. ಅದರ ಮೇಲೆ ಇದ್ದ [illegible] ಪವಿತ್ರ ಕರ್ತವ್ಯವನ್ನು ಎಂದಿಗೂ [illegible] ಬಿಟ್ಟುಕೊಡದು, ಅದಕ್ಕೆ [illegible] ಏನುಬಂದಾಗಲು.

[illegible]

ಯುಕ್ತಿ ಪ್ರಸಂಗ

ಸಮಯಪ್ರಜ್ಞಾನವೊಂದು ಹೊತಿನಲ್ಲಿ ತಕ್ಷಣ ಸಮಯೋಚಿತ ಉತ್ತರ ಕೊಡುವ ಸಾಮರ್ಥ್ಯ ಎಲ್ಲರಿಗೆ ದೊರೆತ ಸೌಭಾಗ್ಯವಲ್ಲ. ಪ್ರಸಂಗಾವಧಾನ ಇತಿಗೆ ಸ್ವಲ್ಪ ನಿರ್ದಾಕ್ಷಿಣ್ಯ ಪ್ರವೃತ್ತಿಯೂ ಅದಕ್ಕೆ ಬೇಕಾಗುತ್ತದೆ. ಹಾಸ್ಯ ಅಥವಾ ಇಂಗ್ಲೀಷಿನಲ್ಲಿ Humour ಎಂದು ಕರೆಯಲ್ಪಡುವ ರಸದ ವಿಕಾಸ ನಮ್ಮ ದೇಶದಲ್ಲಿ ಸಮರ್ಪಕವಾಗಿರದಿದ್ದರೂ ಯುಕ್ತಿ ಅಥವಾ Wit ಎಂಬ ಕಲೆಯಲ್ಲಿ ನಮ್ಮವರು ಪಾರಂಗತರೇ ಆಗಿದ್ದಾರೆ. ಎದುರಾಳಿನಲ್ಲಿರುವ ದೋಷವನ್ನು ಕಂಡುಹಿಡಿದು ಅವನ ಮಾತನ್ನು ಅವನ ಮೇಲೆಯೆ ತಿರುಗಿಸಿ ಮುಖಭಂಗ ಮಾಡಿ ಬಿಡುವದರಿಂದ ಯುಕ್ತಿಕಲೆ ಹಾಸ್ಯರಸದಷ್ಟು ನಿರಪಾಯಿಯಲ್ಲ. ಆದರೆ ರಾಜಕಾರಣ, ಭಾಷಣಾದಿಗಳಲ್ಲಿ ಪ್ರಸಕ್ತರಾದವರಿಗೆ ಯುಕ್ತಿವಚನದ ಸಾಮರ್ಥ್ಯವಿದ್ದರೆ ತುಂಬ ಅನುಕೂಲ.

ಉದಾಹರಣೆಗಾಗಿ ಒಮ್ಮೆ ಬ್ರಿಟಿಶ ಮುಖ್ಯಮಂತ್ರಿಯಾಗಿ ಒಂದನೆ ಮಹಾಯುದ್ಧದ ಕಾಲದಲ್ಲಿ ತುಂಬ ಮೆರೆದ ಲಾಯ್ಡ್ ಜಾರ್ಜರಿಗೆ ಶೀಘ್ರಯುಕ್ತಿ ಒಲಿದಿದ್ದುದರಿಂದ ಅವರು ಎದುರಾಳಿಗಳನ್ನು ಬಹು ಸುಲಭವಾಗಿ ಮೂಲೆ ಹಿಡಿಸಿ ಬಿಡುತಿದ್ದರು. ಒಂದು ಸಲ ಅವರು ವೇದಿಕೆಯ ಮೇಲೆ ನಿಂತು ಆವೇಶದಿಂದ ಭಾಷಣ ಮಾಡುತ್ತ, 'ನಮ್ಮ ಧ್ಯೇಯವೆಂದರೆ ಇಂಗ್ಲಂಡಿಗೆ ಸ್ವಾತಂತ್ರ್ಯ ಬೇಕು, ಸ್ಕಾಟ್ಲಂಡಿಗೆ ಸ್ವಾತಂತ್ರ್ಯ ಬೇಕು, ಆಯರ್ಲಂಡಿಗೆ ಸ್ವಾತಂತ್ರ್ಯ ಬೇಕು" ಎಂದು ಕೂಗಿದನು.

ಥಟ್ಟನೆ ಲಾಯ್ಡ್ ಜಾರ್ಜರ ಉತ್ತರ: "ಆಹಾ ಅದರಲ್ಲೇನು ಸಂದೇಹ, ಎಲ್ಲರೂ ತಮ್ಮ ತಮ್ಮ ಪಾಡಿಗೆ ಸ್ವಾತಂತ್ರ್ಯ ಬೇಕೆನ್ನುವದು ಸ್ವಾಭಾವಿಕವೆ!"

ನಡುವೆ ಬಾಯಿ ಹಾಕಿದವನು ತಣ್ಣಗಾದ. ಸಭಿಕರೆಲ್ಲರೂ ಅದರಲ್ಲಡಕವಾದ ವಕ್ರೋಕ್ತಿಗಾಗಿ ಗೊಳ್ಳೆಂದು ನಕ್ಕರು.

× × ×

ಲಾಯ್ಡ್ ಜಾರ್ಜರಷ್ಟಲ್ಲದಿದ್ದರೂ ಚರ್ಚಿಲ್ಲರಿಗೂ ಇಂಥ ವಕ್ರೋಕ್ತಿ ಸಾಮರ್ಥ್ಯ ಇದೆ. ಪ್ರಸಿದ್ಧ ಸ್ತ್ರೀ ರಾಜಕಾರಣಿಯಾದ ಲೇಡಿ ಆಸ್ಟರರು ಒಂದು ಬಾರಿ ಚರ್ಚಿಲ್ಲರ ಮೇಲೆ ಮುನಿಸು ಕೊಂಡು ನುಡಿಯಾಡಿದರು:

"ಮಿಸ್ಟರ್ ಚರ್ಚಿಲ, ನಿಮ್ಮ ಬಗ್ಗೆ ಎರಡು ವಿಷಯಗಳು ಮಾತ್ರ ನನಗೆ ಸರಿ ಬರುವದಿಲ್ಲ, ನೋಡಿರಿ– ನಿಮ್ಮ ಮೀಸೆಗಳು ಮತ್ತು ನಿಮ್ಮ ರಾಜಕಾರಣ."

ಚರ್ಚಿಲ್ಲರು ಕಂಗೆಡಲಿಲ್ಲ. ಹೇಳಿದರವರು. "ಅದಕ್ಕಾಗಿ ಚಿಂತಿಸಬೇಡಿರಿ, ಮ್ಯಾಡಂ. ಅವೆರಡರ ಸಂಪರ್ಕವೂ ನಿಮಗೆ ಬರಲಾರದು!"

ಲೇಡಿ ಆಸ್ಟರರ ಮುಖ ಕಪ್ಪಿಟ್ಟಿತು.

× × ×

ಪ್ರಸಿದ್ಧ ಲೇಖಕರಾದ ಬರ್ನಾರ್ಡ್ ಶಾ ಅವರೂ ಬಹಳ ನಿರ್ದಾಕ್ಷಿಣ್ಯ ಯುಕ್ತಿ ಚತುರರು. ಅವರ ಗೆಳೆಯರಾದ ಜಿ. ಕೆ. ಚೆಸ್ಟರ್‌ಟನ್ನರು ಒಂದು ದಿನ ಬೀದಿಯಲ್ಲಿ ಭೆಟ್ಟಿಯಾದಾಗ [illegible] ರೂಪದ ಶಾರನ್ನು ಗೇಲಿ ಮಾಡಿದರಂತೆ. "ಅಲ್ಲೊ ಬರ್ನಾರ್ಡ್ ಶಾ! ನಿನ್ನನ್ನು ನೋಡಿದರೆ ಇಂಗ್ಲಂಡಿನಲ್ಲಿ ಬರಗಾಲ ಬಿದ್ದಂತೆ ಕಾಣುತ್ತದೆ!"

"ಸಂಶಯವೇನು?" ಶಾ ಉತ್ತರ ಕೊಟ್ಟರು. "ಆ ಬರಗಾಲಕ್ಕೆ ನೀನೇ ಕಾರಣ ಎಂದು ಎದ್ದು ಕಾಣುತ್ತದೆ!"

ಚೆಸ್ಟರಟನ್ನರು ಒಳ್ಳೇ ಸ್ಥೂಲಕಾಯರಾಗಿದ್ದರು.

× × ×

ನಮ್ಮ ಭಾರತದಲ್ಲಿಯೂ ಇಂಥ ಕೆಲ ಪ್ರಸಂಗಗಳು ಪ್ರಸಿದ್ಧವಾಗಿವೆ. ಕಲಕತ್ತೆಯ ಹೈಕೋರ್ಟಿನಲ್ಲಿ ವಕೀಲರೊಬ್ಬರು ಯಾವದೋ ಒಂದು ಕಾಯಿದೆ ಮುದ್ದೆಯನ್ನು ಬಹಳ ಸಲ ಒತ್ತಿ ಹೇಳಿದಾಗ [illegible] ಬಿಳಿ ಜಡ್ಜರು ಸಿಡಿದೆದ್ದರು. "ನೀವು ನನಗೆ ಕಾಯಿದೆ ಕಲಿಸುತೀರಾ?" ಎಂದು ಗರ್ಜಿಸಿದರವರು.

ವಕೀಲರು ಕೈಯಲ್ಲಿದ್ದ ಪುಸ್ತಕವನ್ನು ಮೇಜಿನ ಮೇಲೊಗೆದು ಕೈಚೆಲ್ಲಿ ನಿರಾಶೆಯನ್ನು ಅಭಿನಯಿಸುತ್ತ ನುಡಿದರು "ಇಲ್ಲ ಸ್ವಾಮೀ, ನಾ ಸೋತೆ."

ನ್ಯಾಯಾಧೀಶರ ಕೆಂಪು ಮುಖ ಇನ್ನಷ್ಟು ಕೆಂಪಾಯಿತು.

ಸಣ್ಣ ಮನುಷ್ಯರು

ಆಧುನಿಕ ನಾಗರಿಕತೆ ಎಂದರೆ ಅಮೇರಿಕದ ನಾಗರಿಕತೆ ಎಂಬ ತಪ್ಪುತಿಳುವಳಿಕೆ ಹಿಂದುಸ್ತಾನದ ಹಲವರ ತಲೆಹೊಕ್ಕಿದೆ. ಪೂರ್ವದಲ್ಲಿ ವೇದಾಭ್ಯಾಸ ಜಡತ್ವವಿದ್ದರೆ ಈಗ ಪಾಶ್ಚಾತ್ಯಾಭ್ಯಾಸ ಜಡತ್ವ ನಮ್ಮಲ್ಲಿ ತಲೆದೋರಿದೆ. ಮೊನ್ನೆ ಮೊನ್ನೆ ಬರ್ನಾರ್ಡ್ ಇಡ್ಡಿಂಗ್ಸ್‌ಬೆಲ್ ಎಂಬ ಅಮೇರಿಕನ್ ಶಿಕ್ಷಣ ತಜ್ಞರು ಬರೆದು ಪ್ರಕಾಶಪಡಿಸಿದ "ವಿದ್ಯಾಭ್ಯಾಸದಲ್ಲಿಯ ಬಿಕ್ಕಟ್ಟು" ಎಂಬ ಪುಸ್ತಕದಲ್ಲಿ ಅವರು ಅಲ್ಲಿಯ ಸಾಮಾನ್ಯ ಬಾಲಕ ಬಾಲಿಕೆಯರು "ಅಶ್ಲೀಲತೆಯಿಂದ ಪ್ರಬುದ್ಧಮಾನರಾಗುತ್ತಿದ್ದಾರೆ; ನಿಯಮ ಸಂಯಮದಾಹಿರರೂ, ಘಟಿಮಾರಿಗಳೂ ಜೀವನವನ್ನು ಕಂಡು ಕಂಗಾಲಾಗುವವರೂ, ಸಾಮಾಜಿಕ ಅಥವಾ ಕಲಾಗತ ವಿಷಯಗಳ ಬಗ್ಗೆ ನಿರ್ಣಯಮಾಡುವ ಬುದ್ಧಿಯುಳ್ಳದವರೂ ಧರ್ಮರಹಿತರೂ ಆಗಿದ್ದಾರೆ" ಎಂದು ಹೇಳಿದ್ದಾರೆ.

ಇಂದು ಸಣ್ಣಮನುಷ್ಯರಾಗಿ ಕಾಣುವ ವಿದ್ಯಾರ್ಥಿಗಳು ಮುಂದೆ ದೊಡ್ಡಮನುಷ್ಯರಾಗಿ ದೊಡ್ಡ ದೊಡ್ಡ ಒಳ್ಳೆಯ ಅಥವಾ ಕೆಟ್ಟ ಕೆಲಸಗಳನ್ನು ಮಾಡುವುದು ಸಹಜ. ಕಲಕತ್ತದಲ್ಲಿ ವಿದ್ಯಾರ್ಥಿಗಳು ನಡೆಸಿದ ಕೋಲಾಹಲ, ಅದರಿಂದ ಶಿಕ್ಷಣ ತಜ್ಞರಿಗಾದ ಗಡಿಬಿಡಿ ಇದು ಎಲ್ಲರಿಗೂ ತಿಳಿದ ಸಂಗತಿ. 'ತಾಯಿಯಂತೆ ಕರು ನಾಯಿಯಂತೆ ಬಾಲ' ಎಂಬ ಗಾದೆಯ ಪ್ರಕಾರ ತಾಯ್ತಂದೆಯರ ಗುಣ, ಶೀಲ, ಬುದ್ಧಿಗಳೇ ಮಕ್ಕಳು ಹೀಗಾಗಲು ಕಾರಣ. ಇದೇ ಮಾತನ್ನು ಶ್ರೀ ಬೆಲ್ಲರೂ ಹೇಳುತ್ತಾರೆ; ಅಮೇರಿಕದ ಮಾತಾಪಿತೃಗಳು "ಸ್ವತಂತ್ರ ಸ್ತ್ರೀಪುರುಷರಲ್ಲ; ನೀಚ ಯಾಂತ್ರಿಕ ಮಾನವರು, ಸಾಮೂಹಿಕ ವ್ಯವಸ್ಥೆಯ ಪುತ್ರಪುತ್ರಿಯರೂ ಪೋಷಕರೂ ಆಗಿದ್ದಾರೆ" ಎಂದಿದ್ದಾರೆ. ಅವರ ಶಿಕ್ಷಣ ಕೇವಲ ವೃತ್ತಿಪ್ರಧಾನವೂ ವ್ಯಾಪಾರಬುದ್ಧಿಯದೂ ಆಗಿದೆ. ಇದನ್ನು ನವಯುಗದ ನೀತಿಯೆಂದು ನಮ್ಮಲ್ಲಿಯ ಹಲ ಪಟ್ಟಣಿಗ ವಿದ್ವನ್ಮಣಿಗಳು ತಿಳಿದಿರುವುದು ದೇಶಹಿತಕ್ಕೆ ಹಾನಿಕರವಾಗಿದೆ.

ಭಾರತೀಯ ನಗರಸ್ಥರ ಸುತ್ತುಮುತ್ತಲಿನ ಬಾಲಬಾಲೆಯರನ್ನು ಕಂಡರೆ ಅವರೀಗ ಅಮೇರಿಕದ ಮಾದರಿಯನ್ನೇ ಅನುಸರಿಸುವವರಂತೆ ತೋರುತ್ತದೆ. ಹಳಗಾಲವನ್ನು ಬಯ್ಯುವ, ಪಾಂಡಿತ್ಯವನ್ನು ಹೀಯಾಳಿಸುವ, ವಸ್ತ್ರವಸುವರ್ಣಕ್ಕೆ ಸೌಂದರ್ಯವನ್ನು ಆರಾಧಿಸುವ ಪ್ರವೃತ್ತಿಯನ್ನೇ ಆಧುನಿಕವೆಂದೂ ಪ್ರಗತಿಶೀಲವೆಂದೂ ಅವರು ತಿಳಿದಿರುವುದು ಅವರ ನಡತೆಯಲ್ಲಿ ಕಂಡುಬರುತ್ತದೆ. ಆಡುವುದೊಂದು ಮಾಡುವುದಿನ್ನೊಂದು ಎಂಬ ನಡತೆ ಅವರ ನಿತ್ಯವ್ರತವಾಗುತ್ತಿದೆ. ಇದು ಹೀಗೆ ಬೆಳೆದರೆ ನಾಳಿನ ದೊಡ್ಡ ಮನುಷ್ಯರೆನಿಸುವ ಈ ಸಣ್ಣ ಮನುಷ್ಯರು ಇಂದು ಸರಕಾರಗಳಲ್ಲೂ ಇತರ ಸ್ಥಳಗಳಲ್ಲೂ ಕಂಡುಬರುವ ಭ್ರಷ್ಟಾಚಾರಕ್ಕೆ ಇನ್ನೂ ಚೆನ್ನಾಗಿ ನೀರೆರೆದು ದೇಶವನ್ನು ದುರ್ದಶೆಗೀಡುಮಾಡದಿದ್ದಾರೇ? "ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ದಾಸವತ್" ಎಂಬ ಮಾತಿನಲ್ಲಿ ಅತಿಶಯೋಕ್ತಿಯಿದ್ದರೂ ಸತ್ಯದ ಅಂಶ ಪ್ರಾಮುಖ್ಯವಾಗಿದೆ ಎಂಬುದೀಗ ವಿಚಾರವಂತರಿಗೆ ಸ್ಪಷ್ಟವಾಗುವುದಿಲ್ಲವೆ?

—ಶಿಕ್ಷಣಮೀಮಾಂಸಿ

ಸ್ಟಾಲಿನ್‌ಗ್ರಾಡಿನಿಂದ ನ್ಯೂಯಾರ್ಕಿಗೆ ಬಾಂಬು?

ವಾಶಿಂಗಟನ್ನಿನಲ್ಲಿ ಸಿಕ್ಕಿದ ಗುಪ್ತವಾರ್ತೆಯ ಮಾತಿಗೆ ರಶಿಯದ ಹತ್ತಿರ ಎಲ್ಲ ವಿಧದ ಅಣುಶಕ್ತಿಯ ಶಸ್ತ್ರಗಳು ಇವೆ ಎಂದು ತಿಳಿಯುತ್ತದೆ ಅದರಲ್ಲೂ ಅಣುಬಾಂಬು ಅದರ ಹತ್ತಿರ ಬೇಕಾದಷ್ಟಿದೆ ಎಂಬುದಾಗಿ ಗೊತ್ತಾಗಿದೆ. ಈ ತಯಾರಿಕೆಗೆ ರಶಿಯಕ್ಕೆ ಕರೆತರಲಾಗಿದ್ದ ಜರ್ಮನ್ ವಿಜ್ಞಾನಿಗಳ ಬುದ್ಧಿಮತ್ತೆಯೇ ಕಾರಣವೆಂದು ಹೇಳಲಾಗಿದೆ.

ರಶಿಯದಲ್ಲೀಗ ಒಂದು ವಿಶಿಷ್ಟ ಶಸ್ತ್ರವಿದೆ. ೫೦ ಪೌಂಡ ತೂಕದ ಗೋಲಿಗಳನ್ನು ಸ್ಟಾಲಿನ್‌ಗ್ರಾಡಿನಿಂದ ನ್ಯೂಯಾರ್ಕಿನ ಎಂಪೈರ್ ಸ್ಟೇಟ ಬಿಲ್ಡಿಂಗಿಗೆ ನೇರವಾಗಿ ಹೊಡೆಯುವಂತೆ ಅವನ್ನು ಬಿಡಬಹುದು. ಯುದ್ಧಕ್ಕೆ ಮೊದಲು ಜರ್ಮನಿಯಲ್ಲಿದ್ದುದರ ೧೪ ಪಟ್ಟು ವಿಮಾನಬಲ ರಶಿಯದಲ್ಲಿದೆ. ಇದಲ್ಲದೆ ಸೈನಿಕರ ಉಪಯೋಗಕ್ಕಾಗಿ ಜರ್ಮನರಂತೆ ರಶಿಯನ್ ವಿಜ್ಞಾನಿಗಳಾದರೂ ಆಹಾರ ಘಟಕಗಳನ್ನು ತಯಾರಿಸಿದ್ದಾರೆ. ಹಸಿವೆ ನೀರಡಿಕೆಗಳಿಗೆ ಭಿನ್ನ ರೀತಿಯ ಗುಳಿಗೆಗಳಿವೆಯಂತೆ. ಅವನ್ನು ಆಯಾ ಕಾಲದಲ್ಲಿ ತಿಂದರೆ ಪೇಯಪದಾರ್ಥಗಳಿಂದಾಗುವ ಪ್ರಯೋಜನ ಲಭಿಸುವುದೆಂದು ತಿಳಿದು ಬರುತ್ತದೆ.

ದೊಳ್ಳು ಕರಗಲು ವ್ಯಾಯಾಮ

ಕೆಳ ಹೊಟ್ಟೆ ಜೋತು ಬೀಳುವುದೇ ದೊಳ್ಳಿನ ಲಕ್ಷಣ. ಇದು ಕರಗಬೇಕಾದರೆ ಪ್ರತಿನಿತ್ಯ ಈ ಕೆಳಗೆ ಹೇಳಿದ ವ್ಯಾಯಾಮವನ್ನು ಸಂಬಂಧಪಟ್ಟ ವ್ಯಕ್ತಿಗಳು ತಪ್ಪದೆ ಮಾಡಬೇಕು:

ಮೊದಲು ಮಗುವಿನಂತೆ ಅಂಬೆಗಾಲುಹಾಕಿ ನಿಲ್ಲಬೇಕು. ಕೈಗಳನ್ನು ನೆಟ್ಟಗೆ ನೆಲಕ್ಕೆ ಚಾಚಿರಬೇಕು. ಹೊಟ್ಟೆಯನ್ನು ಒಳಗೆಳೆದುಕೊಳ್ಳತಕ್ಕದ್ದು. ಅನಂತರ–

೧. ಎಡಗಾಲನ್ನು ಹಿಂದಕ್ಕೆ ಎತ್ತು.

೨. ಮುಂಡವನ್ನು ಬಿಲ್ಲಿನಂತೆ ಬಾಗಿಸಿ ನಡುಬೆನ್ನನ್ನು ಮೇಲೆತ್ತು ಹೊಟ್ಟೆಯನ್ನು ಹ್ರಸ್ವಗೊಳಿಸು. ಎಡ ಮೊಣಕಾಲನ್ನು (ಮಂಡಿಯನ್ನು) ಹಣೆಗೆ ತಗುಲಿಸಲು ಯತ್ನಿಸು.

೩. ಎಡಗಾಲನ್ನು ಹಿಂದಕ್ಕೆ ಎಳೆದುಕೊ.

೪. ಮತ್ತೆ ಅಂಬೆಗಾಲು ಹಾಕಿನಿಲ್ಲು. ಇದೇ ಮೇರೆಗೆ ಬಲಗಾಲನ್ನು ಮಡಿಸಿ ವ್ಯಾಯಾಮ ಸಾಗಿಸು. ಆರು ಸಲ ಮಾಡಿದರೆ ಒಂದು ದಿನದ ವ್ಯಾಯಾಮವಾಗುವದು.

● ಮಾಸ್ಕೋ ನಗರವನ್ನು ಜಗತ್ತಿನ ಅತಿ ಹಸುರು ನಗರವಾಗಿ ಮಾಡಲೋಸುಗ ೧ ಲಕ್ಷ ಹೊಸ ಮರಗಳನ್ನೂ ೮ ಲಕ್ಷ ಪೊದರುಗಳನ್ನೂ ರಸ್ತೆಗಳ ಎರಡೂ ಪಕ್ಕಗಳಲ್ಲಿ ನಡಲು ರಶಿಯಾ ಸರಕಾರ ಯೋಜಿಸಿದೆ. ೧೯೪೫ ರಿಂದ ಇಂದಿನ ವರೆಗೆ ೮ ಲಕ್ಷ ಮರಗಳೂ ೪೦ ಲಕ್ಷ ಪೊದರಗಳೂ ಮಾಸ್ಕೋದಲ್ಲಿ ನಡಲ್ಪಟ್ಟಿವೆ.

ಹಿಮಾಲಯಾರೋಹಣ

ನಂಗ ಪ್ರಭಾತವೆಂಬ ಹಿಮಾಲಯದ ಶಿಖರವು ಸಮುದ್ರ ಮಟ್ಟದಿಂದ ೨೬೬೬೦ ಅಡಿ ಎತ್ತರದಲ್ಲಿದೆ. ಅದನ್ನೇರಲು ನಾರ್ವೇ ದೇಶದ ಸಾಹಸಿಗಳೀಗ ಪ್ರಯತ್ನಮಾಡಲು ಸಿದ್ಧತೆ ನಡೆಸಿದ್ದಾರೆ. ಇದಕ್ಕಾಗಿ ಆ ನಾರ್ವೀಜಿಯನ್ನರು ೧೯ ತಿಂಗಳ ತರಬೇತನ್ನು ಪಡೆದಿದ್ದಾರೆ. ಇಷ್ಟರ ವರೆಗೆ ಅನೇಕ ಸಲ ಜರ್ಮನರು ಆ ಶಿಖರವನ್ನೇರಹೋಗಿ ವಿಫಲ ಪ್ರಯತ್ನರಾಗಿದ್ದಾರೆ. ಒಂದು ಪ್ರಯತ್ನ ೧೯೩೨ ರಲ್ಲಿ ನಡೆಯಿತು. ೨೨೭೫೦ ಅಡಿಯವರೆಗೆ ಹತ್ತಿ ಅವರು ಮುಂದೆ ಹೋಗಲಾರದಾದರು. ೨ ನೆಯ ಸಲ ೧೯೩೪ ರಲ್ಲಿ ಹೆರ್ ಮರ್ಕ್ಲನ ಪಕ್ಷದವರು ೨೬೦೦೦ ಅಡಿಯ ವರೆಗೆ ಏರಿದಾಗ ಮೇಲಿನ ತಂಗಾಳಿಯ ಹೊಡೆತಕ್ಕೆ ಸಿಕ್ಕಿ ಕೆಳಗಿಳಿಯಬೇಕಾಯಿತು. ಆಗ ೬ ಜನರು ಸತ್ತರು. ಆ ಮೇಲೆ ೧೯೩೭ ರಲ್ಲಿ ೩೮ ಮತ್ತು ೩೯ ರಲ್ಲಿ ಪ್ರಯತ್ನ ನಡೆದದ್ದೂ ಸಾಫಲ್ಯ ಹೊಂದಲಿಲ್ಲ.

● ಜಗತ್ತಿನ ಜನರನ್ನು ಸುಖವಾಗಿ ನೆಲೆಗೊಳಿಸಬೇಕಾದರೆ ೧೦–೧೨ ಕೋಟಿ ಹೊಸ ಮನೆಗಳನ್ನು ಕಟ್ಟಬೇಕಾಗುವದೆಂದು ಯುಕ್ತ ರಾಷ್ಟ್ರದ ಶಾಖೆಗಳು ಕಂಡು ಹಿಡಿದಿವೆ. ಈ ಸಂಖ್ಯೆಯಲ್ಲಿ ಬಿದ್ದ ಹೊಸದಾಗಿ ಕಟ್ಟಬೇಕಾ ಮನೆಗಳು ಸೇರಿಲ್ಲ. ಜಗತ್ತಿನ ಅತಿ ಶ್ರೀಮಂತ ರಾಷ್ಟ್ರವಾದ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ೧೦—೧೮ ಲಕ್ಷ ಹೊಸ ಮನೆಗಳನ್ನು ಕಟ್ಟಬೇಕಾಗಿವೆ. ಆದರೆ ಅದರ ಅರ್ಧಕೂಡ ಕಟ್ಟಲಾಗುತ್ತಿಲ್ಲ.

ಸಮಸ್ತ ಭಾರತ

ಮುಂಬಯಿ

ಧಾನ್ಯ ಎತ್ತುವಳಿಯ ಕಾರ್ಯದಲ್ಲಿ ಪ್ರಾಂತದ ಒಕ್ಕಲಿಗರು ಸ್ವಯಂಸ್ಫೂರ್ತಿಯಿಂದ ಕೈಕೊಳ್ಳುವ ಯತ್ನಗಳಿಗೆ ಮನ್ನಣೆ ಕೊಡುವ ಉದ್ದೇಶದಿಂದ ಮತ್ತು ಈ ಕಾರ್ಯದ ಸ್ಫೂರ್ತಿಯನ್ನು ನಿರಂತರ ಕಾಯ್ದಿರಿಸುವ ಉದ್ದೇಶದಿಂದ ಮುಂಬಯಿ ಸರಕಾರವು ಪ್ರತಿ ಜಿಲ್ಹೆಯ ಎರಡು ಹಳ್ಳಿಗಳಿಗೆ ಅನುಕ್ರಮವಾಗಿ ೧೦,೦೦೦ ರೂಪಾಯಿ ಮತ್ತು ೫೦೦೦ ರೂಪಾಯಿಗಳ ಬಹುಮಾನ ಕೊಡಲು ನಿರ್ಧರಿಸಿದೆ.

ಧಾನ್ಯ ಎತ್ತುವಳಿ ಕಾರ್ಯದಲ್ಲಿ ಉಳಿದ ಜಿಲ್ಹೆಗಳಿಗಿಂತ ಅತ್ಯುತ್ತಮ ಕಾರ್ಯ ಮಾಡಿದ ಸಾತಾರಾ ಜಿಲ್ಹೆಗೆ ೫೦,೦೦೦ ರೂಪಾಯಿಗಳ ವಿಶೇಷ ಬಹುಮಾನವನ್ನು ಕೊಡಲಾಗಿದೆ. ಇಡೀ ಜಿಲ್ಹೆಯ ಅಭಿವೃದ್ಧಿ ಹಾಗು ಕಲ್ಯಾಣ ಸಾಧನೆಗಾಗಿ ಈ ಹಣವನ್ನು ವಿನಿಯೋಗಿಸಲಾಗುವದು.

ಜುಲೈ ೨ ನೇ ದಿನಾಂಕ ಶನಿವಾರಕ್ಕೆ ಮುಗಿವ ವಾರದ ವರೆಗೆ ಆಗುವ ಎತ್ತುವಳಿಯ ಕಾರ್ಯವನ್ನು ಲೆಕ್ಕಕ್ಕೆ ಹಿಡಿದು ಯಾವ ಯಾವ ಹಳ್ಳಿಗಳಿಗೆ ಬಹುಮಾನ ಸಲ್ಲಬೇಕೆಂಬುದನ್ನು ನಿರ್ಧರಿಸಲಾಗುವದು. ಆ ಹೊತ್ತಿಗೆ ಸರ್ವ ಸಾಧಾರಣವಾಗಿ ಈ ವರುಷದ ಎತ್ತುವಳಿ ಕಾರ್ಯದ ಬಹುಭಾಗವು ಕೊನೆಗೊಳ್ಳಬಹುದಾಗಿದೆ.

ಮುಂಬಯಿ ಪ್ರಾಂತದ ಋಣಪರಿಹಾರ ಕಾಯದೆಯು ಮೇ ದಿನಾಂಕ ೧ ರಿಂದ ಕೊಲ್ಹಾಪುರ ಸಂಸ್ಥಾನಕ್ಕೂ ಅನ್ವಯಿಸಲ್ಪಟ್ಟಿದೆ. ಋಣ ಪರಿಹಾರಕ್ಕಾಗಿ ಅರ್ಜಿಮಾಡಿಕೊಳ್ಳುವವರು ಸಂಬಂಧಪಟ್ಟ ಕೋರ್ಟಿಗೆ ೧೯೪೯ ಅಕ್ಟೋಬರ ೩೧ ರ ಒಳಗಾಗಿ ತಮ್ಮ ಅರ್ಜಿಗಳನ್ನು ಕಳಿಸಬೇಕು.

ಮುಂಬಯಿ ಪ್ರಾಂತದಲ್ಲಿ ಸೇರ್ಪಡೆ ಹೊಂದಿದ ಮತ್ತು ವಿಲಯನ ಹೊಂದಿದ ಸಂಸ್ಥಾನಗಳ ಪ್ರದೇಶದಲ್ಲಿ ಋಣಪರಿಹಾರ ಕಾಯದೆ ಮತ್ತು ಸಾಹುಕಾರಿ ಕಾಯದೆಗಳು ಅಮಲಿನಲ್ಲಿ ಬರುವದಾಗಿ ಪ್ರಕಟಿಸಲಾಗಿದೆ.

೧೯೪೭ ರಲ್ಲಿ ಉತ್ತಮ ಗ್ರಾಮ ಸುಧಾರಣೆಯ ಕಾರ್ಯವನ್ನು ನೆರವೇರಿಸಿದ್ದಕ್ಕೆ ಅಹಮ್ಮದನಗರ ಜಿಲ್ಹೆಯಲ್ಲಿ ಪೊಹೇಗಾಂವಕ್ಕೆ (ತಾ. ಕೋಪರಗಾಂವ) ೨೦೦ ರೂ. ಭಣಸಕ್ಕೆ (ತಾ. ಸೇವಾಸಾ) ೧೫೦ ರೂ. ಹಾಗು ದೇವಿ ನೀಮಗಾಂವಕ್ಕೆ (ಜಮಖೇಡಪೇಠಾ) ೧೦೦ ರೂ. ಹೀಗೆ ಪಾರಿತೋಷಕಗಳನ್ನು ಸಲ್ಲಿಸಲಾಗಿದೆ.

ಕಳೆದ ಎಪ್ರಿಲ ತಿಂಗಳಲ್ಲಿ ಜಿಲ್ಹಾ ಗ್ರಾಮ ಸುಧಾರಣಾ ಮಂಡಳಗಳ ಮುಖಾಂತರ ಪ್ರಾಂತದಲ್ಲಿಯ ಒಕ್ಕಲಿಗರಿಗೆ ಹಂಚಲು ಬೇರೆ ಬೇರೆ ಹಂಚುವ ಏಜನ್ಸಿಗಳಿಗೆ ಸುಮಾರು ೫,೩೭,೫೦೦ ರೂ. ಬೆಲೆ ಬಾಳುವ ೮೪೯ ಟನ್ನ ಕಬ್ಬಿಣ, ೧,೪೫೨ ಕಬ್ಬಿಣಬುಟ್ಟಿ, ೩೦೦ ಗುದ್ದಲಿ, ೨೨೫ ಸಲಿಕೆ, ೧೭೦ ಮುಳ್ಳು ತಂತಿಯ ಸಿಂಬಿ ಹಾಗು ೪೦,೦೧೮ ಅಡಿ ಉದ್ದವಾಗುವಷ್ಟು ಪೈಪುಗಳನ್ನು ಪೂರೈಸಲಾಯಿತು.

ಜಿಲ್ಹಾ ಗ್ರಾಮೋದ್ಧಾರ ಸಮಿತಿಗಳ ಮಾದರಿಯ ಮೇಲೆ ತಾಲೂಕ ಸಮಿತಿಗಳನ್ನು ನೇಮಿಸಿ ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗುವಂತೆ ಯೋಜಿಸಲಾಗುವದು ಎಂದು ಒಕ್ಕಲತನ ಮತ್ತು ಅರಣ್ಯ ಮಂತ್ರಿಗಳಾದ ಶ್ರೀ ಮಲ್ಲನಗೌಡರು ಪಾಟೀಲ ಇವರು ಪುಣೆಯಲ್ಲಿ ಸೇರಿದ್ದ ಆಹಾರ ಉತ್ಪಾದನ ಪರಿಷತ್ತಿನಲ್ಲಿ ಭಾಷಣ ಮಾಡುತ್ತ ಹೇಳಿದರು.

ಮುಂಬಯಿ ನಗರದಲ್ಲಿ ಶಾಂತಿಭಂಗವಾಗಲು ಸರಕಾರವು ಎಡೆಗೊಡಬಾರದು ಬ್ರಹ್ಮದೇಶ ಬಂಗಾಲಗಳಲ್ಲಿಯ ಪರಿಸ್ಥಿತಿ ಮುಂಬಯಿಯಲ್ಲಿ ಉಂಟಾಗಬೇಕೆಂದು ಯಾರೂ ಬಯಸುವದಿಲ್ಲ ಕಮ್ಯುನಿಸ್ಟರು ಹಿಂಸಾಚಾರಿಗಳಾದರೆ ಕಾಯ್ದೆಭಂಗ ಮಾಡಿದರೆ ತಕ್ಕ ಕ್ರಮ ಕೈಕೊಳ್ಳಲಾಗುವದು, ಕಮ್ಯುನಿಸ್ಟ ಪಕ್ಷವನ್ನು ನಿರ್ಬಂಧಿಸುವದು ಅವಶ್ಯವೆಂದು ನನ್ನ ಭಾವನೆಯಾಗಿದೆ ಎಂದು ಮುಂತಾಗಿ ಮುಂಬಯಿ ಮುಖ್ಯಮಂತ್ರಿ ಶ್ರೀ ಖೇರರು ಮುಂಬಯಿಯಲ್ಲಿ ಆದ ಗೋಳೀಬಾರಿನ ಸಂಬಂಧದಲ್ಲಿ ಒಂದು ಸಂದರ್ಶನದಲ್ಲಿ ಹೇಳಿದರು.

ಮುಂಬಯಿ ಸರಕಾರದ ಯುದ್ಧೋತ್ತರ ೧೫ ವರುಷಗಳ ೧೨೦ ಕೋಟಿ ರೂಪಾಯಿಗಳ ಯೋಜನೆಯಿಂದ ಪ್ರಾಂತವು ಸ್ವಾವಲಂಬಿಯಾಗುವದು. ನೀರಾವರಿ ವಿದ್ಯುದ್ದೀಪ ಮೊದಲಾದವು ಈ ಯೋಜನೆಗಳಲ್ಲಿ ಬರುವವು.

ಕೊಲ್ಹಾಪುರ ಸಂಸ್ಥಾನದ ಅಧೀನದಲ್ಲಿದ್ದ ಎಲ್ಲ ನೋಕರರಿಗೆ ಮುಂಬಯಿ ಸರಕಾರದ ನೋಕರರಿಗೆ ಗೊತ್ತು ಮಾಡಿದಷ್ಟು ತುಟ್ಟಿಭತ್ತೆ ಕಳೆದ ಮಾರ್ಚ ತಿಂಗಳಿಂದ ದೊರೆವುದೆಂದು ಮುಂಬಯಿ ಸರಕಾರವು ಅಪ್ಪಣೆ ಹೊರಡಿಸಿದೆ.

ಮುಂಬಯಿ ಪ್ರಾಂತದ ಸೆರೆಮನೆಗಳಲ್ಲಿ ಅನ್ನಸತ್ಯಾಗ್ರಹ ಹೂಡಿದ ಸ್ಥಾನಬದ್ಧರ ಸಂಖ್ಯೆ ೧೬೫ ಕ್ಕೇರಿರುವದಾಗಿ ತಿಳಿಯುತ್ತದೆ. ನಾಲ್ಕು ದಿನಗಳಿಂದ ಅನ್ನಸತ್ಯಾಗ್ರಹ ನಡೆದಿದೆ. ರಾಜಕೀಯ ಕೈದಿಗಳೆಂದು ವರ್ಗೀಕರಿಸಬೇಕೆಂಬುದು ಅವರ ಮುಖ್ಯ ಬೇಡಿಕೆ.

ಮಹಾತ್ಮಾ ಗಾಂಧಿಯವರ ನವಜೀವನ ಲೇಖ ಮತ್ತು ಪುಸ್ತಕಗಳ ಒಡೆತನವು ವಿಶ್ವಾಸನಿಧಿಗೆ ಸೇರಿದ್ದೆಂದು ಅಹಮದಾಬಾದ ಜಿಲ್ಹಾ ನ್ಯಾಯಾಧೀಶರು ತೀರ್ಪು ಇತ್ತು ಮಹಾತ್ಮಾ ಗಾಂಧಿಯವರು ಬರೆದಿಟ್ಟ ಮೃತ್ಯುಪತ್ರವನ್ನು ಕೃತಿಯಲ್ಲಿ ತರಲು ನರಹರಿಭಾಯಿ ಪರೀಖರು ಮಾಡಿಕೊಂಡ ಬಿನ್ನಹಕ್ಕೆ ಮನ್ನಣೆಯಿತ್ತರು.

ಅಹಮದಾಬಾದದಲ್ಲಿ ಅಪರಾಧಿಯೋರ್ವನಿಗೆ ನಾಲ್ಕನೆಯ ಆಡಿಶನಲ್ ಮ್ಯಾಜಿಸ್ಟ್ರೇಟರು ೩ ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದ ಕೂಡಲೆ, ಬಚ್ಚಿಟ್ಟುಕೊಂಡಿದ್ದ ಪಾದರಕ್ಷೆಯನ್ನು ಅವರ ಮೇಲೆ ಎಸೆದನು. ಆದರೆ ಅದು ಅವರಿಗೆ ತಾಕಲಿಲ್ಲ.

ಮದರಾಸ

ಅಖಿಲ ಭಾರತ ಮೂಲಶಿಕ್ಷಣ ಪರಿಷತ್ತು ಕೊಯಿಮತ್ತೂರಿನಲ್ಲಿ ಡಾ. ಝಾಕೀರ ಹುಸೇನರ ಅಧ್ಯಕ್ಷತೆಯಲ್ಲಿ ಕಳೆದವಾರ ನಡೆಯಿತು. ರಾಷ್ಟ್ರದಲ್ಲಿ ಶಿಕ್ಷಣಕ್ಕೆ ಸ್ಥಾನ ದೊರೆತಿದೆ, ಹೊಸ ಪರಿಸ್ಥಿತಿಯಲ್ಲಿ ಶಿಕ್ಷಕರ ಹೊಣೆ ಹೆಚ್ಚಿದೆ, ಶಿಕ್ಷಕರೆಲ್ಲರೂ ಶಾಸ್ತ್ರೀಯುಳ್ಳವರಾಗಿರಬೇಕೆಂದು ಮುಂತಾಗಿ ಡಾ. ಝಾಕೀರ ಹುಸೇನರು ಹೇಳಿದರು. ಮುಂದಿನ ವರುಷದ ಅಧಿವೇಶನ ಉತ್ಕಲದಲ್ಲಿ ಕೂಡುವದು.

ಪ್ರಜಾಪ್ರಭುತ್ವ ರಚನೆಗೆ ಕೆಲಮಟ್ಟಿಗೆ ಹೊಣೆಗಾರವಾದ ವೃತ್ತಪತ್ರಗಳು ಭಾರತದಲ್ಲಿ ಅದನ್ನು ಕಾಪಾಡಲು ತಮ್ಮಿಂದ ಸಾಧ್ಯವಾದುದನ್ನೆಲ್ಲ ಮಾಡುವವು ಎಂದು ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತಿನ ನಿಯುಕ್ತ ಅಧ್ಯಕ್ಷರಾದ ಶ್ರೀ ಸಿ. ಆರ್. ಶ್ರೀನಿವಾಸನ್‌ರು ಅವರ ಗೌರವಾರ್ಥ ಮದರಾಸಿನಲ್ಲಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಭಾಷಣ ಮಾಡುತ್ತ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರು ದೇಶಿ ಭಾಷೆಗಳಲ್ಲಿಯ ಪತ್ರಿಕೆಗಳ ಕಾರ್ಯ ಅತ್ಯಂತ ಮಹತ್ವದ್ದಾಗಿದೆಯೆಂದು ಹೇಳಿದರು.

ಮದರಾಸ ಪ್ರಾಂತದಲ್ಲಿ ಜಾರಿಯಲ್ಲಿರುವ ಮಾರಾಟಕರ ಪದ್ಧತಿಯ ಮೇರೆಗೆ ತಿರುವಾಂಕೂರಿನಲ್ಲಿಯೂ ಮಾರಾಟಕರವನ್ನು ಜಾರಿಯಲ್ಲಿತರಬೇಕೆಂದು ತಿರುವಾಂಕೂರು ಸರಕಾರವು ನಿರ್ಧರಿಸಿರುವದು. ಮಾರಾಟಕರವನ್ನು ೩ ಪೈಯಿಂದ ೨ ಆಣೆಯ ವರೆಗೆ ತೆಗೆದುಕೊಳ್ಳಲಾಗುವದು.

ಹೊಸದಿಲ್ಲಿ

ಇಂದೂರಿನಲ್ಲಿ ಸೇರಿದ್ದ ರಾಷ್ಟ್ರೀಯ ಮಜದೂರ ಸಂಘದ ಜನರಲ್ ಕೌನ್ಸಿಲ್ಲಿನಲ್ಲಿ ಮುಂಬರುವ ವರ್ಷದ ಅಧಿಕಾರಿ ವರ್ಗದ ಚುನಾವಣೆ ನಡೆಯಿತು. ಶ್ರೀ ಖಂಡೂಭಾಯಿ ದೇಸಾಯರು ಅಧ್ಯಕ್ಷರು, ಹರಿಹರನಾಥ ಶಾಸ್ತ್ರಿಗಳು ಜನರಲ್ ಸೆಕ್ರೆಟರಿಗಳು ಮತ್ತು ಶಾಂತಿಲಾಲ ಶಹಾ ಇವರು ಕೋಶಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಬ್ಯಾ. ಸಾವರಕರರ ಜನ್ಮದಿವಸವಾದ ಮೇ ೨೮ ಕ್ಕೆ ಹಿಂದೂ ಮಹಾಸಭಾ ದಿವಸವನ್ನಾಚರಿಸಬೇಕು, ಮಹಾಸಭೆಯ ಹೊಸ ಕಾರ್ಯಕ್ರಮವನ್ನು ವಿವರಿಸಿ ಹೇಳುವದಕ್ಕಾಗಿ ಅಂದು ಎಲ್ಲ ಕಡೆ ಸಭೆಗಳನ್ನು ಸೇರಿಸಬೇಕೆಂದು ಮುಂತಾಗಿ ಮಹಾಸಭೆಯ ಕಾರ್ಯಕಾರಿ ಮಂಡಲವು ನಿರ್ಣಯಿಸಿದೆ.

ಪ್ರಾಂತೀಯ ಕಾಂಗ್ರೆಸ ಸಮಿತಿ, ಹರಿಜನ ಸೇವಕ ಸಂಘ, ಹಿಂದುಸ್ಥಾನ ಮಜದೂರ ಸಂಘ, ಅ. ಭಾ. ನೇಕಾರ ಸಂಘ ಇವುಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಭೆ ಹೊಸದಿಲ್ಲಿಯಲ್ಲಿ ೧೭-೧೮ ಮತ್ತು ೧೯ ಕ್ಕೆ ನಡೆಯುವದು.

ಕಾಂಗ್ರೆಸ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಸಂಯುಕ್ತ ಪ್ರಾಂತದ ಮುಖ್ಯ ಮಂತ್ರಿಗಳಿಗೆ ಬರೆದ ಗುಪ್ತ ಪತ್ರವನ್ನು ಅನಧಿಕೃತವಾಗಿ ಪ್ರಸಿದ್ಧಿಸಿದ್ದಕ್ಕಾಗಿ ಘಟನಾ ಸಮಿತಿಯ ಕಾಂಗ್ರೆಸ ಸದಸ್ಯರಾದ ಶಿವನಲಾಲ ಸಕ್ಸೇನಾ ಇವರ ಮೇಲೆ ಏ ಆಯ ಸಿ ಸಿ ಯು ಕ್ರಮ ತೆಗೆದುಕೊಳ್ಳುವ ಬಗ್ಗೆ ವಿಚಾರ ನಡೆಸಿದೆಯೆಂದು ತಿಳಿಯುತ್ತದೆ– ಸಕ್ಸೇನಾ ಇವರು ಈ ಪತ್ರವನ್ನು ಕರಪತ್ರದ ರೂಪದಲ್ಲಿ ಪ್ರಸಿದ್ಧಿಸಿ ಯುಕ್ತಪ್ರಾಂತ ಬಿಹಾರ ಗಿರಣಿಯ ಮಜದೂರ ಮಹಾಮಂಡಳದ ಬಗ್ಗೆ ರಾಷ್ಟ್ರಪತಿಗಳ ತೀರ್ಪು ಎಂದು ಅದಕ್ಕೆ ಶೀರ್ಷಿಕೆಯನ್ನು ಕೊಟ್ಟಿದ್ದರಂತೆ.

ಮಧ್ಯಭಾರತ ಒಕ್ಕೂಟದಲ್ಲಿ ಶ್ರೀ ಗೋಪಾಲಕೃಷ್ಣ ವಿಜಯವರ್ಗೀಯ ಇವರ ನೇತೃತ್ವದಲ್ಲಿ ಹೊಸ ಮಂತ್ರಿಮಂಡಲ ಸ್ಥಾಪಿತವಾಗಿದೆ. ಇದರಲ್ಲಿ ಟಿ. ಎಸ್. ಗೋಖಲೆ (ಗ್ವಾಲೇರ) ಶ್ಯಾಮಲಾಲ ಮಂಡಲಿ (ಶಾಸನ ಸಭಾ ಕಾಂಗ್ರೆಸ ಪಕ್ಷದ ಕಾರ್ಯದರ್ಶಿ) ರಾಮೇಶ್ವರ, ಹಯಾಲ ಇಂದೂರ 'ನಂದಲಾಲ ಜೋಶಿ (ಮಧ್ಯಭಾರತದ ಹಿಂದಿನ ಮಂತ್ರಿಗಳು) ಇವರು ಇರುವರು, ಮಧ್ಯ ಭಾರತದ ರಾಜಪ್ರಮುಖರಾದ ಗ್ವಾಲೇರ ಮಹಾರಾಜರ ಸಮ್ಮುಖದಲ್ಲಿ ಪ್ರತಿಜ್ಞಾ ವಿಧಿ ಜರುಗಿತು.

ಭಾರತವನ್ನು ಆಡಳತೆಗೆ ಅನುಕೂಲವಾಗುವಂತೆ ಘಟಕಗಳಲ್ಲಿ ವಿಭಾಗಿಸಬೇಕು. ಆದರೆ ಒಂದೇ ಪಾರ್ಲಮೆಂಟು ಮತ್ತು ಮಂತ್ರಿ ಮಂಡಲದಿಂದ ಭಾರತದ ಆಡಳತೆ ಸಾಗಬೇಕೆಂಬ ತಳಹದಿಯ ಮೇಲೆ ಸದ್ಯಕ್ಕೆ ಸ್ವೀಕರಿಸಲಾಗುವ ಘಟನೆಯನ್ನು ಬದಲಿಸಬೇಕು ಎಂದು ಡಾ. ಪಂಜಾಬರಾವ ದೇಶಮುಖರು ಘಟನಾ ಸಮಿತಿಯ ಬರುವ ಅಧಿವೇಶನದಲ್ಲಿ ಗೊತ್ತುವಳಿ ತರಲಿರುವರು.

ಕೇಂದ್ರ ಸರಕಾರದ ಆಹಾರ ಮಂತ್ರಿಗಳಾದ ಮಾನ್ಯ ಜಯರಾಮದಾಸ ದೌಲತರಾಮರು ಪ್ರಾಂತೀಯ ಸರಕಾರಗಳೊಂದಿಗೆ ಅವುಗಳ ಆಹಾರ ಉತ್ಪಾದನೆ ಯೋಜನೆಗಳನ್ನು ಚರ್ಚಿಸಲು ಮತ್ತು ಅವು ತೀವ್ರವೇ ಕಾರ್ಯರೂಪದಲ್ಲಿ ಇಳಿಯುವಂತೆ ನೋಡಿಕೊಳ್ಳಲು ಪ್ರಾಂತಗಳಲ್ಲಿ ಪ್ರವಾಸಕ್ಕೆ ಹೊರಟಿದ್ದಾರೆ. ಅವರು ೭ ನೇ ತಾರೀಕು ಪೂರ್ವಪಂಜಾಬ ಮಂತ್ರಿಗಳನ್ನು ಕಂಡು ಪಡಭೂಮಿ ಸಾಗುವಳಿ ಕುರಿತು ಚರ್ಚಿಸಿದರು.

ಹಿಂದುಸ್ಥಾನದಲ್ಲಿ ಕಳೆದ ಐದು ವರುಷಗಳ ಸರಾಸರಿಯನ್ನು ನೋಡಿದರೆ ಪ್ರತಿವರುಷ ೩೧೯೭೨೦೦೦ ಟನ್ ಮುಂಗಾರಿ ಮತ್ತು ೧೧೪೩೫೦೦೦ ಟನ್ನ ಬಿಳಿ ಜೋಳದ ಉತ್ಪತ್ತಿಯಾಗಿರುವದೆಂದು ಗೊತ್ತಾಗುತ್ತದೆ.

ಸಾರ್ವಜನಿಕರಿಗಾಗಿ ಆಯಾತ ಮಾಡಲ್ಪಟ್ಟ ಆಹಾರ ಧಾನ್ಯಗಳನ್ನು ಮೂಲ ಬೆಲೆಗಿಂತ ಕಡಮೆ ಬೆಲೆಗೆ ಮಾರಾಟ ಮಾಡುವದಕ್ಕಾಗಿ ಹಿಂದುಸ್ಥಾನ ಸರಕಾರದವರು ೧೯೪೮-೪೯ ನೇ ವರುಷ ೨೬೫೨೦೦,೦೦೦ ರೂಪಾಯಿಗಳ ಕಾಣಿಕೆಯನ್ನು ಕೊಟ್ಟಿರುವದೆಂದು ತಿಳಿಯುತ್ತದೆ.

ಡಾ. ಸುಬ್ಬರಾಯನ್‌ರ ಆವಾರದಲ್ಲಿ ಹೊಕ್ಕು ಅವಾಚ್ಯ ಶಬ್ದಗಳಿಂದ ಬೈದು ಗೊಂದಲ ಹಾಕಿದ್ದಕ್ಕೆ ಮತ್ತು ಅವರ ಮೇಲೆ ಬಡಿಗೆಯನ್ನೆಸೆದು ಅವರನ್ನು ಗಾಯಗೊಳಿಸಲು ಪ್ರಯತ್ನಿಸಿದ್ದಕ್ಕೆ ಸೇಲಮದ ರಾಜಾಗೌಂಡರ ಎಂಬವರಿಗೆ ೧ ತಿಂಗಳು ಶಿಕ್ಷೆ ೫೦ ರೂ. ದಂಡ ಇಲ್ಲವೆ ಒಂದು ವಾರ ಶಿಕ್ಷೆ ವಿಧಿಸಲಾಯಿತು. ಅಲ್ಲದೆ ೩ ತಿಂಗಳ ಸದ್ವರ್ತನದ ಜಾಮೀನು ತೆಗೆದುಕೊಳ್ಳಲಾಯಿತು.

ಕರ್ನಾಟಕ ಏಕೀಕರಣಕ್ಕಾಗಿ ದಿಲ್ಲಿಗೆ ಎಂಟು ಜನರ ಶಿಷ್ಟಮಂಡಲ

ಕಾಂಗ್ರೆಸ ವರಿಷ್ಠರೊಡನೆ ಚರ್ಚೆಯನಂತರ ಕೊನೆಯ ಕ್ರಮ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನ ಮಹತ್ವದ ನಿರ್ಣಯ

"ಕರ್ನಾಟಕ ಪ್ರಾಂತ ರಚನೆಯನ್ನು ಸಾಧಿಸುವದಕ್ಕಾಗಿ ಕೊನೆಯ ನಿರ್ಣಯವನ್ನು ಸ್ವೀಕರಿಸುವ ಮೊದಲು ಕಾಂಗ್ರೆಸ ವರಿಷ್ಠರ ಕಡೆಗೆ ಎಂಟು ಜನರ ಶಿಷ್ಟಮಂಡಲವೊಂದನ್ನು ಕಳಿಸಿ ಕರ್ನಾಟಕ ಪ್ರಾಂತವು ಕೂಡಲೆ ಆಗಬೇಕೆಂಬ ಬಗ್ಗೆ ಕನ್ನಡಿಗರಲ್ಲಿ ಇದ್ದ ತೀವ್ರ ಆಸಕ್ತಿಯನ್ನು ಅವರ ಮೇಲೆ ಬಿಂಬಿಸಬೇಕು ಈ ಶಿಷ್ಟಮಂಡಲವು ತನ್ನ ವರದಿಯನ್ನು ೧೦-೬-೪೯ ರೊಳಗೆ ಒಪ್ಪಿಸಬೇಕು ಇಂದಿನ ಸಭೆಯು ಆ ದಿನದ ವರೆಗೆ ಮುಂದುವರಿಯಬೇಕು ಮತ್ತು ಆ ಸುಮಾರಿಗೆ ಸಭೆ ಕೂಡಿ ಕೊನೆಯ ನಿರ್ಣಯ ಕೈಕೊಳ್ಳಬೇಕು."

ಎಂದು ಹುಬ್ಬಳ್ಳಿಯಲ್ಲಿ ಕಳೆದ ೯ ನೇ ತಾರೀಕಿನ ದಿನ ವಾಣಿಜ್ಯ ವಿದ್ಯಾಲಯದಲ್ಲಿ ಸೇರಿದ್ದ ಕರ್ನಾಟಕ ಪ್ರಾಂತೀಯ ಕಾಂಗ್ರೆಸಿನ ವಿಶೇಷ ಸಾಧಾರಣ ಸಭೆಯಲ್ಲಿ ಶ್ರೀ ಮಾಗಡಿಯವರು ಮಂಡಿಸಿದ ಗೊತ್ತುವಳಿ ಸ್ವೀಕೃತವಾಯಿತು.

ಈ ಶಿಷ್ಟಮಂಡಲದಲ್ಲಿ ಶ್ರೀ ಸಿದ್ಧವ್ವನಹಳ್ಳಿ ನಿಜಲಿಂಗಪ್ಪ (ಅಧ್ಯಕ್ಷರು) ರಂಗನಾಥ ದಿವಾಕರ, ಮಲ್ಲನಗೌಡ ಪಾಟೀಲ, ಟೇಕೂರು ಸುಬ್ರಹ್ಮಣ್ಯಂ, ಕೆ. ಆರ್. ಕಾರಂತ, ವೀರನಗೌಡ ಪಾಟೀಲ, ಅಂದಾನೆಪ್ಪ ದೊಡ್ಡಮೇಟಿ ಮತ್ತು ದ. ಪ. ಕರಮರಕರ ಈ ಎಂಟು ಜನರು ಇರಬೇಕೆಂದು ಗೊತ್ತಾಯಿತು.

ಪ್ರಾಂತೀಯ ಕಾಂಗ್ರೆಸ ಸಮಿತಿಯ ಸಭೆ ಅಂದು ಸಾಯಂಕಾಲ ೪ ಗಂಟೆಗೆ ಪ್ರಾರಂಭವಾಗಿ ಬೆಳಗಿನ ೩ ಗಂಟೆಯ ವರೆಗೆ (ನಡುವೆ ಊಟ ಫಲಾಹಾರಕ್ಕಾಗಿ ಬಿಡುವು ಇದ್ದಿತು). ಚರ್ಚೆಯಾಗಿ ಕೊನೆಗೆ ಮೇಲೆ ಹೇಳಿದ ನಿರ್ಣಯವು ಸ್ವೀಕೃತವಾಯಿತು. ಪ್ರಾರಂಭದಲ್ಲಿ ವರದಿ ವಾಚನ ಮೊದಲಾದ್ದು ನಡೆದು ಪ್ರಾಂತೀಯ ಕಾಂಗ್ರೆಸ ಸಮಿತಿಯ ಹೊಸ ಘಟನೆಯ ಕರಡಿನ ಚರ್ಚೆ ನಡೆಯಿತು. ಸಭೆಗೆ ಸುಮಾರು ೩೦ ಜನ ಸದಸ್ಯರಲ್ಲದೆ ಹಲವು ಆಮಂತ್ರಿತರೂ ಬಂದಿದ್ದರು.

ಮದರಾಸಿನ ಹಿಂದಿನ ಮಂತ್ರಿಗಳೂ ದಕ್ಷಿಣ ಕನ್ನಡ ಜಿಲ್ಹೆಯ ಮುಂದಾಳುಗಳೂ ಆದ ಶ್ರೀ ಕೆ. ಆರ್. ಕಾರಂತರು ಮುಖ್ಯ ಗೊತ್ತುವಳಿಯನ್ನು ಮಂಡಿಸಿದರು. ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರು ಅದಕ್ಕೆ ಅನುಮೋದನವಿತ್ತರು. ಅವರ ಮುಖ್ಯಾಶಯ ಹೀಗೆ ಇದ್ದಿತು.

ಭಾಷಾನ್ವಯ ಪ್ರಾಂತರಚನೆಯ ಸಂಬಂಧದಲ್ಲಿ ತ್ರಿಮೂರ್ತಿಗಳು ಹೇಳುವದನ್ನು ಈ ಸಭೆ ಒಪ್ಪುವದಿಲ್ಲ. ಅವರು ಮುಂದೆ ಮಾಡಿದ ಕಾರಣಗಳು ಸರಿಯಾಗಿರುವದಿಲ್ಲ ಅದು ದರ್ ಸಮಿತಿಯ ವರದಿಯ ಪುನರುಚ್ಚಾರಣೆಯಾಗಿದೆಂದು ಸಭೆಯ ಅಭಿಪ್ರಾಯ. ಸಮೀಕರಣ ಹೊಂದಿದ ಸಂಸ್ಥಾನಗಳನ್ನು ಸಮೀಪದ ಪ್ರಾಂತಗಳಲ್ಲಿ ಕೂಡಿಸಿ ಅವುಗಳ ಪ್ರಗತಿಯನ್ನು ಸಾಧಿಸುವದು ಅವಶ್ಯವಾಗಿದೆ. ಅನೇಕ ವರುಷಗಳ ಹಿಂದೆ ಕೊಟ್ಟ ಅಭಿವಚನವನ್ನು ಭಾಷಾವಾರ ಪ್ರಾಂತರಚನೆಯಿಂದ ಪಾಲಿಸಿದಂತಾಗುವದು, ಹಾಗೆ ಮಾಡದಿದ್ದರೆ ವಚನಭಂಗ ಮಾಡಿದಂತಾಗುವದಲ್ಲದೆ ಕಾಂಗ್ರೆಸ ವಿರೋಧಿಗಳ ಕೈಯಲ್ಲಿ ಜನತೆಯನ್ನು ಕೊಟ್ಟಂತಾಗುವದು. ಈ ಪ್ರಶ್ನೆಯನ್ನು ಮುಂದೂಡಿ ಜನತೆಗೆ ಆಹ್ವಾನ ಕೊಡುವದು ಸರಿಯಲ್ಲ. ಮೈಸೂರನ್ನು ಬಿಟ್ಟು ಕೇವಲ ಒಕ್ಕೂಟಭಾಗಗಳ ಏಕೀಕರಣದಿಂದ ಸ್ವತಂತ್ರ ಪ್ರಾಂತರಚನೆಯಾಗಬಾರದೆಂಬ ತ್ರಿಮೂರ್ತಿಗಳ ಹೇಳಿಕೆಯನ್ನು ಈ ಸಭೆ ಖಂಡಿಸುತ್ತದೆ. ಕರ್ನಾಟಕ ಸಮಸ್ಯೆ ಬಗೆಹರಿಯಬೇಕಾದರೆ ಮೈಸೂರನ್ನೊಳಗೊಂಡ ಕರ್ನಾಟಕವೇ ಯೋಗ್ಯಮಾರ್ಗವೆಂದು ಈ ಸಭೆಯ ಅಭಿಪ್ರಾಯ. ಇದು ಅಷ್ಟೇನು ಕಠಿನವಾದ ಪ್ರಶ್ನೆಯೂ ಅಲ್ಲ. ಆದುದರಿಂದ ಕೇಂದ್ರ ಸರಕಾರ, ಕಾಂಗ್ರೆಸ ಕಾರ್ಯಸಮಿತಿ, ಮೈಸೂರು ಜನತೆ ಮತ್ತು ಮೈಸೂರು ಮಹಾರಾಜರು ಇವರೆಲ್ಲರಿಗೂ ಈ ದಿಸೆಯಲ್ಲಿ ಶಕ್ಯವಿದ್ದ ಕ್ರಮ ಕೈಕೊಳ್ಳಲು ಈ ಸಭೆ ಬಿನ್ನವಿಸುತ್ತದೆ. ಪರಸ್ಪರ ಸೌಹಾರ್ದದಿಂದಲೆ ಇದನ್ನು ಸಾಧಿಸಬೇಕು. ಆದರೆ ಕೇಂದ್ರ ಸರಕಾರ ಇಲ್ಲವೆ ಕಾಂಗ್ರೆಸ ಕಾರ್ಯಸಮಿತಿ ಹೀಗೆ ಮಾಡದಿದ್ದರೆ ಕಾಂಗ್ರೆಸ ಸಮಿತಿಯಲ್ಲಿಯ ಮತ್ತು ಶಾಸನಸಭೆಗಳಲ್ಲಿಯ ಸದಸ್ಯರು ತಮ್ಮ ಸ್ಥಳಗಳಿಗೆ ರಾಜೀನಾಮೆ ಕೊಡಬೇಕಾಗುವದೆಂಬದನ್ನು ಈ ಸಭೆ ಸ್ಪಷ್ಟಪಡಿಸುತ್ತದೆ. ಇದನ್ನೆಲ್ಲ ಕಾಂಗ್ರೆಸ ವರಿಷ್ಠರಿಗೆ ತಿಳಿಸಲು ಒಂದು ಸಮಿತಿಯನ್ನು ಈ ಸಭೆ ನೇಮಿಸುತ್ತದೆ. ಅವರು ೧೦-೬-೪೯ ರೊಳಗಾಗಿ ಕಾಂಗ್ರೆಸ ವರಿಷ್ಠರನ್ನು ಕಂಡು ವಾತುಕತೆಯಾಡಿ ಈ ಸಭೆಗೆ ವರದಿಯನ್ನೊಪ್ಪಿಸಬೇಕು.

ಈ ಗೊತ್ತುವಳಿಯ ಮೇಲೆ ಅನುಕೂಲ ಪ್ರತಿಕೂಲ ಭಾಷಣಗಳಾಗಿ ಕೊನೆಗೆ ಇದು ಹಿಂತೆಗೆದುಕೊಳ್ಳಲ್ಪಟ್ಟಿತು. ಶ್ರೀ ಮಾಗಡಿಯವರು ಮಂಡಿಸಿದ್ದ ಗೊತ್ತುವಳಿ ಸ್ವೀಕೃತವಾಗಿ ಸಭೆ ಕೊನೆಗಂಡಿತು.

ತಪ್ಪು ಭಾವನೆ

(೧೩ನೇ ಪುಟದಿಂದ)

ಗುಣಬಲದಿಂದ ತಂತಮ್ಮ ಪ್ರಾಂತಗಳಲ್ಲಿ ಗೌರವಿತರಾದ ಮುಂದಾಳುಗಳು. ಅವರಲ್ಲಿ ಕೆಲವರು ತಮ್ಮ ಮೋಲ್ಪಂತಿಯಿಂದ ನನ್ನ ಜೀವನದ ಮೇಲೆ ಪ್ರಭಾವ ಬೀರಿದವರಿದ್ದರೆ ಉಳಿದವರಿಗೆ ನನ್ನನ್ನು ಸಮಾಧಿಕನಾದ ಸಹ ಯೋಗಿಯೆಂದಲ್ಲದೆ ಅದಕ್ಕಿಂತ ಹೆಚ್ಚೆಂದು ಭಾವಿಸಲು ಕಾರಣವಿಲ್ಲ. ನನ್ನ ಅಭಿಮತವನ್ನು ಆದರದಿಂದ ಗಮನಿಸುವದೇ ಅವರ ಸೌಜನ್ಯದ ಸಂಕೇತ.

ಅಧಿಕಾರದ ಗದ್ದುಗೆಯನ್ನು ಯಾರು ಏರಿದರೂ ಅವರ ಮುಂದೆ ಭಟ್ಟಂಗಿಗಳೂ ಹೇಡಿಗಳೂ ಸೇರಿ ಜೀಯೆಂದು ಅನುಗ್ರಹಪ್ರಾರ್ಥಿಗಳಾಗಿ ನಮಿಸುವರು. ಅವರಿಗೆ ಸ್ವಂತಅಸ್ತಿತ್ವವೆಂಬದೇ ಇರುವದಿಲ್ಲ. ಇತ್ತ ಅಸೂಯೆಗೆ ಪರದೋಷಾನ್ವೇಷಣೆಯ ಬಿಡಲಾರದ ಚಟ ಅಂಟಿಕೊಂಡಿರುತ್ತದೆ. ಒಬ್ಬನು ಅಧಿಕಾರಸ್ಥಾನವನ್ನೇರಿದ ಕ್ಷಣವೇ ಮೊದಲು ಅವನನ್ನು ಗೌರವಿಸುತಿದ್ದವರೂ ಅವನನ್ನು ಮೇಲ್ಪಂತಿಯಾಗಿಟ್ಟುಕೊಂಡಿದ್ದವರೂ ಕೂಡ ತೆಗಳತೊಡಗುವದು ಅಸೂಯೆಯ ಮಹಿಮೆ. ಅಧಿಕಾರ ಸ್ಥಾನದಲ್ಲಿದ್ದವರು ಅಧಃಪತನ ಹೊಂದಲಿ ಬಿಡಲಿ, ಅಸೂಯಾಪರದೂಷಕನು ಕೀಳ್ಗಿಳಿದೇ ಇಳಿಯುವನು. ಒಬ್ಬನು ಅಧಿಕಾರಸ್ಥಾನವನ್ನು ಸ್ವೀಕರಿಸುವದೇ ಘೋರ ಅಪರಾಧವೆಂದೂ ಅದ್ದರಿಂದ ಅವನ ಕಾಲದಲ್ಲಿ ಏನು ನಡೆದರೂ ಅದಕ್ಕಾಗಿ ಅವನನ್ನೇ ಜರೆಯಬೇಕೆಂದೂ ನಿಯಮವೋ ಏನೋ. ಜನರ ತಪ್ಪುಗಳನ್ನು ಕೂಡ ಅವನ ಮೇಲೆಯೆ ಹೊರಿಸಲಾಗುತ್ತದೆ. ಅವನ ಚಿಲ್ಲರೆ ತಪ್ಪುಗಳೂ ಗುಡ್ಡದಂತೆ ಕಾಣುತ್ತವೆ.

ಗಾಂಧೀಜಿಯ ಹೆಸರನ್ನು ಗಳಿಗೆಗಳಿಗೆಗೂ ಉಚ್ಚರಿಸುವವರು ಮಂತ್ರಿಗಳು ಮಾತ್ರವಲ್ಲ. ನಮ್ಮಲ್ಲಿ ಪ್ರತಿಯೊಬ್ಬನೂ ಹಾಗೆ ಮಾಡುತ್ತಾನೆ. ಮೇಲಿನ ಪತ್ರಕಾರನೂ ಗಾಂಧೀಜಿಯ ಹೆಸರು ತೆಗೆದುಕೊಂಡೇ ಬರೆಯುತ್ತಾನೆ. ಎಲ್ಲ ಟೀಕಾಕಾರರೂ ಹಾಗೆಯೆ. ಆದರೂ ಅವರಲ್ಲಿ ಎಷ್ಟು ಜನರು ನೂಲುತ್ತಾರೆ? ಎಷ್ಟು ಜನರು ಹರಿಜನರಿಗೂ ನಿರಾಶ್ರಿತರಿಗೂ ಸಹಾಯ ಮಾಡುತ್ತಾರೆ? ಎಷ್ಟು ಜನರು ಸರಕಾರದ ಕರಗಳನ್ನು ಪ್ರಾಮಾಣಿಕತೆಯಿಂದ ತೆರುತ್ತಾರೆ? ಒಳ್ಳೆಯ ಸರಕಾರವನ್ನು ಸ್ಥಾಪಿಸುವ ರೀತಿ ಇದಲ್ಲ. ಜನರು ಸುಧಾರಿಸಿದರೆ ಸರಕಾರ ಸುಧಾರಿಸಲೇಬೇಕಾಗುತ್ತದೆ. ಜನರು ಸುಧಾರಿಸದಿದ್ದರೆ ಅವತಾರಪುರುಷನೂ ಸರಕಾರವನ್ನು ಸುಧಾರಿಸಲಾರನು. ಆದುದರಿಂದ ನಾನು ಸರಕಾರಕ್ಕಿಂತ ಜನರಿಗೇ ಮಹತ್ವ ಕೊಡುತ್ತೇನೆ. ರಾಜನಂತೆ ಪ್ರಜೆ (ಯಥಾ ರಾಜಾ ತಥಾ ಪ್ರಜಾಃ) ಯೆಂಬ ಸೂಕ್ತಿ ನನಗೆ ಸಮ್ಮತವಿಲ್ಲ. ಪ್ರಜೆಯಂತೆ ರಾಜ (ಯಥಾ ಪ್ರಜಾಸ್ತಥಾ ರಾಜಾ) ಎಂಬದೇ ಹೆಚ್ಚು ಸಮಂಜಸವೆಂದು ನಾನೆನ್ನುವೆ. ಜನರ ಯೋಗ್ಯತೆ ಮೀರಿ ಎಂದೆಂದೂ ಸರಕಾರದ ಯೋಗ್ಯತೆಯಿರದು.

ಚುನಾವಣೆ ಹೊಂದಿದ ಮಂತ್ರಿಗಳನ್ನು ತಳ್ಳಿಹಾಕುವದು ಅಷ್ಟೇನೂ ಕಠಿನವಲ್ಲ. ನಿಜವಾಗಿ ಕೆಲ ಪ್ರಾಂತಗಳಲ್ಲಿ ಈಗಾಗಲೆ ಒಳ ಪೈಪೋಟಿಗಳಿಂದ ಹೀಗೆ ತಳ್ಳಿಹಾಕಿದ ಉದಾಹರಣೆಗಳುಂಟು. ಮುಂಬಯಿ ಮೊದಲಾದ ಕೆಲ ಪ್ರಾಂತಗಳ ಮಂತ್ರಿಮಂಡಲಗಳ ಕಚ್ಚಾಟವಿಲ್ಲದೆ ಒಮ್ಮನದಿಂದ ಕೆಲಸ ಮಾಡುತ್ತಿವೆಯೆಂದು ನಾವು ಕೃತಜ್ಞರಾಗಿರಬೇಕು. ಜನಪ್ರತಿನಿಧಿಗಳು ಅವರನ್ನು ತಳ್ಳಬಯಸಿದರೆ ಶ್ರೀ ಖೇರ, ಮುರಾರಜಿ ದೇಸಾಯಿ, ದಿನಕರರಾವ ದೇಸಾಯಿ, ವೈಕುಂಠಭಾಯಿ ಮೆಹತಾರಂಥವರು ಹೇಗಾದರೂ ಮಾಡಿ ಅಧಿಕಾರದಲ್ಲಿ ಉಳಿಯಲು ಹೆಣಗುವವರಲ್ಲ. ಅವರ ಸದುದ್ದೇಶದಲ್ಲಾಗಲಿ ಸಾಮರ್ಥ್ಯದಲ್ಲಾಗಲಿ ಸಂದೇಹ ತಾಳಲು ಅವಕಾಶವೇ ಇಲ್ಲ. ಅದ್ದರಿಂದ ಅವರನ್ನು ತಳ್ಳಿಹಾಕುವ ಮೊದಲು ಆಡಳಿತೆಯನ್ನು ಸುಧಾರಿಸುವದಕ್ಕಾಗಿ ಅವರ ಸ್ಥಾನಕ್ಕೆ ಬರಬಹುದಾದ ಜನರಾರೆಂದು ವಿಚಾರಿಸುವದೊಳಿತು. ಅವರ ಸ್ಥಾನಕ್ಕೆ ಬರಬಹುದಾದವರಿಗೂ ಮಾತ್ಸರ್ಯದ ಜೊತೆತ ಬಿದ್ದೇ ಬೀಳುವದೆಂದೂ ಇಂದಿನ ಅಧಿಕಾರಿಗಳಂತೆ ಅವರೂ ನಿಂದಿಸಲ್ಪಡುವರೆಂದೂ ಖಂಡಿತವಾಗಿ ಹೇಳಬಹುದು.

ರಾಮರಾಜ್ಯ ಕೈಗೂಡಿಬಿಟ್ಟದೆಯೆಂದು ಯಾರೂ ಹೇಳಿಕೊಳ್ಳುವದಿಲ್ಲ. ಆದರೆ ಒಂದು ಅಂಶದಲ್ಲಿ ಮಾತ್ರ ಅದು ಕೈಗೂಡಿದೆಯೆಂದು ಒಪ್ಪಬೇಕು. ಬ್ರಿಟಿಶರ ಆಳಿಕೆಯಲ್ಲಿ ಸರಕಾರಿ ಅಧಿಕಾರಿಗಳ ಅಥವಾ ಸರಕಾರದ ಅಪರಾಧಗಳಿಗೆ ಪ್ರಮಾಣ ದೊರೆತಾಗ ಕೂಡ, ಮುಂದಾಳುಗಳು ಕೂಡ ಅವುಗಳನ್ನು ಟೀಕಿಸಲು ಧೈರ್ಯಪಡುತಿರಲಿಲ್ಲ. ತಮ್ಮ ಟೀಕೆ ಪೀನಲ್ ಕೋಡಿನ ೧೨೪-ಅ ಕಲಮಿನ ಕಕ್ಷೆಯೊಳಗೆ ಬಾರದಂತೆ ಅವರು ಎಚ್ಚರ ವಹಿಸುತಿದ್ದರು. ಜೊಣೆಗಾರ ಸರಕಾರದಲ್ಲಿ, ರಾಮರಾಜ್ಯದ ಅಗಸನಂತೆ, ಬೇಕಾದಂತೆ, ಹೊಣೆಗೇಡಿತನದಿಂದ ಕೂಡ, ಮಂತ್ರಿಗಳ ಬಗ್ಗೆ ಆಡಿಕೊಳ್ಳಲು, ಬರೆಯಲು ಮತ್ತು ಪ್ರಚಾರಮಾಡಲು ಎಲ್ಲರಿಗೂ ಸ್ವಾತಂತ್ರ್ಯ ಮತ್ತು ಧೈರ್ಯ ಬಂದಿದೆ. ಸ್ವಾತಂತ್ರ್ಯದಿಂದ ಜನರಿಗೆ ಇಷ್ಟಾದರೂ ಸಿಕ್ಕಿದೆ. ಇದು ನಿಜವಾಗಿ ದೊಡ್ಡ ಅಧಿಕಾರವೇ ಸೈ, ಅದನ್ನು ಯೋಗ್ಯರೀತಿಯಲ್ಲಿ ಉಪಯೋಗಿಸಿದರೆ ಸ್ವರಾಜ್ಯ ದಕ್ಕುವದು. ಇಲ್ಲದಿದ್ದರೆ ಅದು ಪುನಃ ಕಳೆದುಹೋದರೂ ಹೋಗಬಹುದು. ನಮಗೆ ಕಮ್ಯುನಿಸ್ಟ್ ಆಳಿಕೆ ಬೇಕಾಗಿದ್ದರೆ ಅದೂ ಸಿಕ್ಕಬಹುದು. ಆದರೆ ಕಮ್ಯುನಿಸ್ಟ್ ಸರಕಾರದಲ್ಲಿ ಯಾರೂ ಸರಕಾರವನ್ನು ಟೀಕಿಸುವಂತಿಲ್ಲವೆಂದು ನಾವು ನೆನೆಪಿಡಬೇಕು. ಅಂಥ ನಿಂದಕನು ತನ್ನ ತಲೆಯನ್ನಾದರೂ ಕಳೆದುಕೊಳ್ಳಬೇಕು, ದೇಶವನ್ನಾದರೂ ತೊರೆಯಬೇಕಾದೀತು.

ವರ್ಧಾ — ಕಿ. ಘ. ಮಶ್ರೂವಾಲಾ

ತಾ ೨೬-೪-೪೯

'ನಯೀ ತಾಲೀಮ್' ಮತ್ತು 'ಯುನೆಸ್ಕೊ'

(ಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಏಶಿಯ ಮತ್ತು ದೂರ ಪೂರ್ವ ರಾಷ್ಟ್ರಗಳ ಸಲಹೆಗಾರರಾದ ಡಾ. ಕೊ-ಯೂ-ಕೋ ಇವರು ೧೫-೯-೪೯ ನೆಯ ದಿನ ಸೇವಾಗ್ರಾಮದಲ್ಲಿ ಹಿಂದುಸ್ತಾನೀ ಮೂಲ ಶಿಕ್ಷಣ ಕೇಂದ್ರವನ್ನು ಸಂದರ್ಶಿಸಿದರು. ಆ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅವರು ಕೊಟ್ಟ ಸಂದೇಶದ ಮಹತ್ವದ ಭಾಗವಿಂತಿದೆ. —ಸಂ.)

೧೯೪೭ ನೆಯ ಇಸ್ವಿಯ ಸಪ್ಟೆಂಬರ ತಿಂಗಳ ಕೊನೆಯ ಸುಮಾರಿಗೆ ದಿಲ್ಲಿಯಲ್ಲಿ ಬಿರ್ಲಾಭವನದಲ್ಲಿ, ಗಾಂಧೀಜಿ ನನ್ನನ್ನು ಸ್ವಾಗತಿಸಿ ಅರ್ಧ ಗಂಟೆಯ ವರೆಗೆ ಮಾತುಕತೆ ನಡೆಸುವ ಭಾಗ್ಯ ನನ್ನದಾಗಿತ್ತು. ಮೂಲ ಶಿಕ್ಷಣದ ಸಂಬಂಧದಲ್ಲಿ ಅವರು ನನ್ನೊಡನೆ ಮಾತಾಡಿದರು. ಆಗ ಅವರು ಈ ಸ್ಥಳಕ್ಕೆ ಬಂದು ಈ ಶಿಕ್ಷಣ ಸಂಸ್ಥೆಯನ್ನು ಸಂದರ್ಶಿಸಬೇಕೆಂದು ಸೂಚಿಸಿದ್ದರು. ಆದರೆ ಹಲವಾರು ಅನಾನುಕೂಲತೆಯ ಮೂಲಕ ನನಗೆ ಬರುವದಾಗಲಿಲ್ಲ.

ಒಂದು ದಿನದಮಟ್ಟಿಗೆ ಎಂದು ನಾನೀಗ ಇಲ್ಲಿಗೆ ಬಂದಿರುವೆ. ನಾನು ನಿಮ್ಮ ಅಡಿಗೆ ಮನೆಯನ್ನು ನೋಡಿದ್ದಲ್ಲದೆ ನೀವು ನಿಮ್ಮ ಆಹಾರ ಧಾನ್ಯಗಳನ್ನು ಕಾಯಿಪಲ್ಲೆ ಹಣ್ಣುಗಳನ್ನು ಬೆಳೆಯುವ ಹೊಲಗಳನ್ನೂ ನೋಡಿದೆನು. ನಿಮ್ಮ ಪ್ರಾರ್ಥನೆಯಲ್ಲಿಯೂ ಭಾಗವಹಿಸಿರುವೆನು ಮತ್ತು ನನಗೆ ತೋರಿಸಿದ ಹಳ್ಳಿಯ ನೃತ್ಯ ಮತ್ತು ಹಾಡುಗಳನ್ನು ನೋಡಿ ಸಂತೋಷಪಟ್ಟೆನು. ಚೀನದಲ್ಲಿ ವಿಶೇಷತಃ ಬುದ್ಧ ಮತಾನುಯಾಯಿಗಳಲ್ಲಿ ಸಾಂಸ್ಕೃತಿಕ ಜೀವನದಲ್ಲಿ ಆದ ಪ್ರಗತಿಯೂ ಇದೇ ರೀತಿಯದಾಗಿದೆ. ನಾವು ಹಲವು ಸಲ ಸ್ನೇಹಿತರು ಮತ್ತು ಕುಟುಂಬದಲ್ಲಿಯ ಇತರ ಜನರ ಕೂಡ-ಗುಡಿಗಳಿಗೆ ಹೋಗುವದುಂಟು. ನಮ್ಮ ಆಚಾರ್ಯವರ್ಗದವರು ಮತ್ತು ಪೂಜಾರಿಗಳು ವಿಹಾರಗಳಲ್ಲಿ ಇರುತಿರುವರು. ಅವರು ಶಾಕಾಹಾರಿಗಳು ತಮ್ಮ ಹೊಲಗಳನ್ನು ಅವರು ತಾವೇ ಉತ್ತು ಬೆಳೆಯನ್ನು ತೆಗೆದುಕೊಳ್ಳುವರು ಮತ್ತು ನೀವು ಇಲ್ಲಿ ನಡೆಸುವಂತೆ ಅದರ ಮೇಲೆಯೆ ಉಪಜೀವನ ಸಾಗಿಸುವರು. ನಮ್ಮ ದೇಶದಲ್ಲಿ ಗುಡಿಗಳಲ್ಲಿಯ ಪೂಜಾರಿಗಳಲ್ಲಿ ಮಾತ್ರ ನಾವಿದನ್ನು ಕಾಣಬಲ್ಲೆವು. ಆದರೆ ಇಲ್ಲಿ ಈ ಮನೋಹರವಾದ ಸ್ಥಳದಲ್ಲಿ ಜನಾಂಗದ ಪ್ರತಿಯೊಬ್ಬ ಸದಸ್ಯನು ಅದೇ ರೀತಿ ಬಾಳುವೆ ಸಾಗಿಸುವನು. ಇದೊಂದು ಬಗೆಯ ಪವಿತ್ರ ಧ್ಯೇಯವೆಂದು ತಿಳಿಯಲಾಗುತ್ತದೆ.

ನೀವು ದೇಶದಲ್ಲಿ ಪ್ರಚುರ ಪಡಿಸಿದ ಈ ಸಾಂಘಿಕ ಜೀವನದ ಧ್ಯೇಯವನ್ನು ಈಗಾಗಲೆ ಸಾರಿದ್ದು ಅದರ ಕಾರ್ಯಪ್ರಗತಿಯ ಪರಿಣಾಮವನ್ನು ಹಿಂದುಸ್ತಾನಕ್ಕಷ್ಟೇ ಅಲ್ಲ, ಇಡೀ ಜಗತ್ತಿಗೆ ತಿಳಿಸಿಕೊಡಬೇಕಾಗಿದೆ. ಬುದ್ಧ ವಿಹಾರಗಳಲ್ಲಿ ಬುದ್ಧ ಭಿಕ್ಷುಗಳು ೫೦ ಜನರ ಕೆಲವು ಸಲ ೫೦೦ ಜನರೊಡಗೂಡಿದ ಸಾಂಘಿಕಜೀವನವನ್ನು ನಡೆಸುವದನ್ನು ಬಿಟ್ಟರೆ ಉಳಿದ ಯಾವದೊಂದು ಶಿಕ್ಷಣ ಸಂಸ್ಥೆಯಾಗಲಿ ಸರಕಾರವಾಗಲಿ ಇಂಥ ಸಂಸ್ಥೆಯನ್ನು ಪ್ರಗತಿಪರವಾಗಿ ನಡೆಯಿಸಿಕೊಂಡು ಬಂದಿರುವದಿಲ್ಲ ಎಂದು ನನಗೆನಿಸುತ್ತದೆ. ನನ್ನ ಪ್ರಾಂತದಲ್ಲಿ ಸದಾಕಾಲ ೨೫೦ ರಿಂದ ೫೦೦ ರ ವರೆಗೆ ಭಿಕ್ಷುಗಳು ಇದ್ದುದುಂಟು. ಅವರು ಮಾತ್ರ ಇಂಥ ಸಾಂಘಿಕ ಜೀವನವನ್ನು ನಡೆಸುತ್ತಿರುವರು ನಿಮ್ಮ ಮೂಲಶಿಕ್ಷಣ ಪೂರ್ವಕಾಲೀನ ಶಿಕ್ಷಣ, ಮೂಲ ಶಿಕ್ಷಣ ಮತ್ತು ಮೂಲಶಿಕ್ಷಣೋತ್ತರ ಶಿಕ್ಷಣಗಳಲ್ಲಿ ಜೀವನದ ಹೊಸ ಬೆಳಕನ್ನು ಕೊಡುವದಕ್ಕಾಗಿ ಸ್ವಾವಲಂಬಿ ಜೀವನವನ್ನು ನಡೆಸಿಕೊಂಡು ಹೋಗಬೇಕೆನ್ನುವ ಶಿಕ್ಷಣ ಕೊಡುತಿರುವಂತೆ ಅಲ್ಲಿಯೂ ಆ ಬಗೆಯ ವಿಶುದ್ಧ ಸ್ವಾವಲಂಬಿ ಜೀವನದ ರೀತಿ ನೀತಿಗಳನ್ನು ಕಲಿಸುತಿರುವರು.

ಮೂಲಶಿಕ್ಷಣದ ಅಪರನಾಮವಾದ ಮೂಲಾಧಾರ ಶಿಕ್ಷಣದ ಸಂಬಂಧದಲ್ಲಿ ಏನಾದರೂ ಮಾಡಬೇಕೆಂದು ಯುನೆಸ್ಕೊ ಬಯಸುತಿದೆಂಬುದು ನಿಮಗೆ ಗೊತ್ತಿರಬಹುದು. ಮೂಲಶಿಕ್ಷಣವನ್ನು ಹಿಂದುಸ್ತಾನದಿಂದ ಗಾಂಧೀಜಿಯಿಂದಲೆ ಯುನೆಸ್ಕೊ ತೆಗೆದುಕೊಳ್ಳಬೇಕಾಗುವದು. ನಮ್ಮ ಮೂಲಾಧಾರ ಶಿಕ್ಷಣವು ಹಿಂದುಸ್ತಾನದಲ್ಲಿಯ ಮೂಲಶಿಕ್ಷಣದಂತೆಯೆ ಇದೆಯೆಂದು ಹೇಳಲಾಗುವದು. ಪೂರ್ವಅಫ್ರಿಕೆಯಲ್ಲಿಒಂದು ಇನ್ನೊಂದು ಚೀನದಲ್ಲಿಹೀಗೆ ಎರಡು ಯೋಜನೆಗಳಿವೆ. ಸದ್ಯದ ಪರಿಸ್ಥಿತಿಯಲ್ಲಿನಾವು ನಾಂಕಿಂಗದಲ್ಲಿ ಇದರ ಪ್ರಯೋಗವನ್ನು ಮಾಡಿ ನೋಡಿದ್ದುಂಟು. ಅಮೇರಿಕೆಯ ಅಧ್ಯಕ್ಷರಾದ ಟ್ರೂಮನ್ನರು ಹೊರಡಿಸಿದ ಪ್ರಕಟನೆಯನ್ವಯ ಹೆಚ್ಚು ಅಭಿವೃದ್ಧಿ ಹೊಂದದ ಭಾಗಗಳಲ್ಲಿ ಔದ್ಯಮಿಕ ಅಭಿವೃದ್ಧಿಯನ್ನು ಮಾಡಲು ಯುನೆಸ್ಕೊದ ಡಾಯರೆಕ್ಟರ ಜನರಲ್‌ರು ಸಿದ್ಧಪಡಿಸಿದಕಾಗದಪತ್ರಗಳ ಆಧಾರದಮೇಲೆನಾನು ಇದನ್ನು ಹೇಳುತ್ತೇನೆ. ಮೂಲಶಿಕ್ಷಣ ಮತ್ತು ಮೂಲಾಧಾರ ಶಿಕ್ಷಣದಲ್ಲಿ ಸಂಶೋಧನೆ ನಡೆಸಲು ೧೦೦,೦೦೦,೦೦೦ ಅಮೇರಿಕನ್ ಡಾಲರುಗಳಷ್ಟು ಸಹಾಯವನ್ನು ಯುನೆಸ್ಕೊ ಮಾಡಬೇಕೆಂದು ಅವರ ಯೋಜನೆ ಇದ್ದಿತು. ನಿಮ್ಮ ಚಟುವಟಿಕೆಗಳನ್ನು ನೋಡಿದ ಬಳಿಕ ಯುನೆಸ್ಕೋದವರು ನಿಮ್ಮಲ್ಲಿಗೆ ಯಾರನ್ನಾದರೂ ಕಳಿಸಿ ಹೆಚ್ಚುಕಾಲ ಇಲ್ಲಿ ಕಳೆದು ನಮ್ಮ ಮುಂದಿನ ಕಾರ್ಯಕ್ಕೆ ಉಪಯೋಗ ಬೀಳುವಂಥದನ್ನು ಕಲಿತುಕೊಂಡು ಹೋಗಬೇಕಾಗಿತ್ತು. ಎಂದು ನನಗೆ ಅನಿಸುತ್ತದೆ.

ಚೀನದಲ್ಲಿ ಮೂರು ವರುಷ ನಾನು ಶಿಕ್ಷಣ ಮಂತ್ರಿಯಾಗಿದ್ದೆ. ಮುಂದೆ ಏಳು ವರುಷ ಶಿಕ್ಷಣ ಶಾಖೆಯ ಕಮೀಶನರನಾಗಿದ್ದೆ. ಈಗ ಯುನೆಸ್ಕೋದ ಏಶಿಯ ಮತ್ತು ದೂರ ಪೂರ್ವದ ಸಲಹೆಗಾರನಾಗಿರುತ್ತೇನೆ. ನಿಮ್ಮ ಪಸಾಹತಿಗೆ ಭೆಟ್ಟಿಕೊಟ್ಟ ನಂತರ ಈ ದಿಸೆಯಲ್ಲಿಯೆ ಯುನೆಸ್ಕೊ ಏನಾದರೂ ಕಾರ್ಯ ಮಾಡಲು ಪ್ರಯತ್ನಿಸುವದೆಂದು ಹೇಳಲು ನನಗೆ ಸಂತೋಷ. ನಿಮ್ಮ ಕಾರ್ಯ ಕಲಾಪಗಳನ್ನು ಈಕ್ಷಿಸಲು ಹೆಚ್ಚುಜನರನ್ನುಇಲ್ಲಿಗೆಕಳಿಸಲಿಕ್ಕೆಬೇಕು, ನಿಮಗೆ ಬೇಕಾದ ಯಾವದೇ ಬಗೆಯ ಸಹಾಯವನ್ನು ಕೊಡಲು ನಾವು ಸಿದ್ಧರಿರುವೆವು. ನೀವು ತೆಗೆದುಕೊಳ್ಳಲು ಬಯಸುವ ಸಾಹಿತ್ಯ ರೇಡಿಯೊ ಮೊದಲಾದ ಸಹಾಯವನ್ನೂ ಕೊಡಬಲ್ಲೆವು. ಯುನೆಸ್ಕೋದ ಡಾಯರೆಕ್ಟರ ಜನರಲ್‌ರೊಡನೆ ಮಾತಾಡಿ ನಿಮಗೆ ಸಹಾಯ ಮಾಡಬಲ್ಲೆನೆಂದು ನಾನು ಆಶ್ವಾಸಿಸುತ್ತೇನೆ. ಹಿಂದುಸ್ತಾನಕ್ಕಾಗಿ ವಿಶೇಷತಃ ಈ ಸ್ಥಳಕ್ಕಾಗಿ ಮಾಡಬೇಕಾದ ಸೇವೆ ಬಹಳಿದೆ.

ಹಿಂದುಸ್ತಾನದ ಬೇರೆ ಹಳ್ಳಿಯಲ್ಲಿ ಅಥವಾ ಏಶಿಯದ ರಾಷ್ಟ್ರಗಳಲ್ಲಿ ಬೇರೆ ಸ್ಥಳಗಳಲ್ಲಿ ಇದನ್ನು ಹೇಗೆ ಪ್ರಸಾರ ಮಾಡಬೇಕು? ಒಳ್ಳೆ ಕಾರ್ಯಕರ್ತರು, ನಿಷ್ಠೆ ಮತ್ತು ಮುಂಜಾವಿನಿಂದ ರಾತ್ರಿ ವರೆಗೆ ಒಂದೇ ಸವನೆ ಕಾರ್ಯ ಮಾಡುವ ಕಾರ್ಯಕರ್ತರು ನಿಮಗೆ ದೊರೆತುದಕ್ಕಾಗಿ ನೀವು ಭಾಗ್ಯಶಾಲಿಗಳು. ಈ ಬಗೆಯ ಕಾರ್ಯ ಮಾಡಲು ಒಳ್ಳೆ ಶಿಕ್ಷಕರು ದೊರೆತದ್ದೂ ನಿಮ್ಮ ಭಾಗ್ಯ. ಹಿಂದುಸ್ತಾನ ಚೀನ ಮತ್ತು ಏಶಿಯದ ಇತರ ರಾಷ್ಟ್ರಗಳಲ್ಲಿನ ನನ್ನ ಸಂಚಾರದಲ್ಲಿ ಶಿಕ್ಷಣ ವಿಷಯದಲ್ಲಿ ನೋಡಿದ ಮಹತ್ವದ ಪ್ರಗತಿಯೆಂದರೆ ಈ ಮೂಲ ಶಿಕ್ಷಣದ ಪ್ರಯೋಗವು ಹೆಚ್ಚು ಅವಕಾಶ ಸೌಕರ್ಯ ಮತ್ತು ಸಾಧನ ಸಾಮಗ್ರಿಗಳು ದೊರೆತಾಗ ನೀವು ನಿಮ್ಮ ಕಾರ್ಯವನ್ನು ಜಗತ್ತಿನ ಮುಂದೆ ಇಟ್ಟು ಉಳಿದ ರಾಷ್ಟ್ರಗಳೊಡನೆ ಸಂಬಂಧ ಬೆಳಿಸಿಕೊಳ್ಳಬಲ್ಲರೆಂದು ಆಶಿಸುತ್ತೇನೆ. ನಿಮ್ಮ ಸಮಸ್ಯೆಗಳ ಪರಿಹಾರ ಸುಲಭವಾಗಬಹುದು. ಹೆಚ್ಚು ಕಾಲ ಇರಲು ಆಗದ್ದಕ್ಕೆ ನಾನು ವಿಷಾದಿಸುತ್ತೇನೆ. ಇನ್ನೊಮ್ಮೆ ಇಲ್ಲಿಗೆ ಬಂದು ಹೆಚ್ಚು ಅವಧಿಯ ವರೆಗೆ ನಿಮ್ಮೊಡನೆ ಇರುವ ಆಸೆಯಿಂದ ಮರಳುತ್ತೇನೆ.

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

ತಾ. ೧೨

ಶೇರ ಪೇಟೆಯಲ್ಲಿ ಇಳಿಮುಖ ಧೋರಣೆ ನಿಂತು ಹೋಗಿದ್ದರೂ ಏರಿಕೆಯ ಲಕ್ಷಣ ಇನ್ನೂ ಕಾಣುತ್ತ ಇಲ್ಲ. ಇಂದಿನ ಕೊನೆಯ ದರಗಳು ಇಂತಿದ್ದವು.

ಕೋಹಿನೂರು	೨೮೨-೮-೦
ಮುಂಬಯಿ ಡಾಯಿಂಗ್	೯೮೧-೪-೦
ಸ್ವದೇಶಿ	೨೯೬-೮-೦
ಗೋಕಾಕ	೨೬೯-೦-೦
ಸೆಂಚುರಿ	೨೬೦-೦-೦
ಸಿಂಪ್ಲೆಕ್ಸ	೧೭೩-೦-೦
ಟಾಟಾ ಸ್ಟೀಲ ಡೆಫರ್ಡ	೧೩೬೬-೪-೦
ಇಂಡಿಯನ್ ಅಯರ್ನ್	೨೨-೧೩-೦
ಸೆಂಟ್ರಲ ಬ್ಯಾಂಕ್	೮೨-೧೨-೦
ಇಂಪೀರಿಯಲ್‌ಬ್ಯಾಂಕ್(ಪೂರ್ಣ)	೧೮೦೨-೮-೦
ಬ್ಯಾಂಕ ಅಫ್ ಇಂಡಿಯಾ	೧೮೩-೦-೦

ಚಿನ್ನ ಬೆಳ್ಳಿ

ಚಿನ್ನಕ್ಕೆ ಬೇಡಿಕೆ ಹೆಚ್ಚಾಗಿದ್ದು ಅದರ ದರಗಳು ಬಹಳ ಏರಿವೆ. ಆದರೆ ಬೆಳ್ಳಿಗೆ ಅಷ್ಟು ಬೆಂಬಲವಿಲ್ಲ. ಮುಂದಿಗಳ ಆಕ್ರಮಣದೇ ಬೆಳ್ಳಿ ಪೇಟೆಯಲ್ಲಿ ಬಲವಾಗಿದೆ. ಇಂದಿನ ದರಗಳು ಇಂತಿದ್ದವು.

ತಯಾರಿ ಚಿನ್ನ	೧೧೬-೬-೦
ವಾಯದಾ ,,	೧೧೫-೬-೦
ತಯಾರಿ ಬೆಳ್ಳಿ	೧೮೨-೪-೦
ವಾಯದಾ ,,	೧೮೨-೪-೦

ಅರಳೆ

ಅಧಿಕೃತ ವ್ಯಾಪಾರವಿಲ್ಲ. ಅನಧಿಕೃತ ದರಗಳೂ ಬಹಳ ವ್ಯತ್ಯಾಸ ಹೊಂದಿಲ್ಲ. ನಿನ್ನಿನ

ಮೇ	೬೨೬-೦-೦
ಜುಲೈ	೬೨೪-೦-೦
ಸೆಪ್ಟೆಂಬರ	೬೨೩-೦-೦

ಎಣ್ಣೆಕಾಳು

ಶೇಂಗಾ	೧೮೯-೬-೦
ಅಗಸೆ (ತಯಾರಿ)	೩೨-೮-೦
,, ವಾಯದಾ	೩೧-೧೪-೦
,, ಎಣ್ಣೆ	೧೯-೦-೦
ಔಡಲ	೨೮-೦-೦

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ)

ತಾ. ೧೨

ಜ. ಹೊಸ ಹತ್ತಿ (ನಗಕ್ಕೆ)		೪೫೦-೫೨೫
ಅಪ್ಲಂಡ ಹತ್ತಿ		೪೮೦-೫೫೦
ಜ. ಅರಳಿ		೩೨೦-೩೪೫
ಡಬಲ್ ರೋಲ್ ,,	,,	೩೦೫-೩೧೮
ಕುಸುಬಿ (ಬ. ಮಣಕ್ಕೆ)		೧೫-೦-೦
ಅಗಸಿ	(ಚೀಲಕ್ಕೆ) —	೪೨-೪೪
ಔಡಲ	,,	೩೭-೩೮
ಜ. ಹೆಸರು	,, ೪೨-೧೦-೮	೪೬-೮-೦
ಕರಿ ಎಳ್ಳು	,,	೬೪-೬೬
ಬಿಳಿ ಎಳ್ಳು	,,	೭೩
ಕಡಲೆ	,, ೫೫.೦-೦ ೫೬	೧೪-೨
ಜ. ತೊಗರಿ	,,	೩೦-೩೨
ಹುರಳಿ	,,	೩೪-೩೫
ಕೆಂ. ಅಲಸಂದಿ	,,	೫೫-೫೬
ಬಿ. ಅಲಸಂದಿ	,,	೫೬
ಶೇಂಗಾ (ಹೇರು)		೪೬-೫೦
ಶೇಂಗಾ ಕಾಳು		೬೮-೬೯

ಯಾರಿಗೂ ಕಾದಿಟ್ಟ ಸ್ಥಳಗಳಿಲ್ಲ

ಭಾರತದ ಘಟನಾ ಸಮಿತಿಯ ಅಲ್ಪ ಸಂಖ್ಯ ಸಲಹೆ ಸಮಿತಿಯ ಈಚಿಗಿನ ಸಭೆಯಲ್ಲಿ ಶೀಖರಲ್ಲಿನ ಮತ್ತು ಇತರ ಪರಿಶಿಷ್ಟ (ಹಿಂದುಳಿದ) ವರ್ಗಗಳಿಗೆ ಮಾತ್ರ ಶಾಸನ ಸಭೆಗಳಲ್ಲಿ ಸ್ಥಳ ಕಾದಿಂಸಬೇಕೆಂದು ನಿರ್ಣಯಿಸಿದೆ. ಕೇಂದ್ರ ಮತ್ತು ಪ್ರಾಂತಿಕ ಶಾಸನ ಸಭೆಗಳಿಗೆ ಸಂಯುಕ್ತ ಮತದಾರ ಸಂಘಗಳಾದ ಚುನಾವಣೆ ನಡೆಯಬೇಕು. ಆದರೆ ಸದ್ಯಕ್ಕೆ ಕೆಲ ವರ್ಷಗಳ ವರೆಗೆ ಮುಸ್ಲಿಮರಿಗೆ, ಕೆಲ ಪ್ರಾಂತಗಳಲ್ಲಿ ಕ್ರಿಶ್ಚನ್ನರಿಗೆ, ಹಾಗು ಹರಿಜನಾದಿ ಪರಿಶಿಷ್ಟ ವರ್ಗಗಳಿಗೆ ಸ್ಥಳಗಳನ್ನು ಕಾಯ್ದಿರಿಸಬೇಕೆಂದು ೧೯೪೭ ರಲ್ಲಿ ಗೊತ್ತು ಮಾಡಲ್ಪಟ್ಟಿತ್ತು. ಆದರೆ ಈ ಪ್ರಕಾರ ಜಾತೀಯ ತಳಹದಿಯಲ್ಲಿ ಸ್ಥಳಗಳನ್ನು ಕಾಯ್ದಿಡಲೇಬಾರದೆಂದೂ ಹಿಂದುಳಿದವರಿಗೆ ಮಾತ್ರ ಇರಬೇಕೆಂದೂ ಸಮಿತಿ ನಿರ್ಣಯಿಸಿದೆ.

ಕರ್ನಾಟಕದಲ್ಲಿ

ಧಾರವಾಡ

ಹುಬ್ಬಳ್ಳಿಯಿಂದ ತಿರುಪತಿಗೆ ಹೊರಟಿದ್ದ ಕಾರೊಂದು ಭೀಮಾನದಿ ಹತ್ತಿರ ಅಪಘಾತಕ್ಕೀಡಾದ್ದರಿಂದ ಇಬ್ಬರು ಸತ್ತಿದ್ದು ಐದು ಜನರಿಗೆ ಗಾಯಗಳಾಗಿವೆಯೆಂದು ತಿಳಿಯುತ್ತದೆ.

ಅಮರಗೋಳದಲ್ಲಿ ಕಳೆದ ವರುಷ ಸಂಸ್ಥಾಪಿತವಾಗಿದ್ದ ಕಸ್ತೂರಬಾ ವಿದ್ಯಾಲಯದ ಮೊದಲ ವರ್ಷದ ಮುಕ್ತಾಯ ಸಮಾರಂಭವು ಕಳೆದ ೨ ನೇ ತಾರೀಕಿನ ದಿನ ಜರುಗಿತು. ಇಲ್ಲಿ ಶಿಕ್ಷಣ ಪಡೆದವರಲ್ಲಿ ಕೆಲವರು ಮುಂದಿನ ಶಿಕ್ಷಣಕ್ಕಾಗಿ ಹೋಗುವವರಿದ್ದು ಉಳಿದವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಗ್ರಾಮಸೇವಿಕೆಯರ ಕೆಲಸಕ್ಕಾಗಿ ಹೋಗಲಿರುವರು.

ಧಾರವಾಡ ಕೆ. ಈ. ಬೋರ್ಡಿನ ಕಾಲೇಜಿನಲ್ಲಿ ಶ್ರೀ ಹುನಗುಂದ ಎನ್. ಎಂ. ಅಡ್ವೋಕೇಟ ಮುಂಬಯಿ ಇವರು ತಮ್ಮ ತಾಯಿಯವರ ಸ್ಮರಣಾರ್ಥ ೩೦ ರೂಪಾಯಿಗಳ ವಾರ್ಷಿಕ ಬಹುಮಾನವನ್ನು ಮತ್ತು ಡಾ. ಆರ್. ಬಿ. ಇನಾಮದಾರ ಬೇಪೂರ ಇವರು ಎಫ್. ವಾಯ. ಸಾಯನ್ಸ ಪರೀಕ್ಷೆಯಲ್ಲಿ ಹೆಚ್ಚು ಗುಣ ಪಡೆದವರಿಗೆ ೨೫ ರೂಪಾಯಿ ಬಹುಮಾನ ಕೊಡಲೊಪ್ಪಿರುವರು.

ಹುಬ್ಬಳ್ಳಿಯಲ್ಲಿ ೯ ನೇ ತಾರೀಕು ಮಧ್ಯಾನ್ಹ ೨-೩೦ ಗಂಟೆ ಸುಮಾರಿಗೆ ಪುಣೆಯ ಮೇಲ ಗಾಡಿಯು ರೇಲ್ವೆ ಸ್ಟೇಶನ ಬಿಟ್ಟು ಮುಂದಕ್ಕೆ ಹೋದ ನಂತರ ರುಂಡ ಬೇರ್ಪಡಿಸಲಾಗಿದ್ದ ೧೫ ವರುಷದ ಬಾಲಕನ ಮೃತ ದೇಹವೊಂದು ಕಣ್ಣಿಗೆ ಬಿದ್ದಿತು. ಇದು ಅಪಮೃತ್ಯುವಾಗಿರದೆ ಆತ್ಮಹತ್ಯೆಯ ಪ್ರಯತ್ನವಿರಬೇಕೆಂದು ಊಹಿಸಲಾಗುತ್ತಿದೆ.

ಘಟನಾ ಸಮಿತಿಯ ಸದಸ್ಯರಾದ ಶೇಠ ಗೋವಿಂದದಾಸರು ಕಳೆದ ವಾರ ಧಾರವಾಡ ಹುಬ್ಬಳ್ಳಿಗಳಲ್ಲಿ ಸಂಚರಿಸಿ ಹಿಂದೀ ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರಮಾಣಪತ್ರಗಳನ್ನು ಹಂಚಿದರು. ಹುಬ್ಬಳ್ಳಿಯಲ್ಲಿ ಸಂಯುಕ್ತ ಕರ್ನಾಟಕ ಕಚೇರಿಯಲ್ಲಿ ಪತ್ರಿಕಾ ಪರಿಷತ್ತನ್ನು ಸೇರಿಸಿ ಹಿಂದೀ ಭಾಷೆಯ ಭವಿತವ್ಯದ ಬಗ್ಗೆ ವಿಚಾರಪರಿಪ್ಲುತ ಭಾಷಣ ಮಾಡಿ ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಟ್ಟರು.

ಬೆಳಗಾವಿ

ಡೆಕ್ಕನ್ ಎಜ್ಯುಕೇಶನ ಸೊಸಾಯಿಟಿಯವರು ಸಾಂಗಲಿ ವಿಲಿಂಗಡನ ಕಾಲೇಜಿನ ಪ್ರಿನ್ಸಿಪಾಲ ಪಂಡಿತರ ಅವಧಿಯನ್ನು ಮತ್ತೆ ೫ ವರುಷ ಬೆಳೆಸಿದ್ದಾರೆ. ಪ್ರೊ. ಎಸ್. ವಿ. ಕೋಗೇಕರರು ಪುಣೆಯಲ್ಲಿಯ ಬೃಹನ್ಮಹಾರಾಷ್ಟ್ರ ಕಾಮರ್ಸ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟಿರುವರು.

ಕಣ್ಣಿನ ಡಾಕ್ಟರರಾದ ಶ್ರೀ ಎಂ. ಸಿ. ಮೋದಿಯವರು ಅಮೇರಿಕೆಗೆ ಹೋಗಲಿರುವದರಿಂದ ಅವರ ಗೆಳೆಯರು ಅವರನ್ನು ಹೃತ್ಪೂರ್ವಕವಾಗಿ ಬೀಳ್ಕೊಡಹತ್ತಿದ್ದಾರೆ.

ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಶಾಖೆಯ ಮಂತ್ರಿಗಳಾದ ಮಾನ್ಯ ದಿವಾಕರ ರಂಗರಾಯರು ೧೦ ನೇ ತಾರೀಕು ಮುಂಜಾವೆ ಬೆಳಗಾವಿಗೆ ಬಂದರು. ಬಂದ ಕೂಡಲೆ ಶ್ರೀ ಬೆಳವಿಯವರ ಮನೆಯಲ್ಲಿ ಲೋಕಮಾನ್ಯ ತಿಲಕ ವಿಶ್ವಾಸನಿಧಿಯ ಸಭೆಯನ್ನು ಮುಗಿಸಿಕೊಂಡು ಶ್ರೀ ದಾತಾರ ಬಳವಂತರಾಯರಲ್ಲಿ ಊಟ ಉಪಚಾರ ತೀರಿಸಿಕೊಂಡು ಕಾಂಗ್ರೆಸ ಕೆಲಸಗಾರರ ಸಭೆಯಲ್ಲಿ ಭಾಗ ವಹಿಸಿದರು. ಅನಂತರ ಮಾರುತಿ ಗುಡಿಯಲ್ಲಿ ಮಹಿಳಾ ಮಂಡಲವನ್ನು ಸಂದರ್ಶಿಸಿದರು.

ಬೆಳಗಾವಿ ನಗರಸಭೆಯವರು ಮಾನ್ಯ ದಿವಾಕರ ರಂಗರಾಯರಿಗೆ ೧೦ ನೇ ತಾರೀಕಿಗೆ ಮಾನಪತ್ರವನ್ನು ಸಮರ್ಪಿಸಿದರು. ಶ್ರೀ ಶಿಳವೆ ಇವರು ಮಾನಪತ್ರವನ್ನೋದಿದರು. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತ ಮಂತ್ರಿತ್ವದ ಈ ಮರ್ಯಾದೆಯು ವೈಯಕ್ತಿಕವಾಗಿರದೆ ಕರ್ನಾಟಕದ್ದಾಗಿದೆಯೆಂದು ಹೇಳಿ ನಗರಸಭೆಯವರು ಸುದ್ದಿ ಮತ್ತು ಆಕಾಶವಾಣಿ ಶಾಖೆಯ ಹೆಚ್ಚಿನ ಉಪಯೋಗ ತೆಗೆದುಕೊಳ್ಳಬೇಕೆಂದು ಕೇಳಿಕೊಂಡರು. ಶ್ರೀ ಗಂಗಾಧರರಾವ ದೇಶಪಾಂಡೆಯವರಲ್ಲಿ ಅಲ್ಪೋಪಹಾರ ತೀರಿಸಿಕೊಂಡು ಮೇಲ ಗಾಡಿಯಿಂದ ಅವರು ಪುಣೆಗೆ ತೆರಳಿದರು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಆಹಾರ ಸಮಿತಿಯ ಸಭೆಯು ದಿನಾಂಕ ೨ ರಂದು ಜಿಲ್ಲಾ ಕಲೆಕ್ಟರ ಎಚ್. ಆರ್. ಕೈಲಾಸರ ಅಧ್ಯಕ್ಷತೆಯಲ್ಲಿ ಜರಗಿದಾಗ ಧಾನ್ಯಗಳನ್ನು ಸಂಗ್ರಹಿಸುವಾಗ ರೈತರಲ್ಲಿ ಗೇಣಿ ಮತ್ತು ಕೃಷಿಯ ವೆಚ್ಚಕ್ಕೆ ಉಳಿಸಬೇಕು. ಅವಲಕ್ಕಿ ಮಾಡುವದಕ್ಕೆ ಲೈಸನ್ಸು ಕೊಡಬೇಕು ಎಂದಿತ್ಯಾದಿ ನಿರ್ಣಯಗಳಾಗಿವೆ. ಆಹಾರ ಸಮಿತಿಯು ಅವಲಕ್ಕಿಗಾಗಿ ೩,೫೦೦ ಟನ್ನುಗಳಷ್ಟು ಭತ್ತವನ್ನು ಕೊಡಲು ಒಪ್ಪಿದೆ. ಈ ಜಿಲ್ಲೆಗೆ ಮುಂದಿನ ಬೆಳೆಯ ವರೆಗೆ ೨೦,೦೦೦ ಟನ್ನುಗಳಷ್ಟು ಆಹಾರಧಾನ್ಯ ಹೊರಗಿನಿಂದ ಬರಬೇಕು ಎಂದೂ ಸಮಿತಿಯು ನಿರ್ಣಯಿಸಿತು.

ಮಂಗಳೂರು ನಗರ ಸಭೆಯು ದಿನಾಂಕ ೩೦ ರಂದು ಜರಗಿದಾಗ ನುಸಿಗಳ ನಿವಾರಣೆಗಾಗಿ ಉಪಯೋಗಿಸುವ ಸಾಹಿತ್ಯಗಳಿಗಾಗಿ ೧೫೦೦೦ ರೂ. ಮಂಜೂರು ಮಾಡಲಾಯ್ತು. ಗಾಂಧೀಜಿಯ ಹೆಸರನ್ನು ಸಾರ್ವಜನಿಕ ಸ್ಥಳಗಳಿಗೆ ಇಡಬಾರದೆಂಬ ಸರಕಾರದ ಸೂಚನೆಯನ್ನು ಮಾನ್ಯಮಾಡಲಾಯ್ತು.

ಕಾರ್ಯರ್ಪಳ್ಳ ಸ್ಮಾರಕ ಸಮಿತಿಯ ಸಭೆಯು ದಿನಾಂಕ ೨೪ ರಂದು ಕಾಸರಗೋಡಿನಲ್ಲಿ ಜರಗಿ ಈ ವರೆಗೆ ಸಂಗ್ರಹಿಸಿದ ಹಣದಲ್ಲಿ ಈಗಾಗಲೇ ಅಚ್ಚು ಹಾಕಿಸಿದ ಜೀವನ ಮತ್ತು ಕಥೆಗಳು ಎಂಬ ಕಥಾಸಂಗ್ರಹದ ಮಾರಾಟದ ಮತ್ತು ಇತರ ವಿಚಾರವಾಗಿ ಚರ್ಚಿಸಿ ನಿರ್ಣಯಿಸಲಾಯ್ತು. ಮಾರಾಟವಾಗಿ ಬಂದ ಹಣವನ್ನು ಅವರ ಕುಟುಂಬದವರಿಗೆ ಕೊಡುವುದೆಂದು ನಿರ್ಧಾರವಾಯಿತು.

ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಪರಿಷತ್ತು ಇದೇ ತಿಂಗಳ ೨೨ ಮತ್ತು ೨೩ ನೇ ದಿನಗಳಲ್ಲಿ ಪಾಣೆಮಂಗಳೂರಲ್ಲಿ ಜರುಗುವದು. ಶ್ರೀಗಳಾದ ಡಿ. ಪಿ. ಕರಮರಕರ್ ಶ್ರೀ ಕೆ. ಎ ವೆಂಕಟರಾಮಯ್ಯ, ಕೆ. ಆರ್. ಕಾರಂತ ಮುಂತಾದವರು ಪರಿಷತ್ತಿನಲ್ಲಿ ಭಾಗ ವಹಿಸುತ್ತಾರೆ.

ಮಂಗಳೂರಲ್ಲಿ ಶ್ರೀ ಶಂಕರ ಜಯಂತಿಯು ಗಣಪತಿ ಹೈಸ್ಕೂಲಿನ ಶಾರದಾಸದನದಲ್ಲಿ ಜರುಗಿತು. ಇಲ್ಲಿನ ಶ್ರೀರಾಮಕೃಷ್ಣಮಠದ ವಿಮಲಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿದ್ದರು. ಶ್ರೀ ಎಂ. ಆರ್. ಭಟ್ಟ ಶ್ರೀ ಕೆ. ಎಸ್. ಕುಬಣೂರಾಯ ಇವರು ಶಂಕರಾಚಾರ್ಯರ ಅದ್ವೈತ ಸಿದ್ಧಾಂತ ಮತ್ತು ಅವರ ಗ್ರಂಥಗಳ ಕುರಿತು ಭಾಷಣವಿತ್ತರು.

ಮೇ ದಿನಾಚರಣೆಯಿಂದ ಶಾಂತಿಭಂಗವಾಗಬಹುದೆಂಬ ನಿರೀಕ್ಷೆಯ ಮೇರೆಗೆ ಮಂಗಳೂರಲ್ಲಿ ದಿನಾಂಕ ೩೦ ರಿಂದ ಒಂದು ವಾರದ ವರೆಗೆ ೧೪೪ ನೇ ಕಲಮು ಜಾರಿಯಲ್ಲಿತ್ತು. ಅಂದು ಬಂಧಿತರಾದ ೧೦ ಮಂದಿ ಕಮ್ಯುನಿಸ್ಟರಿಗೆ ೧೫ ದಿನಗಳ ರಿಮಾಂಡು ಕೊಡಲಾಗಿದೆ.

ಉಡುಪಿ ನಗರ ಸಭೆಯು ದಿನಾಂಕ ೩೦ ರಂದು ಜರಗಿದಾಗ ಮದ್ರಾಸಿನ ಠಕ್ಕರಬಾಪಾ ವಿದ್ಯಾಲಯದ ಸಹಾಯಾರ್ಥವಾಗಿ ೨೫ ರೂ. ಕೊಡುವದೆಂದಾಯಿತು.

ಉಡ್ಪಿ ಮುನ್ಸಿಪಲ್ ಶಾಲೆಗಳ ಸಂಯುಕ್ತ ವಾರ್ಷಿಕ ಸಮಾರಂಭವು ದಿನಾಂಕ ೨೮ ರಿಂದ ೧ ರ ತನಕ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಉಡುಪಿ ಕಾಲೇಜು ಸಮಿತಿಯ ಸಭೆಯು ದಿನಾಂಕ ೩ ರಂದು ಡಾ॥ ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜು ತರಗತಿಗಳನ್ನು ತೆರೆಯಲು ವಿಶ್ವವಿದ್ಯಾಲಯದ ಅನುಮತಿ ದೊರೆಯಲಿರುವದರಿಂದ ಕನ್ನಡ ಪುಸ್ತಕ ಭಾಂಡಾರ, ಸಿಬಂದಿ, ಇತ್ಯಾದಿಗಳ ಕುರಿತು ಚರ್ಚೆ ನಡೆದು ತಕ್ಕ ವ್ಯವಸ್ಥೆ ಮಾಡುವ ನಿರ್ಣಯಗಳಾದವು.

ವಿಜಾಪುರ

ಲೋಣಿಯಲ್ಲಿ ಬಸವಜಯಂತ್ಯುತ್ಸವವು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಧ್ವಜವಂದನೆ, ನಗರ ಸಂಕೀರ್ತನ, ಮೆರವಣಿಗೆ, ಉಪನ್ಯಾಸ ಗೀಗಿಪದ ಮೊದಲಾದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿದವು.

ಜಮಖಂಡಿ ಪೈಕಿ ಹುಂಗಳದಲ್ಲಿ ಬಸವೇಶ್ವರ ಸಮಿತಿಯ ಪರವಾಗಿ ಶ್ರೀ ಬಸವಜಯಂತಿಯು ಆಚರಿಸಲ್ಪಟ್ಟಿತು. ಧ್ವಜವಂದನ ಜಯಂತ್ಯುತ್ಸವ ಲಿಂಗಧಾರಣ ಜೋಗುಳ ಹಾಡು ಮೊದಲಾದವುಗಳಾಗಿ ಸಾಯಂಕಾಲ ನೃತ್ಯ ಗಾಯನ ಮಂಗಲವಾದ್ಯದೊಡನೆ ಭಾವಚಿತ್ರ ಮೆರವಣಿಗೆ ಉಪನ್ಯಾಸ ಮೊದಲಾದವುಗಳಾದವು.

ಹೈದರಾಬಾದ

ಪೋಲಿಸ ಕ್ರಮ ನಡೆದಾಗ ಈರ್ವರು ಮುಸಲ್ಮಾನರನ್ನು ಕೊಂದ ಅಪಾದನೆಗಾಗಿ ಪಟ್ಟಿಯ ಆರು ಆರೋಪಿಗಳಲ್ಲಿ ನಾಲ್ವರಿಗೆ ಮರಣ ದಂಡನೆ ವಿಧಿಸಲ್ಪಟ್ಟು ಇಬ್ಬರು ನಿರ್ದೋಷಿಗಳೆಂದು ಬಿಡುಗಡೆ ಮಾಡಲ್ಪಟ್ಟಿದ್ದರಷ್ಟೆ. ಈ ನ್ಯಾಯಮಂಡಲದಲ್ಲಿಯ ಜೈತಮಂಗಲಕರ ಇವರು ಕೊಲೆಯ ಆರೋಪವನ್ನು ಸರಕಾರ ಪಕ್ಷದವರು ಸಿದ್ಧ ಮಾಡಲಿಲ್ಲವಾದ್ದರಿಂದ ಎಲ್ಲ ಆರೋಪಿಗಳು ನಿರ್ದೋಷಿಗಳೆಂದು ಅಭಿಪ್ರಾಯಪಟ್ಟಿರುವರು. ಆದರೆ ಉಳಿದ ಇಬ್ಬರು ನ್ಯಾಯಾಧೀಶರು ಮೇಲೆ ಹೇಳಿದಂತೆ ನಾಲ್ವರನ್ನು ಅಪಾದಿತರೆಂದೆಣಿಸಿ ಮರಣ ದಂಡನೆ ವಿಧಿಸಿರುವರು. ಮಿಲಿಟರಿ ಗವರ್ನರರು ಕೊನೆಯ ತೀರ್ಪು ಹೇಳುವರು.

ಲಾತೂರ ಕಾಂಗ್ರೆಸ ಕಚೇರಿಯನ್ನು ಝಡತಿ ಮಾಡಿ ಈರ್ವರು ಕಾಂಗ್ರೆಸ ಕಾರ್ಯಕರ್ತರಿಗೆ ಮುಂದಿನ ಆಜ್ಞೆಯಾಗುವ ವರೆಗೆ ಲಾತೂರ ಬಿಟ್ಟು ಹೋಗಬಾರದೆಂದು ಆಜ್ಞೆ ಮಾಡಲಾಗಿದೆಯೆಂದು ತಿಳಿಯುತ್ತದೆ.

ಭದ್ರತಾ ಮಂಡಲದಲ್ಲಿ ಹೈದರಾಬಾದ ಪ್ರಶ್ನೆಗೆ ಮತ್ತೆ ಚಾಲನೆ ಕೊಡಬೇಕೆಂದು ಪಾಕಿಸ್ತಾನದ ವಿದೇಶ ಮಂತ್ರಿ ಸರ್ ಝಫರುಲ್ಲಾ ಖಾನರು ನಡೆಸಿದ ಪ್ರಯತ್ನದಿಂದ ಹಿತಕ್ಕಿಂತ ಅಹಿತವೇ ಹೆಚ್ಚಾಗುವದೆಂದು ಮಿಯಾನ ಸಲೀಮರು ಅಭಿಪ್ರಾಯ ಪಟ್ಟಿರುವರು.

ಹೈದರಾಬಾದದಲ್ಲಿ ಹೊಸ ಬೆಳೆ ಬರುವ ವರೆಗೆ ೨ ಲಕ್ಷ ಟನ್ನ ಆಹಾರ ಧಾನ್ಯಗಳ ಕೊರತೆಯಾಗುವದೆಂದು ಅಲ್ಲಿಯ ಮುಖ್ಯ ಆಡಳಿತಾಧಿಕಾರಿಗಳಾದ ಶ್ರೀ ಬಖಲೆಯವರು ಆಹಾರ ಸಲಹೆ ಸಮಿತಿಯನ್ನು ಉದ್ಘಾಟಿಸುತ್ತ ಹೇಳಿದರು. ಹಿಂದುಸ್ತಾನ ಸರಕಾರದವರು ಒಂದು ಲಕ್ಷ ಟನ್ನ ಕೊಡುವವರಿದ್ದು ಇನ್ನುಳಿದ ಒಂದು ಲಕ್ಷ ಆಹಾರ ಧಾನ್ಯವನ್ನು ಎತ್ತುವಳಿಯಿಂದ ಪಡೆಯತಕ್ಕದ್ದೆಂದೂ ಅವರು ಹೇಳಿದರು.

ಕನ್ನಡ ಸಂಸ್ಥಾನ

ಮೈಸೂರಿನ ರಾಜಮಾತೆಯವರಾದ ಶ್ರೀ ಲಕ್ಷ್ಮೀನಿವಾಸ ಸನ್ನಿಧಾನರವರು ಬದರೀಯಾತ್ರೆಗಾಗಿ ೬ ನೇ ತಾರೀಕು ಮೈಸೂರಿನ ಡೆಕೋಟಾ ವಿಮಾನದಲ್ಲಿ ಸಹರಾಣಪುರಕ್ಕೆ ಪ್ರಯಾಣ ಮಾಡಿದರು.

ಶಿವಮೊಗ್ಗೆಯಲ್ಲಿ ಇದೇ ೧೩ ರಿಂದ ಕೂಡಲಿದ್ದ ಕರ್ನಾಟಕ ಸಾಮ್ಯವಾದಿಗಳ ತೃತೀಯ ಅಧಿವೇಶನವು ಮೇ ೩೦-೩೧ ಕ್ಕೆ ಮುಂದುವರಿಸಲ್ಪಟ್ಟಿದೆ. ಅಂದು ಎಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

ಇಂದು ೧೬ ನೇ ತಾರೀಕು ಮತ್ತು ನಾಳೆ ೧೭ ಕ್ಕೆ ಬೆಂಗಳೂರಲ್ಲಿ ಶ್ರೀ ಸಿ. ಆರ್. ಶ್ರೀನಿವಾಸನ್‌ರ ಅಧ್ಯಕ್ಷತೆಯಲ್ಲಿ ಸೇರುವ ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತನ್ನು ಗವರ್ನರ ಜನರಲ್ ರಾಜಗೋಪಾಲಾಚಾರಿಯವರು ಉದ್ಘಾಟಿಸುವರು.

ಹಿಂದೀ ಪ್ರಮಾಣ ಪತ್ರ ವಿತರಣೋತ್ಸವವು ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರರ ಅಧ್ಯಕ್ಷತೆಯಲ್ಲಿ ಮೈಸೂರಿನ ಪುರಭವನದಲ್ಲಿ ೫ ನೇ ತಾರೀಕು ನಡೆಯಿತು. ಘಟನಾಸಮಿತಿಯ ಸದಸ್ಯರೂ ಹಿಂದೀ ಸಾಹಿತ್ಯಸಮ್ಮೇಲನದ ಅಧ್ಯಕ್ಷರೂ ಆಗಿರುವ ಸೇಟ ಗೋವಿಂದದಾಸರು ಪ್ರಮಾಣ ಪತ್ರಗಳನ್ನು ಹಂಚಿದರು. ಅನಂತರ ಅವರು ತಾವು ಸಂಚಾರ ಕೈಕೊಂಡುದರ ಉದ್ದೇಶವನ್ನು ವಿವರಿಸಿದರು.

ಅ. ಭಾ. ಅಡಿಕೆ ಪರಿಷತ್ತು

ಸಿರಸಿಯಲ್ಲಿ ಯಶಸ್ವಿಯಾಗಿ ಕೊನೆಗಂಡಿತು

ಅಖಿಲ ಭಾರತ ಅಡಿಕೆ ಪರಿಷತ್ತು ಸಿರಸಿಯಲ್ಲಿ ಕಳೆದ ೭ ನೆಯ ತಾರೀಕು ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಶಾಖೆಯ ಮಂತ್ರಿಗಳಾದ ಮಾನ್ಯ ದಿವಾಕರರಿಂದ ಪ್ರಾರಂಭಿಸಲಾಯಿತು. ಮಾನ್ಯ ಮಂತ್ರಿಗಳು ಉತ್ತರ ಕನ್ನಡ ಜಿಲ್ಹೆಯ ಸಂಚಾರವನ್ನು ಮುಗಿಸಿಕೊಂಡು ಅಂದು ಮಧ್ಯಾನ್ಹ ಸಿರಸಿಗೆ ಬಂದರು. ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಮದರಾಸ ಸರಕಾರದ ಹಿಂದಿನ ಮಂತ್ರಿ ಶ್ರೀ ಕೆ. ಆರ್. ಕಾರಂತರು ವಹಿಸಿದ್ದರು. ಸ್ವಾಗತಾಧ್ಯಕ್ಷ ಮೊಟಿನ್‌ಸರ ಹೆಗಡೆಯವರು ಸ್ವಾಗತ ಭಾಷಣಮಾಡಿ ಉದ್ಘಾಟಕರನ್ನೂ ಅಧ್ಯಕ್ಷರನ್ನೂ ಅತಿಥಿಗಳನ್ನೂ ಸ್ವಾಗತಿಸಿ ಮಾನ್ಯ ಮಂತ್ರಿಗಳಿಗೆ ಪರಿಷತ್ತನ್ನು ಪ್ರಾರಂಭಿಸಲು ಬಿನ್ನವಿಸಿಕೊಂಡರು. ಶ್ರೀ ದಿವಾಕರರು ತಮ್ಮ ಭಾಷಣದಲ್ಲಿ ಅಡಿಕೆಯ ವಿವಿಧ ಉಪಯುಕ್ತತೆಗಳನ್ನು ಹೇಳಿ ಆ ವ್ಯವಸಾಯದ ಬಗ್ಗೆ ಇಂತು ಹೇಳಿದರು. ಈ ವ್ಯವಸಾಯದಲ್ಲಿ ೩೦ ಲಕ್ಷಕ್ಕಿಂತ ಹೆಚ್ಚು ಜನ ತೊಡಗಿದೆ. ವರುಷದಲ್ಲಿ ೩೦ ಕೋಟಿ ರೂಪಾಯಿಗಳಷ್ಟು ಉತ್ಪಾದನೆ ಆಗುತ್ತದೆ' ಈ ಉದ್ದಿಮೆಯ ಆರ್ಥಿಕ ವ್ಯವಸ್ಥೆಯಲ್ಲಿ ಸ್ಥಿತ್ಯಂತರಗಳಾದರೆ ೧ ಕೋಟಿ ಜನರ ಜೀವನದ ಮೇಲೆ ಪರಿಣಾಮವಾಗದೆ ಹೋಗದು. ಆದುದರಿಂದ ಈ ಬಗ್ಗೆ ಹೆಚ್ಚು ಜಾಗರೂಕರಾಗಿರಬೇಕು– ಇಲ್ಲಿ ಜನತೆಗೆ ಸಾಕಷ್ಟು ಅಡಿಕೆ ಉತ್ಪಾದಿತವಾಗುವದಿಲ್ಲ. ಹೊರಗಿನಿಂದ ಪ್ರತಿ ವರುಷ ೧೦ ಲಕ್ಷ ಮಣ ಅಡಿಕೆ ಆಯಾತ ಮಾಡಬೇಕಾಗುವದು ಸಿಂಗಾಪುರ ಮಲಯಗಳಲ್ಲಿ ಕಾಡಿನಲ್ಲಿ ಅಡಿಕೆ ಬೆಳೆವುದರಿಂದ ಅಗ್ಗವಾಗಿ ಇಲ್ಲಿ ಮಾರಲು ಶಕ್ಯವಾಗುವದು. ಇಲ್ಲಿಯ ಅಡಿಕೆಯ ಉದ್ಯಮದ ದುರ್ದೈವವು ಇಲ್ಲಿಂದಲೆ ಪ್ರಾರಂಭವಾಗುವದು. ಅಡಿಕೆಯ ಮೇಲೆ ಹೇರಿದ್ದ ಭಾರವಾದ ಕರವನ್ನು ರದ್ದುಗೊಳಿಸಿದ್ದರಿಂದ ನಿಜವಾಗಿ ಈ ಉದ್ದಿಮೆಗೆ ಪರಿಹಾರ ದೊರೆತಂತಾಗಿದೆ. ಈ ಉದ್ದಿಮೆಯಲ್ಲಿಯೂ ಸುಧಾರಣೆಯಾಗಬೇಕು. ವ್ಯವಸಾಯವು ಸಂಘಟಿತ ರೀತಿಯಿಂದ ನಡೆಯತಕ್ಕದ್ದು. ಮಹಾಮಂಡಲದವರು ಉದ್ದಿಮೆಯ ಪ್ರಗತಿಗಾಗಿ ಪ್ರಯತ್ನಿಸಬೇಕು. ಈ ವ್ಯವಸಾಯವು ಅಭಿವೃದ್ಧಿ ಹೊಂದಬೇಕಾದರೆ ಜನತೆಯ ಮೇಲೆಯೂ ಹೊಣೆಯಿದೆಯೆಂದು ಮುಂತಾಗಿ ಅವರು ಹೇಳಿದರು.

ಶ್ರೀ ದಿವಾಕರರ ಭಾಷಣವಾದ ಬಳಿಕ ಶ್ರೀ ಕೋಟ ರಾಮಕೃಷ್ಣ ಕಾರಂತರು ಭಾಷಣ ಮಾಡುತ್ತ ಹೀಗೆ ಹೇಳಿದರು. ಭಾರತ ಮತ್ತು ಪಾಕಿಸ್ತಾನದಲ್ಲಿ ಕೂಡಿ ಸುಮಾರು ನಾಲ್ಕುಲಕ್ಷ ಎಕರೆ ಅಡಿಕೆ ತೋಟಗಳಿವೆ. ಆದರೆ ನಮಗೆ ಬೇಕಾಗುತಿರುವ ಅಡಿಕೆಯ ಅರ್ಧದಷ್ಟು ಮಾತ್ರ ನಾವು ಬೆಳೆಯುತ್ತೇವೆ. ಅನೇಕ ಸಮಸ್ಯೆಗಳು ಅಡಿಕೆಯ ಉತ್ಪಾದಕರನ್ನೆದುರಿಸುತಿವೆ ಅಡಿಕೆಯನ್ನು ಹೆಚ್ಚೆಚ್ಚು ನೀವು ಬೆಳೆಸುತ್ತ ಹೋದರೆ ಹೊರಗಿನಿಂದ ಅಡಿಕೆ ತರಿಸುವದನ್ನು ನಿಲ್ಲಿಸಲಾಗುವದು. ಯೋಗ್ಯ ಯೋಜನೆಯನುಸಾರ ಈ ಕಾರ್ಯ ನಡೆಯತಕ್ಕದ್ದು. ಶ್ರೀ ಕಾರಂತರು ವಿವಿಧ ಸಮಸ್ಯೆಗಳನ್ನು ವಿವೇಚಿಸಿ ವ್ಯವಸಾಯಗಾರರು ಸ್ವಾವಲಂಬಿಗಳಾಗಬೇಕೆಂದು ಕೇಳಿಕೊಂಡರು. ಅನಂತರ ಅವರು ಭಾವೀ ಗಂಡಾಂತರದ ಬಗ್ಗೆ ಹೇಳುತ್ತ ಬರಲಿರುವ ಆರ್ಥಿಕ ಮುಗ್ಗಟ್ಟನ್ನು ಸೂಚಿಸಿ ಆಗ ಹಣದ ಅಡಚಣೆ ವಿಪರೀತವಾಗಲಿರುವದರಿಂದ ಎಲ್ಲರೂ ಜಾಗ್ರತರಾಗಿರಬೇಕೆಂದು ಹೇಳಿ ಮುಂದೆ ಬರುವ ಗಂಡಾಂತರವನ್ನು ಎದುರಿಸಲು ಈಗಿನಿಂದಲೆ ಸಿದ್ಧರಾಗಿರಬೇಕೆಂದು ಕೇಳಿಕೊಂಡರು.

ಪರಿಷತ್ತಿನಲ್ಲಿ ಸ್ವೀಕೃತವಾದ ಮುಖ್ಯ ಗೊತ್ತುವಳಿಗಳಲ್ಲಿ ಅಡಿಕೆ ಸಂಶೋಧನೆ ಸಂಸ್ಥೆಯನ್ನು ಶಿವಮೊಗ್ಗ ಜಿಲ್ಹೆಯಲ್ಲಿ ಸ್ಥಾಪಿಸಬೇಕೆಂದು ಹಿಂದುಸ್ತಾನದ ಗವರ್ನರ ಜನರಲ್‌ರಿಗೆ ವಿನಂತಿಸಿಕೊಳ್ಳಬೇಕು ಏಕೀಕೃತ ಕರ್ನಾಟಕ ಪ್ರಾಂತವನ್ನು ಕೂಡಲೆ ರಚಿಸಬೇಕು. ವಿದೇಶಗಳಿಗೆ ಅಡಿಕೆ ಶಿಷ್ಟಮಂಡಳವೊಂದನ್ನು ಕಳಿಸಬೇಕು, ನಿರ್ಯಾತಕ್ಕಾಗಿ ಸಾರಿಗೆಯ ಅನುಕೂಲತೆಯನ್ನು ಮಾಡಿಕೊಡಬೇಕು ಮೊದಲಾದವಿವೆ.

ಅಧ್ಯಕ್ಷರು ಸಮಯೋಚಿತವಾಗಿ ಸಮಾರೋಪ ಮಾಡಿದ ನಂತರ ಪರಿಷತ್ತು ಕೊನೆಗೊಂಡಿತು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಜ. ದಾ. ಪೊಹರೆಯವರು ಮುದ್ರಿಸಿ ಪ್ರಕಟಿಸಿದರು.